ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 23 | ಮೇ 31–ಜೂನ್ 6, 2021 | ಪುಟ 16 | ರೂ. 10


https://janashakthi.wordpress.com e-mail : js_weekly@yahoo.com



ಹೆಚ್.ಎಸ್.ದೊರೆಸ್ವಾಮಿ

ದಣಿವರಿಯದ ಸ್ವಾತಂತ್ರ್ಯ ಹೋರಾಟಗಾರ

ಮೋದಿ 2.0



ವಿಧ್ವಂಸದ ಯಾತನೆಯ 2 ವರ್ಷಗಳು





ಲಕ್ಷದ್ವೀಪದಲ್ಲಿ ಗುಜರಾತ್ ಮಾದರಿ

ಹಿಂದುತ್ವ + ನವ ಉದಾರವಾದ



ಲಾಕ್‌ಡೌನ್ ಮತ್ತು ಹಳ್ಳಿಗಳಿಗೆ ಕೊರೋನಾ

ಹಳ್ಳಿಗಾಡು ಬಡವರನ್ನು ಕಡೆಗಣಿಸದಿರಿ



ಮೇ 26:ದೇಶಾದ್ಯಂತ ಐತಿಹಾಸಿಕ ಕಾರ್ಯಾಚರಣೆ

ಮೇ 26: "ಕರಾಳ ದಿನ" ದೇಶಾದ್ಯಂತ ಐತಿಹಾಸಿಕ ಕಾರ್ಯಾಚರಣೆ



ದೇಶದ ರಾಜಧಾನಿಯ ಗಡಿಗಳಲ್ಲಿ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ನಡೆಯುತ್ತಿರುವ ರೈತರ ಐತಿಹಾಸಿಕ ಹೋರಾಟಕ್ಕೆ ಮೋದಿ ಸರಕಾರದ ಹೃದಯಹೀನ ಉಪೇಕ್ಷೆಯನ್ನು ಪ್ರತಿಭಟಿಸಿ ಮೇ 26ವನ್ನು 'ಕರಾಳ ದಿನ' ಮತ್ತು ಕಪ್ಪು ಬಾವುಟದ ದಿನವಾಗಿ ಆಚರಿಸಬೇಕು ಎಂಬ ಕರೆಗೆ ದೇಶಾದ್ಯಂತ ಲಕ್ಷಾಂತರ ಜನಗಳಿಂದ ಬೃಹತ್ ಸ್ಪಂದನೆ ಕೂಡ ಇತಿಹಾಸ ನಿರ್ಮಿಸಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಇದರಲ್ಲಿ ಭಾಗವಹಿಸಿದ ಲಕ್ಷಾಂತರ ಜನಗಳನ್ನು ಅಭಿನಂದಿಸುತ್ತ ಹೇಳಿದೆ.

ಮೇ 26 ರಂದು ದಿಲ್ಲಿಯ ಗಡಿಗಳಲ್ಲಿ ರೈತರ ಅಭೂತಪೂರ್ವ ಹೋರಾಟಕ್ಕೆ ಆರು ತಿಂಗಳು ಪೂರ್ಣಗೊಂಡಿವೆ. ಕಾರ್ಮಿಕ ವರ್ಗದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದೊಂದಿಗೆ ರೈತರ ಈ ಹೋರಾಟ ಆರಂಭವಾಗಿತ್ತು. ಮೇ 26, ಈ ರೈತ ಹೋರಾಟವನ್ನು ಉಪೇಕ್ಷಿಸಲು ಶತಪ್ರಯತ್ನ ಮಾಡಿ ವಿಫಲವಾಗಿರುವ ಮೋದಿ ನೇತೃತ್ವದ ಬಿಜೆಪಿ-ಆರೆಸ್ಸೆಸ್ ಸರಕಾರಕ್ಕೆ ಏಳು ವರ್ಷವಾಗಿರುವ ದಿನವೂ ಕೂಡ. ಇದು ಸ್ವಾತಂತ್ರ್ಯಾನಂತರದ ಅತ್ಯಂತ ವಿಧ್ವಂಸಕಾರಿ ಆಳ್ವಿಕೆ ಎಂದು ಎಐಕೆಎಸ್ ವರ್ಣಿಸಿದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಅದರ ಬೆಂಬಲಕ್ಕೆ ನಿಂತಿರುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಮಾತ್ರವಲ್ಲ ಕೃಷಿ ಕೂಲಿಕಾರರ, ಮಹಿಳಾ, ಯುವಜನ ಮತ್ತು ವಿದ್ಯಾರ್ಥಿಗಳ ಸಂಘಟನೆಗಳೂ ಮೇ 26 ನ್ನು ಕಪ್ಪು ಬಾವುಟ ದಿನವಾಗಿ ಆಚರಿಸಬೇಕು ಎಂದು ಕರೆ ನೀಡಿದ್ದವು.

ದೇಶದೆಲ್ಲೆಡೆಯಿಂದ ಬಂದಿರುವ ವರದಿಗಳ ಪ್ರಕಾರ, ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ, ಗುಜರಾತಿನಿಂದ ಗುವಾಹಾಟಿಯ ವರೆಗೆ ಹತ್ತಾರು ಸಾವಿರ ಸ್ಥಳಗಳಲ್ಲಿ ಲಕ್ಷಾಂತರ ಕುಟುಂಬಗಳು ಈ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದಾರೆ, ಹಲವೆಡೆಗಳಲ್ಲಿ ಮೋದಿ ಪ್ರತಿಕೃತಿಗಳ ದಹನವೂ ನಡೆದಿದೆ. ಹಲವೆಡೆಗಳಲ್ಲಿ ಇತರ ಸಣ್ಣ ಉತ್ಪಾದಕರು, ಸಾಂಸ್ಕೃತಿಕ ಕಾರ್ಯಕರ್ತರು, ಬುದ್ಧಿಜೀವಿಗಳು ಮತ್ತಿತರ ಜನವಿಭಾಗಗಳೂ ಇದರಲ್ಲಿ ಭಾಗವಹಿಸಿವೆ.

ಈ ಬೃಹತ್ ಸ್ವರೂಪದ ಜನಸ್ಪಂದನೆ ಮೋದಿ ನೇತೃತ್ವದ ಸರಕಾರದ ವಿರುದ್ಧ, ವಿಶೇಷವಾಗಿ ಕೊವಿಡ್-19 ಸಾಂಕ್ರಾಮಿಕವನ್ನು ಎದುರಿಸುವಲ್ಲಿ ಅದರ ಕ್ರಿಮಿನಲ್ ವಿಫಲತೆ ಮತ್ತು ದಿವಾಳಿಕೋರ ಲಸಿಕೆ ನೀತಿಯ ವಿರುದ್ಧ ಜನಗಳಲ್ಲಿ ತುಂಬಿರುವ ಆಕ್ರೋಶವನ್ನು, ಬಿಂಬಿಸಿದೆ ಎಂದು ಎಐಕೆಎಸ್ ಹೇಳಿದೆ.

ಮೂರು ಕೃಷಿ ಕಾಯ್ದೆಗಳನ್ನು ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡಬೇಕು, ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಹಿಂದಕ್ಕೆ ಪಡೆಯಬೇಕು, ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಬಿಡಿಗಾಸಿಗೆ ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ಮಾರುವುದನ್ನು ನಿಲ್ಲಿಸಬೇಕು ಎಂಬ ಆಗ್ರಹಗಳು ಮತ್ತೊಮ್ಮೆ ದೇಶಾದ್ಯಂತ ಕೇಳಬಂದವು.

ದಿಲ್ಲಿಯ ಎಲ್ಲ ಗಡಿ ಪ್ರದೇಶಗಳಲ್ಲಿ, ಸಿಂಘು, ಟಿಕ್ರಿ, ಗಾಝೀಪುರ, ಶಾಹಜಹಾನ್‌ಪುರ ಮತ್ತು ಪಲ್ವಾಲ್‌ನಲ್ಲಿ ಟ್ರಾಲಿಗಳಲ್ಲಿ ಮತ್ತು ಟೆಂಟ್‌ಗಳಲ್ಲಿ ಕಪ್ಪು ಬಾವುಟಗಳು ಹಾರಾಡಿದವು, ಮೋದಿ ಪ್ರತಿಕೃತಿಗಳ ದಹನ ನಡೆಯಿತು..

ಅಖಿಲ ಭಾರತ ಕಿಸಾನ್ ಸಭಾ ಮತ್ತು ಕೃಷಿಕೂಲಿಕಾರರ ಸಂಘದ ಮುಖ್ಯ ಕಚೇರಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಎಐಕೆಎಸ್‌ನ ಅಧ್ಯಕ್ಷ ಅಶೋಕ ಧವಳೆ, ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್, ಹಣಕಾಸು ಕಾರ್ಯದರ್ಶಿ ಪಿ ಕೃಷ್ಣಪ್ರಸಾದ್, ಸಿಐಟಿಯು ಕಾರ್ಯದರ್ಶಿ ಎ.ಆರ್. ಸಿಂಧು, ಎಐಎಡಬ್ಲ್ಯುಯು ಜಂಟಿ ಕಾರ್ಯದರ್ಶಿ ವಿಕ್ರಮ್‌ಸಿಂಗ್, ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆ, ಎಸ್‌ಎಫ್‌ಐ ಜಂಟಿ ಕಾರ್ಯದರ್ಶಿ ಧಿನೀತ್ ಧೆಂತ ಮತ್ತಿತರರು ಭಾಗವಹಿಸಿದ್ದರು.



ಮೋದಿ ಸರಕಾರ ಇನ್ನೂ ತನ್ನ ನಿರಾಕರಣೆಯ ನಿಲುವನ್ನು ಮುಂದುವರೆಸಿದರೆ, ರೈತರು ಮತ್ತು ಕಾರ್ಮಿಕರು ದೇಶಾದ್ಯಂತ ಇನ್ನಷ್ಟು ಬಲಿಷ್ಠ ಐಕ್ಯತೆಯೊಂದಿಗೆ ಈ ಹೋರಾಟವನ್ನು ತೀವ್ರಗೊಳಿಸುತ್ತಾರೆ, ಸಂಯುಕ್ತ ಕಿಸಾನ್ ಮೋರ್ಚಾ ಈ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುತ್ತದೆ ಎಂದು ಈ ಮುಖಂಡರು ಎಚ್ಚರಿಸಿದ್ದಾರೆ.

ಮೇ 26 ರ ರೈತರ ಪ್ರತಿಭಟನೆಗೆ 12 ಪ್ರತಿಪಕ್ಷಗಳ ಬೆಂಬಲ

"ಕೇಂದ್ರ ಸರಕಾರ ಹಟಮಾರಿತನವನ್ನು ನಿಲ್ಲಿಸಿ ತಕ್ಷಣವೇ ಮಾತುಕತೆಗಳನ್ನು ಪುನರಾರಂಭಿಸಬೇಕು"

ರೈತರ ವೀರೋಚಿತ ಶಾಂತಿಯುತ ಹೋರಾಟ ಆರು ತಿಂಗಳುಗಳನ್ನು ಪೂರ್ಣಗೊಳಿಸಲಿರುವ ಮೇ 26 ರಂದು ದೇಶವ್ಯಾಪಿ ಪ್ರತಿಭಟನೆಗೆ ಸಂಯುಕ್ತ ಕಿಸಾನ್ ಮೋರ್ಚಾ ನೀಡಿರುವ ಕರೆಗೆ ದೇಶದ ಹನ್ನೆರಡು ಪ್ರಮುಖ ಪ್ರತಿಪಕ್ಷಗಳು ಬೆಂಬಲ ವ್ಯಕ್ತಪಡಿಸಿವೆ.

ಮೇ 12 ರಂದು ಪ್ರಧಾನ ಮಂತ್ರಿಗಳಿಗೆ ಬರೆದ ತಮ್ಮ ಜಂಟಿ ಪತ್ರದಲ್ಲಿ "ಕೃಷಿ ಕಾಯ್ದೆಗಳನ್ನು ರದ್ದುಮಾಡಬೇಕು, ಈ ಮೂಲಕ ನಮ್ಮ ಲಕ್ಷಾಂತರ ಅನ್ನದಾತರು ಮಹಾಸೋಂಕಿಗೆ ಬಲಿಯಾಗದಂತೆ ರಕ್ಷಿಸಿ ಅವರು ಭಾರತೀಯ ಜನತೆಗೆ ಉಣಬಡಿಸಲು ಆಹಾರ ಉತ್ಪಾದಿಸುವುದನ್ನು ಮುಂದುವರೆಸಲು ಸಾಧ್ಯವಾಗುವಂತೆ ಮಾಡಬೇಕು" ಎಂದು ಹೇಳಿದ್ದನ್ನು ನೆನಪಿಸುತ್ತ ಮೇ 23ರ ಈ ಜಂಟಿ ಹೇಳಿಕೆಯಲ್ಲಿ ಪ್ರತಿಪಕ್ಷಗಳು, ತಕ್ಷಣವೇ ಕೃಷಿ ಕಾಯ್ದೆಗಳನ್ನು ರದ್ದುಮಾಡಬೇಕು ಮತ್ತು ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿರುವ ಸಿ2+50% ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ) ಕಾನೂನಾತ್ಮಕ ಹಕ್ಕು ಸಿಗುವಂತಾಗಬೇಕು ಎಂದು ಪುನರುಚ್ಚರಿಸಿವೆ.

ಕೇಂದ್ರ ಸರಕಾರ ಹಟಮಾರಿಯಾಗಿರುವುದನ್ನು ನಿಲ್ಲಿಸಿ ತಕ್ಷಣವೇ ಸಂಯುಕ್ತ ಕಿಸಾನ್ ಮೋರ್ಚಾದೊಂದಿಗೆ ಈ ನಿಟ್ಟಿನಲ್ಲಿ ಮಾತುಕತೆಗಳನ್ನು ಪುನರಾರಂಭಿಸಬೇಕು ಎಂದು ಈ ಪ್ರತಿಪಕ್ಷಗಳ ಹೇಳಿಕೆ ಆಗ್ರಹಿಸಿದೆ.

ಈ ಜಂಟಿ ಹೇಳಿಕೆಗೆ ಸೋನಿಯಾ ಗಾಂಧಿ(ಕಾಂಗ್ರೆಸ್), ಹೆಚ್.ಡಿ.ದೇವೇಗೌಡ(ಜೆಡಿ-ಎಸ್), ಶರದ್ ಪವಾರ್(ಎನ್.ಸಿ.ಪಿ.), ಮಮತಾ ಬ್ಯಾನರ್ಜಿ(ಟಿಎಂಸಿ), ಉದ್ಧವ್ ಠಕ್ರೆ(ಶಿವಸೇನಾ), ಎಂ ಕೆ ಸ್ಟಾಲಿನ್(ಡಿಎಂಕೆ). ಹೇಮಂತ್ ಸೋರೆನ್(ಜೆಎಂಎಂ), ಫಾರುಕ್ ಅಬ್ದುಲ್ಲ(ಜಮ್ಮು-ಕಾಶ್ಮೀರ ಜನತಾ ಮೈತ್ರಿಕೂಟ), ಅಖಿಲೇಶ್ ಯಾದವ್(ಎಸ್.ಪಿ.), ತೇಜಸ್ವಿ ಯಾದವ್(ಆರ್. ಜೆ.ಡಿ.) ಹಾಗೂ ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ಮತ್ತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಸಹಿ ಮಾಡಿದ್ದಾರೆ.



ದಿಲ್ಲಿಯಲ್ಲಿರುವ ಎಐಕೆಎಸ್ ಮುಖ್ಯ ಕಚೇರಿಯಲ್ಲಿ ಪ್ರತಿಭಟನೆ

ಮಾಹಿತಿ ತಂತ್ರಜ್ಞಾನದ ಕಾಯ್ದೆಯ ಅಪಾಯಕಾರಿ ಮತ್ತು ಪ್ರತಿಗಾಮಿ ನಿಯಮಗಳನ್ನು ತೆಗೆದುಹಾಕಬೇಕು

ಬಿಜೆಪಿ ಸರಕಾರ ಐಟಿ ಮಂತ್ರಾಲಯವನ್ನು ಪಕ್ಷಪಾತದಿಂದ ಬಳಸುವುದನ್ನು ಮತ್ತು ಟ್ವಿಟರ್ ನ ಕಚೇರಿಗಳ ಮೇಲೆ ಪೋಲೀಸ್ ದಾಳಿಗಳನ್ನು ನಡೆಸುವುದನ್ನು ಹೆದರಿಸುವ ಲಜ್ಜೆಗೆಟ್ಟ ಕೃತ್ಯಗಳು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡಿಸಿದೆ.

ಭಾರತ ಸರಕಾರ ಇತ್ತೀಚೆಗೆ ಸುರಕ್ಷಿತ ಗೋಪ್ಯತೆಯ ಉಪಬಂಧಗಳಿಗೆ ಸಂಬಂಧಪಟ್ಟ ನಿಯಮಗಳನ್ನು ಮಾರ್ಪಡಿಸಿರುವುದು ಒಂದು ಕಾವಲುಕೋರ ಪ್ರಭುತ್ವದ ಸಂರಚನೆಯನ್ನು ಗಟ್ಟಿಗೊಳಿಸುವ ಅಪಾಯಕಾರೀ ಮತ್ತು ಪ್ರತಿಗಾಮೀ ಕ್ರಮ, ನಾಗರಿಕರ ಖಾಸಗಿತ್ವದ ಹಕ್ಕನ್ನು ಉಲ್ಲಂಘಿಸುವ ಈ ಕ್ರಮವನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಇನ್ನೊಂದೆಡೆಯಲ್ಲಿ, ಫೇಸ್‌ಬುಕ್ ಭಾರತದಲ್ಲಿ ತನ್ನ 'ಬಿಸಿನೆಸ್ ಅಪ್ಲಿಕೇಷನ್' ಗಳಲ್ಲಿ ವಾಟ್ಸ್‌ಆಪ್ ನ ಭದ್ರತೆಯನ್ನು ದುರ್ಬಲಗೊಳಿಸಬೇಕೆಂದಿರುವುದನ್ನು ಮರು ಪರಿಶೀಲಿಸಬೇಕು ಮತ್ತು ಹಿಂತೆಗೆದುಕೊಳ್ಳಬೇಕು ಎಂದೂ ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಸರಕಾರ ಇತ್ತೀಚೆಗೆ ಮಾಹಿತಿ ತಂತ್ರಜ್ಞಾನ(ಐಟಿ) ಕಾಯ್ದೆ ಯಲ್ಲಿ ಫೇಸ್‌ಬುಕ್, ಟ್ವಿಟರ್ ಮುಂತಾದ ಮಧ್ಯವರ್ತಿ ವೇದಿಕೆಗಳ ಸುರಕ್ಷಿತ ಗೋಪ್ಯತೆಯ ಉಪಬಂಧಗಳಿಗೆ ಸಂಬಂಧಪಟ್ಟ ನಿಯಮಗಳನ್ನು ಮಾರ್ಪಡಿಸಿದೆ. ಈ ಕುರಿತು ಫೆಬ್ರುವರಿ 25, 2021 ರಂದು ಒಂದು ಅಧಿಸೂಚನೆ ಹೊರಡಿಸಿದೆ. ಇದು ಮೇ 26, 2021ರಿಂದ ಜಾರಿಗೆ ಬರಬೇಕು. ಈ ಅಧಿಸೂಚನೆಯ ಪ್ರಕಾರ ಸಂದೇಶ ಸೇವೆಗಳನ್ನು ಒದಗಿಸುವ ಎಲ್ಲ ಮಧ್ಯವರ್ತಿ ವೇದಿಕೆಗಳು ಒಂದು ಸಂದೇಶದ ಜಾಡಿನ "ಮೊದಲ ಮೂಲವ್ಯಕ್ತಿ"ಯನ್ನು ನ್ಯಾಯಾಲಯ ಅಥವ ಸರಕಾರ ಕೇಳಿದಾಗ ಗುರುತಿಸಬೇಕು.

ಇದರ ಅರ್ಥ ಈಗಿರುವ ಸಂದೇಶ ಶಿಷ್ಟಾಚಾರ ನಿಯಮಾವಳಿ(ಪ್ರೊಟೊಕೋಲ್)ಗಳ ಭದ್ರತೆಯನ್ನು ಮುರಿಯುವುದು ಎಂದಾಗುತ್ತದೆ ಎಂದು ಫೇಸ್‌ಬುಕ್/ ವಾಟ್ಸ್‌ಆಪ್ ಹೇಳಿವೆ. ತಾಂತ್ರಿಕ ಪರಿಣಿತರು ಇದನ್ನು ಅನುಮೋದಿಸಿದ್ದಾರೆ. ಭದ್ರತಾ ಶಿಷ್ಟಾಚಾರ ನಿಯಮಾವಳಿಗಳನ್ನು ದುರ್ಬಲಗೊಳಿಸುವುದು ಬಳಕೆದಾರರ ಖಾಸಗಿತ್ವವನ್ನು ಉಲ್ಲಂಘಿಸುತ್ತದೆ ಮತ್ತು ಕ್ರಿಮಿನಲ್ ಉದ್ದೇಶಗಳಿಗಾಗಿ ಅವನ್ನು ಭೇದಿಸಲು ಈಡು ಮಾಡಿಕೊಡುತ್ತದೆ ಕೂಡ.

ಫೇಸ್‌ಬುಕ್ ತನ್ನ ಈ ವೀಕ್ಷಣೆಗಳಿಗೆ ಅನುಗುಣವಾಗಿ ಭಾರತದಲ್ಲಿ ತನ್ನ 'ಬಿಸಿನೆಸ್ ಅಪ್ಲಿಕೇಷನ್' ಗಳಲ್ಲಿ ವಾಟ್ಸ್‌ಆಪ್ ನ ಭದ್ರತೆಯನ್ನು ದುರ್ಬಲಗೊಳಿಸಬೇಕೆಂದಿರುವುದನ್ನು ಮರು ಪರಿಶೀಲಿಸಬೇಕು ಮತ್ತು ಹಿಂತೆಗೆದುಕೊಳ್ಳಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಫೇಸ್‌ಬುಕ್ ಭಾರತದಲ್ಲಿ ವಾಟ್ಸ್‌ಆಪ್ ದತ್ತಾಂಶಗಳು ತನಗೆ ಲಭ್ಯವಾಗುವಂತಿರಬೇಕು ಎಂದು ಬಯಸುತ್ತದೆ, ಆದರೆ ಯುರೋಪಿಯನ್ ಒಕ್ಕೂಟದಲ್ಲಿ ಬಳಕೆದಾರರ ಖಾಸಗಿತ್ವ ಕುರಿತ ನಿರ್ದೇಶನವನ್ನು ಪಾಲಿಸುತ್ತದೆ, ಅದರಿಂದಾಗಿ ಇಂತಹ ಲಭ್ಯತೆಯನ್ನು ಒದಗಿಸುವುದಿಲ್ಲ ಎಂಬ ಸಂಗತಿಯತ್ತ ಗಮನ ಸೆಳೆದಿದೆ.

ಭಾರತ ಸರಕಾರ ಇತ್ತೀಚೆಗೆ ವಿವಿಧ ಬಿಜೆಪಿ

ಪುಟ 14 ನೋಡಿ

ಸಂಪಾದಕೀಯ

ಹಳ್ಳಿಗಾಡ ಬಡವರನ್ನು ಕಡೆಗಣಿಸದಿರಿ

ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯು ಗ್ರಾಮೀಣ ಭಾರತದಲ್ಲಿ ತೀವ್ರವಾಗಿ ಪಸರಿಸುತ್ತಿದೆ ಎಂದು ಹೇಳಲಾಗುತ್ತಿದೆ. ಇದರಿಂದಾಗಿ ಗ್ರಾಮೀಣ ಬಡವರ ಆತ್ಮ ವಿಶ್ವಾಸದ ಮೇಲೆ ಬಹುಕಾಲ ಉಳಿಯಲಿರುವ ಕೆಟ್ಟ ಪರಿಣಾಮ ಬೀರಿದೆ.

ಕೋವಿಡ್ ಎರಡನೇ ಅಲೆಯು ದೇಶದ ನಗರಗಳ ಮೇಲೆ ನಿರೀಕ್ಷೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಆತಂಕಕ್ಕೆ ಕಾರಣವಾಗಿತ್ತು. ಆದರೆ ಈಗ ಪರಿಸ್ಥಿತಿಯಲ್ಲಿ ಬದಲಾವಣೆ ಕಾಣುತ್ತಿದೆ. ಬಹುತೇಕ ರಾಜ್ಯಗಳಲ್ಲಿ ಹೊಸ ಸೋಂಕಿತರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿರುತ್ತದೆ. ಆದರೆ ಸಾವಿನ ಸಂಖ್ಯೆ ಮಾತ್ರ ಹೆಚ್ಚುತ್ತಲೇ ಇದೆ. ಇದಕ್ಕೆ ನಿಖರವಾದ ಕಾರಣ ಪತ್ತೆಯಾಗಬೇಕಷ್ಟೆ. ಸರ್ಕಾರ ನೀಡುವ ಅಂಕೆ ಸಂಖ್ಯೆಗಳ ಬಗ್ಗೆಯೇ ಅನುಮಾನ ಹುಟ್ಟುವಂತಿದೆ.

ಗ್ರಾಮೀಣ ಪ್ರದೇಶದಲ್ಲಿ ಕೋರೋನಾ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕದ ವಿಷಯವಾಗಿದೆ. ಹಳ್ಳಿಗಾಡಿನಲ್ಲಿ ಅದು ಶರವೇಗದಲ್ಲಿ ಹಬ್ಬುತ್ತಿದೆ. ಅನೇಕ ಮಂದಿ ಹಳ್ಳಿ ಮಂದಿಯನ್ನು ಅದು ಬಲಿ ಪಡೆದಿದೆ. ಆದರೆ ಸರ್ಕಾರದ ಮುಂಜಾಗ್ರತೆ ಹಾಗೂ ಲಸಿಕೆ ವಿಷಯದಲ್ಲಿ ಕಾಳಜಿ ಏನೂ ಸಾಲದಾಗಿದೆ.

ನಮ್ಮ ಹಳ್ಳಿಗಳ ಕುರಿತಾದ ಪಕ್ಷಪಾತ ಬ್ರಿಟಿಷರ ಕಾಲದಿಂದಲೇ ಆರಂಭವಾಗಿತ್ತು. ನಮ್ಮ ಶತಮಾನಗಳಷ್ಟು ಹಳೆಯದಾದ ಗ್ರಾಮೀಣ ಅರ್ಥವ್ಯವಸ್ಥೆಯನ್ನು ಧ್ವಂಸ ಮಾಡಿದ್ದೇ ಬ್ರಿಟಿಷರು. ಬ್ರಿಟಿಷರ ನಂತರ ಅಧಿಕಾರ ವಹಿಸಿಕೊಂಡ ಭಾರತದ ಬಂಡವಾಳಿಗರು ಸಹ ಗ್ರಾಮೀಣ ಭಾರತದ ಅಭಿವೃದ್ಧಿಗಾಗಿ ಕಿಂಚಿತ್ತೂ ಅನುಕೂಲ ಮಾಡಲಿಲ್ಲ. ಈಗಲೂ ಈ ತಾರತಮ್ಯ ಮುಂದುವರೆದಿದೆ.

ನಮ್ಮ ದೇಶ ಭಾರತ ಈಗಲೂ ಗ್ರಾಮೀಣ ಭಾರತವಾಗಿದೆ. ಆದರೆ ಈ ದೇಶದ ಪ್ರಜೆಗಳಿಗೆ ಚುನಾವಣೆಗಳಲ್ಲಿ ಮತಹಾಕುವ ಅಧಿಕಾರ ಮಾತ್ರ ಇದೆ. ಆದರೆ ಇಲ್ಲಿ ದುಡ್ಡಿದ್ದವರಿಗೆ ಮಾತ್ರ ಎಲ್ಲಾ ಸೌಲಭ್ಯಗಳು ಸಿಗುತ್ತವೆ. ಇಲ್ಲಿ ದುಡ್ಡಿದ್ದವರಿಗೆ ಶಿಕ್ಷಣ, ದುಡ್ಡಿದ್ದವರಿಗೆ ಆರೋಗ್ಯ, ದುಡ್ಡಿದ್ದವರಿಗೆ ಮಾನ ಮರ್ಯಾದೆ. ದುಡ್ಡಿಲ್ಲದವರಿಗೆ, ಆಸ್ತಿ ಇಲ್ಲದವರಿಗೆ ಇಲ್ಲಿ ಉಚಿತ ಉಪದೇಶ ಮಾತ್ರ.

ಹೀಗಾಗಿ ಕೊರೋನಾ ಸೊಂಕಿಗೆ ಬಲಿಯಾಗಿ ಗ್ರಾಮೀಣ ಪ್ರದೇಶದ ಸಾವಿರಾರು ಜನ ಪ್ರಾಣತೆತ್ತರು. ನಮ್ಮ ಹಳ್ಳಿಗಳಲ್ಲಿ ಜನರಿಗೆ ಆಸ್ಪತ್ರೆಗಳಿಲ್ಲ. ಕನಿಷ್ಠ ಆರೋಗ್ಯ ಕೇಂದ್ರಗಳಿಲ್ಲ. ಆರೋಗ್ಯ ಕೇಂದ್ರಗಳಿದ್ದರೂ ಅಲ್ಲಿ ವೈದ್ಯರಿರುವುದಿಲ್ಲ. ವೈದ್ಯರಿದ್ದರೂ ತುರ್ತಾಗಿ ಬೇಕಾಗುವ ಜೀವ ರಕ್ಷಕ ಔಷಧಿಗಳಿರುವುದಿಲ್ಲ. ಐಸಿಯು ಘಟಕಗಳಾಗಲಿ ವೆಂಟಿಲೇಟರ್ಸ್ ಅಂತಹ ಅತ್ಯಗತ್ಯ ಉಪಕರಣಗಳಿಲ್ಲ. ಕೊರೋನಾ ಅಲೆ ಗ್ರಾಮೀಣ ಪ್ರದೇಶಕ್ಕೆ ಹರಡುತ್ತಿದ್ದಂತೆ ಇದೆಲ್ಲವೂ ಬಯಲಾಗಿದೆ. ಸರ್ಕಾರಕ್ಕೆ ತನ್ನ ವೈಫಲ್ಯವನ್ನು ಮುಚ್ಚಿಟ್ಟುಕೊಳ್ಳಲು ಅಸಾಧ್ಯವಾಗಿದೆ. ನಮ್ಮ ಆರೋಗ್ಯ ವ್ಯವಸ್ಥೆಗೆ ತುರ್ತು ಚಿಕಿತ್ಸೆ ಬೇಕಾಗಿದೆ. ಆರೋಗ್ಯ ಜನತೆಯ ಹಕ್ಕಾಗಬೇಕಾಗಿದೆ. ಕೇವಲ ಶ್ರೀಮಂತರಿಗೆ ಅತ್ಯಾಧುನಿಕ ಸುಸಜ್ಜಿತ ಆಸ್ಪತ್ರೆಗಳಿದ್ದರೆ ಸಾಲದು. ಸರ್ಕಾರ ನೆರೆಯರೊಡನೆ ಹೊಡೆದಾಡಲು ಶಸ್ತ್ರಾಸ್ತ್ರಗಳನ್ನು ಹೆಚ್ಚು ಹೆಚ್ಚಾಗಿ ಖರೀದಿ ಮಾಡುವುದನ್ನು ಬಿಟ್ಟು ಸಾರ್ವಜನಿಕ ಆರೋಗ್ಯಕ್ಕಾಗಿ ಅತಿ ಹೆಚ್ಚು ಹಣವನ್ನು ವಿನಿಯೋಗಿಸಬೇಕು. ದೊಡ್ಡ ದೊಡ್ಡ ಕೋಟ್ಯಾಧಿಪತಿಗಳಿಗೆ ತೆರಿಗೆ ರಿಯಾಯ್ತಿ ನೀಡುವುದನ್ನು ಬಿಟ್ಟು ಆ ಹಣವನ್ನು ಮುಲಾಜಿಲ್ಲದೆ ವಸೂಲಿ ಮಾಡಿ ಸಾರ್ವಜನಿಕ ಆಹಾರ, ಸಾರ್ವಜನಿಕ ಶಿಕ್ಷಣ, ಸಾರ್ವಜನಿಕ ಆಯೋಗ್ಯ, ಸಾರ್ವಜನಿಕ ವಸತಿಯಂತಹ ಕಾರ್ಯಗಳಿಗೆ ತೊಡಗಿಸಬೇಕು. ನಗರಗಳ ಶ್ರೀಮಂತರ ಬೆಳವಣಿಗೆಯೊಂದೇ ಬೆಳವಣಿಗೆ ಅಲ್ಲ. ಗ್ರಾಮೀಣ ಪ್ರದೇಶಕ್ಕೆ ಶುದ್ಧ ಕುಡಿಯುವ ನೀರು, ನಡೆದಾಡಲು ಸರಿಯಾದ ರಸ್ತೆಗಳು, ಮಾತೃ ಭಾಷಾ ಶಾಲೆಗಳು, ಇಂತಹ ಸಾಂಕ್ರಾಮಿಕ ರೋಗವನ್ನು ತಡೆಯಲು ಪರಿಣಾಮಕಾರಿ ಕ್ರಮಗಳು ಸರ್ಕಾರದ ಆಧ್ಯತೆಯಾಗಬೇಕು. ರೋಗದ ಬಗ್ಗೆ ಜಾಗೃತಿ ಹುಟ್ಟಿಸಬೇಕೇ ಹೊರತು ಗ್ರಾಮೀಣ ಜನತೆಯಲ್ಲಿ ರೋಗದ ಕುರಿತು ಭೀತಿಯನ್ನು ಹರಡುವುದಲ್ಲ. ಎಲ್ಲ ಗ್ರಾಮೀಣ ಬಡ ಕುಟುಂಬಗಳಿಗೆ ರೂ. 10 ಸಾವಿರ ದರದಲ್ಲಿ ಕನಿಷ್ಠ 6 ತಿಂಗಳು ಆರ್ಥಿಕ ಪ್ಯಾಕೇಜ್ ನೀಡಬೇಕು ಹಾಗೂ ಆಹಾರ ಮತ್ತು ಔಷಧಿಗಳ ಪ್ಯಾಕೇಜ್ ನೀಡಬೇಕು.

ಲಾಕ್ ಡೌನ್ ಮಾತ್ರವೇ ಕೋವಿಡ್ ನಿಯಂತ್ರಿಸದು – ಸಿಪಿಐ(ಎಂ)

ಮುಖ್ಯಮಂತ್ರಿ ಯಡೆಯೂರಪ್ಪರವರು ಮಗದೊಮ್ಮೆ ಸಮರ್ಪಕವಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೇ ಕೋವಿಡ್ – 19 ರ ನಿಯಂತ್ರಣಕ್ಕೆ ಮೂರನೇ ಬಾರಿ ಲಾಕ್ ಡೌನ್ ಘೋಷಿಸಿದ್ದಾರೆ. ಈ ಲಾಕ್ ಡೌನ್ ನಾಳೆಯಿಂದ ಮುಂದಿನ ಜುಲೈ 07, ರವರೆಗೆ ಜಾರಿಯಲ್ಲಿರಲಿದೆ.

ಸಾಂಕ್ರಾಮಿಕ ನಿಯಂತ್ರಣಕ್ಕೆ ಬಾರದೇ ಇರುವುದರಿಂದ ಈ ಲಾಕ್ ಡೌನ್ ನ್ನು ತಜ್ಞರ ಸೂಚನೆ ಮೇರೆಗೆ ಘೋಷಿಸಲಾಗಿದೆ ಎಂದಿದ್ದಾರೆ. ಭಾರತ ಕಮ್ಯುನಿಷ್ಠ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಇದನ್ನು ಸ್ವಾಗತಿಸುತ್ತದೆ. ಆದರೇ, ರಾಜ್ಯ ಸರಕಾರ ಎಲ್ಲ ಸೋಂಕಿತರನ್ನು ಗುರುತಿಸಿ, ಪ್ರತ್ಯೇಕಿಸಿ, ಸಮರೋಪಾದಿಯಲ್ಲಿ ಅಗತ್ಯ ನೆರವಿಗೆ ಕ್ರಮವಹಿಸದೇ ಕೇವಲ ಲಾಕ್ ಡೌನ್ ಮೂಲಕ ಮಾತ್ರವೇ ಸಾಂಕ್ರಾಮಿಕ ನಿಯಂತ್ರಿಸುವ ನಿಲುಮೆಯನ್ನು ಸಿಪಿಐಎಂ ಖಂಡಿಸುತ್ತದೆ.

ರಾಜ್ಯದಾದ್ಯಂತ ಸೋಂಕಿತರಿಗೆ ಬೇಕಾದ ಶೂಶ್ರುಸೆಯ ಹಾಗೂ ಆಸ್ಪತ್ರೆಗಳ ಮತ್ತು ಅಗತ್ಯ ಔಷಧಿಗಳ ವ್ಯವಸ್ಥೆಗೆ ತುರ್ತಾಗಿ ಕ್ರಮ ವಹಿಸದೇ, ಭಯ ಭೀತಿಯ ಕಾರಣದಿಂದ ಸಮೂಹ ಸನ್ನಿಗೊಳಗಾಗುತ್ತಿರುವ ಜನತೆಗೆ ಮಾನಸಿಕ ಸ್ಥೈರ್ಯ ತುಂಬುವ ಕೆಲಸವನ್ನು ಮಾಡದೇ ಮತ್ತು ಸಾಮೂಹಿಕ ಲಸಿಕೀಕರಣಕ್ಕೆ ಅಗತ್ಯ ಕ್ರಮ ವಹಿಸದೇ ಸಾಂಕ್ರಾಮಿಕ ವನ್ನು ನಿಯಂತ್ರಿಸಲಾಗದು.

ಈ ಕುರಿತು ಕೈಗೊಂಡ ಕ್ರಮಗಳು ಮತ್ತು ಅದಕ್ಕಾಗಿ ಒದಗಿಸಲಾದ ಮೊತ್ತದ ಕುರಿತು ರಾಜ್ಯದ ಜನತೆಯ ಮುಂದಿಡದೇ ಮುಖ್ಯಮಂತ್ರಿಗಳು ಮೌನ ವಹಿಸಿರುವುದು ತೀವ್ರ ಖಂಡನೀಯವಾಗಿದೆ.

ಎರಡನೇ ಅಲೆಯು ನಗರ ಹಾಗೂ ಬಹುತೇಕ ಗ್ರಾಮೀಣ ಪ್ರದೇಶವನ್ನು ವ್ಯಾಪಕವಾಗಿ ಬಾಧಿಸಿದೆ. ಸೋಂಕಿತರನ್ನು ಅವರ ಮನೆಗಳಲ್ಲಿ ಉಳಿಯಲು ಹೇಳಲಾಗುತ್ತಿದೆ. ಗ್ರಾಮೀಣ ಹಾಗೂ ನಗರದ ಬಹುತೇಕ ಬಡವರ ಮನೆಗಳಲ್ಲಿ ಸೋಂಕಿತರು ಪ್ರತ್ಯೇಕವಾಗಿರಲು ಅಗತ್ಯ ಸೌಲಭ್ಯಗಳು ಇಲ್ಲ. ಸರಕಾರವೇ ಇಂತಹವರನ್ನು ವಿಶ್ವಾಸಕ್ಕೆ ತಗೆದುಕೊಂಡು ಸ್ಥಳೀಯವಾಗಿ ಪ್ರತ್ಯೇಕವಾಗಿರಿಸಲು ವ್ಯವಸ್ಥೆಗಳನ್ನು ಮಾಡಿಲ್ಲ. ಅದಕ್ಕೆ ಬೇಕಾದ ಬಂಡವಾಳ ಮತ್ತು ಚಿಕಿತ್ಸೆ ಹಾಗೂ ಊಟೋಪಚಾರದ ವ್ಯವಸ್ಥೆಗಳನ್ನು ಮಾಡಿಲ್ಲ. ಇದರಿಂದಾಗಿ ಕೋವಿಡ್ – 19 ಮನೆಗಳ ಎಲ್ಲ ಸದಸ್ಯರಿಗೂ ಹರಡಲು ಕಾರಣವಾಗುತ್ತಿದೆ.

ಸಂಪೂರ್ಣ ಲಾಕ್ ಡೌನ್ ನಿಂದಾಗಿ ನಿರುದ್ಯೋಗ ವ್ಯಾಪಕವಸಗುತ್ತಿದೆ. ತರಕಾರಿ ಹಣ್ಣುಗಳ ಬೆಲೆಗಳು ಗಗನಮುಖಿಯಾಗಿವೆ. ಆದಾಗಲೂ ಲಭ್ಯವಾಗುತ್ತಿಲ್ಲ. ಜೀವನ ವೆಚ್ಚ ದುಬಾರಿಯಾಗುತ್ತಿದೆ.

ಕಳೆದ ಮೂರು–ನಾಲ್ಕು ತಿಂಗಳಿಂದ ಸಾಂಕ್ರಾಮಿಕದಿಂದುಂಟಾದ ರಾಜ್ಯದ ಜನತೆಯ ದುಸ್ಥಿತಿ ನಿರ್ವಹಿಸಲು ಪರಿಹಾರದ ಪ್ಯಾಕೇಜ್ ನೀಡುವಂತೆ ರಾಜ್ಯದ ಜನತೆ ಹಲವು ಬಾರಿ ಒತ್ತಾಯಿಸಿದ ನಂತರ ಮುಖ್ಯಮಂತ್ರಿಗಳು ಈಚೆಗೆ ಘೋಷಿಸಿದ ಪರಿಹಾರವು ಯಾತಕ್ಕೂ ಸಾಲದೆಂದು ರಾಜ್ಯದಾದ್ಯಂತ ತೀವ್ರ ವಿರೋಧ ವ್ಯಕ್ತವಾಗಿದೆ ಹಾಗೂ ಸಮಗ್ರ ಪರಿಹಾರಕ್ಕೆ ಕ್ರಮ ವಹಿಸುವಂತೆ ಮರಳಿ ಒತ್ತಾಯಗಳು ಕೇಳಿ ಬಂದಿದೆ. ಆದಾಗಲೂ, ಮುಖ್ಯಮಂತ್ರಿಗಳು ಅವುಗಳನ್ನು ಪರಿಗಣಿಸದೇ ಉಪೇಕ್ಷೆಯನ್ನು ಮಾಡುತ್ತಿರುವುದು ತೀವ್ರ ಕಳವಳಕಾರಿ ಸಂಗತಿಯಾಗಿದೆ.

ಕೋವಿಡ್ ನಿಯಂತ್ರಿಸಲು ಜನತೆ ಪೌಷ್ಠಿಕತೆಯನ್ನು ಪಡೆಯುವುದು ಅಷ್ಠೇ ಅಗತ್ಯವಿದೆ. ಆದ್ದರಿಂದ ಆದಾಯ ತೆರಿಗೆ ವ್ಯಾಪ್ತಿಗೆ ಬಾರದ ಎಲ್ಲ ಕುಟುಂಬಗಳಿಗೆ ಮಾಸಿಕ 10,000 ರೂಗಳ ನಗದು ಮತ್ತು ಕುಟುಂಬದ ತಲಾ ವ್ಯಕ್ತಿಗೆ 10 ಕೇಜಿ ಆಹಾರ ಸಾಮಗ್ರಿಗಳ ಮತ್ತು ಆರೋಗ್ಯ ಸುರಕ್ಷತೆಯ ಪೊಟ್ಟಣಗಳನ್ನು ಒದಗಿಸ ಬೇಕು.

ಲಾಕ್ ಡೌನ್ ಹಾಗೂ ಸಾಂಕ್ರಾಮಿಕದಿಂದ ಉಂಟಾದ ಬೆಳೆನಷ್ಟಕ್ಕೆ ತಲಾ ಎಕರೆಗೆ ಕನಿಷ್ಠ 25,000 ರೂಗಳ ಪರಿಹಾರ ಹಾಗೂ ರೈತರು, ಕೂಲಿಕಾರರು, ಕಾರ್ಮಿಕರು, ಕಸುಬುದಾರರ ಮತ್ತು ಮಹಿಳೆಯರ ಸ್ತ್ರೀ ಶಕ್ತಿ ಸಂಘಗಳ ಸಾಲವೂ ಸೇರಿದಂತೆ ಎಲ್ಲ ಸಾಲ ಮನ್ನಾ ಮಾಡಬೇಕು. ಕಾರ್ಮಿಕರಿಗೆ ವೇತನ ಸಹಿತ ರಜೆಯನ್ನು ಒದಗಿಸಬೇಕು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಮರಳಿ ರಾಜ್ಯ ಸರಕಾರವನ್ನು ಒತ್ತಾಯಿಸುತ್ತದೆ. ಅದೇ ರೀತಿ, ರಾಜ್ಯದ ಜನತೆಗೆ ಈ ಕುರಿತು ಕೋವಿಡ್ ಸುರಕ್ಷತೆಯೊಂದಿಗೆ ಪ್ರತಿಭಟನೆಗಳನ್ನು ಮುಂದುವರೆಸಲು ಕರೆ ನೀಡುತ್ತದೆ.

ಶಾಸಕ ಸತೀಶ್ ರೆಡ್ಡಿ ಬಂಧಿಸಿ ಸಂಸದ ತೇಜಸ್ವಿ ಸೂರ್ಯ ಮೇಲೆ ಕ್ರಮವಹಿಸಿ: ಸಿಪಿಐ(ಎಂ)

ಬೆಡ್ ಬ್ಲಾಕಿಂಗ್ ಹಗರಣದಲ್ಲಿ ಬಂಧಿತನಾಗಿರುವ ಬಾಬು ಮತ್ತಿತರರ ಹೇಳಿಕೆ ತೋರುತ್ತಿರುವಂತೆ ಬಿಜೆಪಿ ಶಾಸಕರಾದ ಸತೀಶ್ ರೆಡ್ಡಿಯವರನ್ನು ಕೂಡಲೆ ಬಂಧಿಸಲು ಮತ್ತು ಖಾಸಗಿ ಆಸ್ಪತ್ರೆಗಳ ರಾಯಬಾರಿಯಂತೆ ಪಾವತಿ ಲಸಿಕೆಗೆ ಉತ್ತೇಜನ ನೀಡುತ್ತಿರುವ ಸಂಸದ ತೇಜಸ್ವಿ ಸೂರ್ಯರವರ ಮೇಲೆ ವಿಪತ್ತು ನಿರ್ವಹಣ ಕಾಯ್ದೆಯಡಿ ಕ್ರಮವಹಿಸಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾರ್ದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

ಬೆಡ್ ಬ್ಲಾಕಿಂಗ್ ಹಗರಣ ಆರೋಪಿತರೆ ಬಿಬಿಎಂಪಿ ವಾರ್ ರೂಂಗೆ ನುಗ್ಗಿ ಜನರ ನಡುವೆ ಗೊಂದಲ ಸೃಷ್ಟಿಸಿ ಅಲ್ಲಿನ ಕೆಲಸಗಾರರನ್ನೆ ಆರೋಪಿಗಳಂತೆ ಬಿಂಬಿಸಿ ಅದನ್ನು ಬಳಸಿ ಅದಕ್ಕೆ ಕೋಮು ಬಣ್ಣ ಬಳಿಯಲು ವಿಫಲ ಯತ್ನ ನಡೆಸಿದ್ದ ಶಾಸಕ ಸತೀಶ್ ರೆಡ್ಡಿ ಅವರೆ ಬೆಡ್ ಬ್ಲಾಕಿಂಗ್ ಹಗರಣದಲ್ಲಿ ಬಾಗಿಯಾಗಿದ್ದಾರೆ ಎಂಬುದು ಇದೀಗ ದೃಡಪಡುತ್ತಿದೆ.

ಅಂತೆಯೇ ಉಚಿತ ಲಸಿಕೀಕರಣವನ್ನು ಮರೀಚಿಕೆಯಾಗಿಸಿರುವ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಸಿಗುವಂತೆ ಮಾಡಿವೆ. ಆರೋಗ್ಯ ಸಚಿವರು ಖಾಸಗಿ ಆಸ್ಪತ್ರೆಗಳ ದರ ನಿಯಂತ್ರಣ ಸಾಧ್ಯವಿಲ್ಲ ಎನ್ನುವಾಗ ಸಂಸದ ತೇಜಸ್ವಿ ಸೂರ್ಯರವರು ಖಾಸಗಿ ಆಸ್ಪತ್ರೆಗಳ ಲೂಟಿಗೆ ಅನುವುಗೊಳಿಸಲು ಅವುಗಳ ಜಾಹಿರಾತು ಫಲಕಗಳಲ್ಲಿ

ತಮ್ಮ ಫೋಟೋ ಹಾಕಿಕೊಂಡು ಪಾವತಿ ಲಸಿಕೆಯನ್ನು ಪ್ರಚುರ ಪಡಿಸಲು ಮುಂದಾಗಿದ್ದಾರೆ. ಇದಕ್ಕೆ ಸಹಕಾರ ನೀಡುವ ನಿಟ್ಟಿನಲ್ಲಿ ಮತ್ತೊಬ್ಬ ಬಿಜೆಪಿ ಶಾಸಕ ರವಿ ಸುಬ್ರಮಣ್ಯ ರವರು ತೇಜಸ್ವಿ ಸೂರ್ಯರವರ ಪಾವತಿ ಲಸಕೀಕರಣ ಅಭಿಯಾನಕ್ಕೆ ಸಹಕರಿಸಲು ಆಟೋ ವ್ಯವಸ್ಥೆ ಮಾಡುತ್ತಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಇಡಿ ಬಿಜೆಪಿ ಪಕ್ಷವು ಜನತೆಯ ಲೂಟಿಗೆ ಸಹಕಾರಿಯಾಗಿರುವುದು ಸ್ವಷ್ಟವಾಗುತ್ತಿದೆ.

ಉಚಿತ ಲಸಿಕೆಗಾಗಿ ಜನ ಪರದಾಡುತ್ತಿರುವಾಗ ಬಿಜೆಪಿಯ ಸರ್ಕಾರಗಳು ಶಾಸಕರು ಸಂಸದರು ಪಾವತಿ ಲಸಿಕೀಕರಣಕ್ಕೆ ಅನುವುಗೊಳಿಸುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಆದಕಾರಣ ಅವರನ್ನು ಬಂಧಿಸ ಬೇಕೆಂದು ಸಿಪಿಐ(ಎಂ) ಒತ್ತಾಯ ಮಾಡಿದೆ.

ಎಂಆರ್‌ಪಿಎಲ್ ನಲ್ಲಿ ಸ್ಥಳೀಯರಿಗೆ ಉದ್ಯೋಗವಿಲ್ಲ ಇದಕ್ಕೆ ಸಂಸದ ಶಾಸಕರೇ ಕಾರಣ



ಎಂಆರ್‌ಪಿಎಲ್ ಕಂಪನಿಯ 224 ಉದ್ಯೋಗದ ನೇಮಕಾತಿಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಹಿತ ಸ್ಥಳೀಯರಿಗೆ ಸಂಪೂರ್ಣವಾಗಿ ವಂಚನೆ ಎಸಗಲಾಗಿದೆ. ಇಲ್ಲಿನ ಬಹುತೇಕ ಉದ್ಯೋಗಿಗಳ್ಳಲಿ ದೂರದ ಉತ್ತರ ಪ್ರದೇಶ, ಬಿಹಾರದಿಂದಲೇ ಕನಿಷ್ಠ ನೂರು ಜನ ಅವಕಾಶ ಪಡೆದಿದ್ದು, ಒಟ್ಟು ನೇಮಕಾತಿ ಪ್ರಕ್ರಿಯೆಯಲ್ಲಿ ಬಹುದೊಡ್ಡ ಅಕ್ರಮ ನಡೆದಿದೆ ಎಂದು ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಒತ್ತಾಯಿಸಿದ್ದಾರೆ.

ಇಡೀ ನೇಮಕಾತಿ ಪ್ರಕ್ರಿಯೆ ರದ್ದುಗೊಳಿಸಿ ಉನ್ನತ ಮಟ್ಟದ ತನಿಖೆ ನಡೆಸಬೇಕು ಹಾಗೂ ಈ ಎಲ್ಲ ವೈಫಲ್ಯ ಮತ್ತು ವಂಚನೆಗಳಿಗೆ ಅವಳಿ ಜಿಲ್ಲೆಗಳ ಸಂಸದರಾದ ನಳಿನ್ ಕುಮಾರ್ ಕಟೀಲ್, ಶೋಭಾ ಕರಂದ್ಲಾಜೆ ಹಾಗೂ ಈ ಭಾಗದ ಶಾಸಕರುಗಳು ನೇರ ಕಾರಣರಾಗಿದ್ದು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಎರಡು ವರ್ಷಗಳ ಹಿಂದೆ ಎಂಆರ್‌ಪಿಎಲ್ 224 ಉದ್ಯೋಗಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಿದಾಗ ಡಿವೈಎಫ್‌ಐ ಪ್ರಬಲ ವಿರೋಧವನ್ನು ವ್ಯಕ್ತಪಡಿಸಿತ್ತು. ಸ್ಥಳೀಯರಿಗೆ ಶೇಕಡಾ 80ರಷ್ಟು ಸ್ಥಾನಗಳನ್ನು ಮೀಸಲಿಟ್ಟು ಹೊಸದಾಗಿ ನೇಮಕಾತಿ ಪ್ರಕ್ರಿಯೆ ಆರಂಭಿಸುವಂತೆ ಮತ್ತು ಸರೋಜಿನಿ ಮಹಿಷಿ ವರದಿ ಜಾರಿಗೊಳಿಸುವಂತೆ ಒತ್ತಾಯಿಸಿ ಹಕ್ಕೊತ್ತಾಯ ಮಂಡಿಸಿ, ಆಗ ಎಂಆರ್‌ಪಿಎಲ್ ಮುಂಭಾಗ ಸಾಮೂಹಿಕ ಧರಣಿಯನ್ನೂ ನಡೆಸಲಾಗಿತ್ತು.

ಪ್ರತಿಭಟನೆಯ ತೀವ್ರತೆಯಿಂದ ಎಚ್ಚೆತ್ತ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ನಾಗಾಭರಣ ಕಂಪೆನಿಗೆ ನೋಟೀಸು ಜಾರಿಗೊಳಿಸಿ ನೇಮಕಾತಿ ಪ್ರಕ್ರಿಯೆ ರದ್ದುಗೊಳಿಸುವಂತೆ, ಸರೋಜಿನಿ ಮಹಿಷಿ ವರದಿ ಜಾರಿಗೊಳಿಸುವಂತೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಕಂಪೆನಿ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿದಿತ್ತು.

ಸಂಸದರಾದ ನಳಿನ್ ಕುಮಾರ್ ಕಟೀಲ್ ಸಹಿತ ಯಾವೊಬ್ಬ ಶಾಸಕರೂ ಆಗ ಧ್ವನಿಗೂಡಿಸಿರಲಿಲ್ಲ. ಇದೀಗ ಕೊರೊನಾ, ಲಾಕ್‌ಡೌನ್ ಗದ್ದಲಗಳ ಮಧ್ಯೆ ಕಂಪೆನಿ ತನ್ನ ಅಜೆಂಡಾ ಜಾರಿಗೊಳಿಸಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿದೆ. ದಕ್ಷಿಣ ಕನ್ನಡಕ್ಕೆ ಎರಡು, ಉಡುಪಿಗೆ ಎರಡು ಸಹಿತ ಇಡೀ ಕರ್ನಾಟಕಕ್ಕೆ ಕೇವಲ 13 ಸ್ಥಾನಗಳು ಮಾತ್ರ ದೊರಕಿದೆ. ಅದೇ ಸಂದರ್ಭ ಉತ್ತರ ಪ್ರದೇಶ ಹಾಗೂ ಬಿಹಾರಕ್ಕೆ ಒಟ್ಟು ನೂರು ಸ್ಥಾನಗಳು ದೊರಕಿವೆ. ದಕ್ಷಿಣ ಭಾರತದ ಇತರ ರಾಜ್ಯಗಳ ಅಭ್ಯರ್ಥಿಗಳೂ ಅತಿ ಕಡಿಮೆ ಸಂಖ್ಯೆಯಲ್ಲಿ ಸ್ಥಾನ ಪಡೆದಿದ್ದಾರೆ. ಒಟ್ಟು ಉತ್ತರ ಭಾರತದ ರಾಜ್ಯಗಳ ಅಭ್ಯರ್ಥಿಗಳನ್ನೇ ಗುರುತಿಸಿ ಆಯ್ಕೆ ಮಾಡಲಾಗಿದೆ. ಕರಾವಳಿ ಜಿಲ್ಲೆಗಳ ಹಲವಾರು ಪ್ರತಿಭಾವಂತ ಯುವಜನರು ಅತ್ಯುತ್ತಮವಾಗಿ ಪರೀಕ್ಷೆ ಎದುರಿಸಿದ್ದರೂ ಅವರನ್ನು ಹೀನಾಯವಾಗಿ ಹೊರದಬ್ಬಲಾಗಿದೆ. ಈಗ ಆಯ್ಕೆಯಾಗಿರುವ ಉತ್ತರ ಭಾರತದ ಅಭ್ಯರ್ಥಿಗಳ ಸಾಮರ್ಥ್ಯದ ಕುರಿತೂ ಹಲವು ಅನುಮಾನಗಳು ವ್ಯಕ್ತವಾಗಿವೆ ಎಂದು ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ.

ಇಡೀ ನೇಮಕಾತಿ ಪ್ರಕ್ರಿಯೆಯಲ್ಲಿ ಬಹುದೊಡ್ಡ ಭ್ರಷ್ಟಾಚಾರ, ಪಿತೂರಿ, ವಂಚನೆಯ ವಾಸನೆ ಹೊಡೆಯುತ್ತಿದೆ. ನೇಮಕಾತಿ ಅಧಿಕಾರಿ ಸಹಿತ ಕಂಪೆನಿಯ ಉನ್ನತ ಅಧಿಕಾರಿಗಳು, ಆಳುವ ಸರಕಾರದ ರಾಜಕಾರಣಿಗಳು ಹಗರಣದಲ್ಲಿ ಭಾಗಿಯಾಗಿರುವ ಅನುಮಾನ ದಟ್ಟವಾಗಿದೆ. ಈಗಿನ ನೇಮಕಾತಿಯನ್ನು ರದ್ದುಗೊಳಿಸಿ ಸ್ಥಳೀಯರಿಗೆ ಶೇಕಡಾ 80 ಮೀಸಲಿನೊಂದಿಗೆ ಹೊಸದಾಗಿ ನೇಮಕಾತಿ ಪ್ರಕ್ರಿಯೆ ನಡೆಸುವಂತೆ ಹಾಗೂ ನಡೆದಿರುವ ನೇಮಕಾತಿ ಪ್ರಕ್ರಿಯೆಯ ಹಗರಣದ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವಂತೆ ಡಿವೈಎಫ್‌ಐ ಒತ್ತಾಯಿಸಿದೆ.

ಈ ಎಲ್ಲಾ ಅಕ್ರಮ, ಸ್ಥಳೀಯರಿಗೆ ಆಗಿರುವ ಅನ್ಯಾಯಗಳಿಗೆ ತುಳುನಾಡಿನ ಸಂಸದರು, ಶಾಸಕರು ನೇರ ಹೊಣೆಯಾಗಿದ್ದು ಅವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿ ನೈತಿಕ ಹೊಣೆ ಹೊರಬೇಕು ಎಂದು ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳ ಆಗ್ರಹಿಸಿದ್ದಾರೆ. ■

ಕಾಂ. ವಿಠ್ಠಲ ಪೂಜಾರಿ ಇನ್ನಿಲ್ಲ



ಸಿಪಿಐ(ಎಂ) ಪಕ್ಷದ ಉಡುಪಿ ಜಿಲ್ಲಾ ಸಮಿತಿ ಸದಸ್ಯ, ಉಡುಪಿ ಜಿಲ್ಲಾ ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಉಪಾಧ್ಯಕ್ಷರೂ ಆಗಿದ್ದ ವಿಠ್ಠಲ ಪೂಜಾರಿ ಅವರು ಉಡುಪಿ ಜಿಲ್ಲೆಯ ಬ್ರಹ್ಮಾವರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 69 ವರ್ಷ ವಯಸ್ಸಾಗಿತ್ತು. ಹಲವು ದಿನಗಳಿಂದ ಕ್ಯಾನ್ಸರ್ ವಿರುದ್ಧ ಹೋರಾಟ ನಡೆಸಿ ಚೇತರಿಸಿಕೊಳ್ಳುತ್ತಿರುವಾಗಲೇ ಕೋವಿಡ್ ಗೆ ತುತ್ತಾದರು.

ಹಂಗಾರಕಟ್ಟೆಯ ಪ್ಲೈವುಡ್ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ದುಡಿದು ಅಲ್ಲಿ ಸಿಐಟಿಯು ಸಂಘವನ್ನು ಕಟ್ಟಿ ಕಾರ್ಮಿಕರಿಗೆ ಸವಲತ್ತುಗಳಿಗಾಗಿ ಹೋರಾಟ ನಡೆಸಿದರು. ಅನಂತರ ಅವರು ಸಿಪಿಐ(ಎಂ) ಪಕ್ಷವನ್ನು ಸೇರಿ ಬೀಡಿ, ಕಟ್ಟಡ ಮೊದಲಾದ ಕಾರ್ಮಿಕ ಸಂಘಟನೆಯನ್ನು ಉಡುಪಿ ಜಿಲ್ಲೆಯಲ್ಲಿ ಬೆಳೆಸಿದರು. ದ್ವಿತೀಯ ಪಿಯುಸಿ ತನಕವೂ ವಿದ್ಯಾರ್ಹತೆ ಪಡೆದಿದ್ದ ಅವರು ಉತ್ತಮ ಯಕ್ಷಗಾನ ಶೈಲಿಯ ಭಾಷಣಗಾರರಾಗಿದ್ದರು. ಅವರು ಉಡುಪಿ ಜಿಲ್ಲೆಯಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿ ಸಿಐಟಿಯು ಹಾಗೂ ಸಿಪಿಐ(ಎಂ) ಪಕ್ಷದ ನಾಯಕರಾಗಿದ್ದು ತಮ್ಮ ಬದುಕನ್ನೇ ಚಳುವಳಿಗಾಗಿ, ಶೋಷಿತರಿಗಾಗಿ ಸಮರ್ಪಿಸಿಕೊಂಡಿದ್ದರು. ಅವರ ಅಗಲುವಿಕೆ ಚಳುವಳಿಗೆ ತುಂಬಲಾರದ ನಷ್ಟವಾಗಿದೆ. ಸಿಪಿಐ(ಎಂ) ಪಕ್ಷವು ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

ಆಕ್ಸಿಜನ್ ಸೇವಾ ಕೇಂದ್ರ ಆರಂಭ



ಸಿಪಿಐ(ಎಂ) – ಸಿಐಟಿಯು ಮುತುವರ್ಜಿಯಿಂದ ಕೋವಿಡ್ ನೆರವು ಅಭಿಯಾನ ಅಡಿಯಲ್ಲಿ ಬಸವನಗುಡಿಯ ಸಿಐಟಿಯು ಕಚೇರಿ ಜ್ಯೋತಿಬಸು ಭವನದಲ್ಲಿ ಕೋವಿಡ್ ಸೋಂಕಿತರಿಗೆ ಆಕ್ಸಿಜನ್ ಸೇವಾ ಕೇಂದ್ರ ಆರಂಭವಾಗಿದೆ. ಐದು ಆಕ್ಸಿಜನ್ ಕಾನ್ಸನ್ಟ್ರೇಟರ್ ಗಳ ಕ್ಲಿನಿಕ್ ಇದಾಗಿದು ಅಸಂಘಟಿತ ವಲಯದ ಕಾರ್ಮಿಕರನ್ನು ದೃಷ್ಟಿಯಲ್ಲಿಟ್ಟು ಈ ಕೇಂದ್ರ ಸ್ಥಾಪಿಸಲಾಗಿದೆ. ಕಾರ್ಮಿಕ ಆಯುಕ್ತ ಶ್ರೀ ಅಕ್ರಂಪಾಷ ಖುದ್ದು ಭೇಟಿ ನೀಡಿ ಕೇಂದ್ರಕ್ಕೆ ಚಾಲನೆ ನೀಡಿ, ಸಿಐಟಿಯು ಕಾರ್ಯವನ್ನು ಶ್ಲಾಘಿಸಿದರು.

ವರ್ಚುವಲ್ ಮಾದರಿಯಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಡಾ.ಕೆ. ಹೇಮಲತಾ ಉದ್ಘಾಟಿಸಿ ಮಾತನಾಡಿದರು. ಸನ್ ಸೆರಾ ಫೌಂಡೇಶನ್ ಟ್ರಸ್ಟಿ ಎಫ್. ಎ.ಸಿಂಗ್ವಿ ಹಾಗು ಸಿಐಟಿಯು ರಾಜ್ಯ ನಾಯಕರುಗಳು ಇದ್ದರು.

ಈಗಾಗಲೇ 11 ಜನ ವೈದ್ಯರನ್ನೊಳಗೊಂಡ ಆನ್‌ಲೈನ್ ಮೆಡಿಕಲ್ ಕೇರ್ ಕ್ಲಿನಿಕ್, 7 ಜನ ದಾದಿಯರನ್ನೊಳಗೊಂಡ ಆನ್‌ಲೈನ್ ನರ್ಸಿಂಗ್ ಕೇರ್ ಕ್ಲಿನಿಕ್, ಉಚಿತ ಮೆಡಿಕಲ್ ಕಿಟ್ ಮತ್ತು ಆನ್‌ಲೈನ್ ಆಪ್ತ ಸಮಾಲೋಚನೆ ಕ್ಲಿನಿಕ್ ಆರಂಭಗೊಂಡು ಜನರಿಗೆ ಸೇವೆ ನೀಡುತ್ತಿವೆ. ಬೆಂಗಳೂರಿನ 26 ಕೇಂದ್ರಗಳಲ್ಲಿ ಅಗತ್ಯ ಇರುವ ಕೊರೊನಾ ಸೋಂಕಿತರಿಗೆ ಉಚಿತ ಔಷಧಿ ವಿತರಿಸಲಾಗುತ್ತಿದೆ. ರಾಜ್ಯದೆಲ್ಲೆಡೆ ಈ ಸೇವೆಯನ್ನು ವಿಸ್ತರಿಸಲು ಪ್ರಯತ್ನ ನಡೆಸುತ್ತಿದೆ.

ತಜ್ಞ ವೈದ್ಯರೊಂದಿಗೆ ವೆಬಿನಾರ್ ಮೂಲಕ ಕೋವಿಡ್ ಬಗ್ಗೆ ಅರಿವು ಮೂಡಿಸಲು ಪ್ರಯತ್ನ ನಡೆದಿದೆ. ಬಾಗೇಪಲ್ಲಿಯ ಡಾ.ಅನಿಲ್ ಕುಮಾರ್ ಅವುಲುಪ್ಪ, ರಾಜೀವ್ ಗಾಂಧಿ ಯೂನಿವರ್ಸಿಟಿ ನಿವೃತ್ತ ಉಪ ಕುಲಪತಿ ಡಾ.ಪಿ.ಎಸ್.ಪ್ರಭಾಕರನ್, ಪ್ರಖ್ಯಾತ ಮನೋ ವೈದ್ಯರಾದ ಡಾ.ಸಿ.ಆರ್.ಚಂದ್ರಶೇಖರ್ ಇವರಿಂದ ಉಪನ್ಯಾಸಗಳು ನಡೆಸಿವೆ.

ಸಂಕಷ್ಟದ ಸ್ಥಿತಿಯಲ್ಲಿ ರಾಜ್ಯ – ಕೇಂದ್ರ ಸರ್ಕಾರಗಳು ಜನತೆಯ ನೆರವಿಗೆ ನಿಲ್ಲಬೇಕೆಂದು ಆಗ್ರಹಿಸಿ ಹೋರಾಟಗಳನ್ನು ನಡೆಸುವಾಗಲೇ, ಇಂತಹ ರಚನಾತ್ಮಕ ಕಾರ್ಯಕ್ಕೆ ಶಕ್ತಿಮೀರಿ ಪ್ರಯತ್ನ ನಡೆಸುತ್ತಿವೆ. ■

ಮಾಸ್ಕ್ ಧರಿಸಿ ಎಂದಿದ್ದಕ್ಕೆ ಪೌರ ಕಾರ್ಮಿಕನ ಕೊಲೆ – ಕಠಿಣ ಶಿಕ್ಷೆ – ಸರ್ಕಾರಿ ಉದ್ಯೋಗಕ್ಕೆ ಮುನಿಸಿಪಲ್ ಕಾರ್ಮಿಕರ ಸಂಘ – ಸಿಐಟಿಯು ಒತ್ತಾಯ

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ನಗರ ಸಭೆಯಲ್ಲಿ ಗುತ್ತಿಗೆ ಪೌರ ಕಾರ್ಮಿಕರಾಗು ದುಡಿಯುತ್ತಿದ್ದ ಸುನಿಲ್ 24 ವರ್ಷ ಇವರು ಮಂಗಳವಾರ ಅನ್ವರ್ ಕಾಲೋನಿಯಲ್ಲಿ ಮಾಸ್ಕ್ ಹಾಕಿ ಕೊಳ್ಳಲು ಹೇಳಿದ್ದನ್ನು ಸಹಿಸದ ಕಿಡಿಗೇಡಿಗಳು ಸುನಿಲ್ ಮೇಲೆ ಹಲ್ಲೆ ನಡೆಸಿದ್ದರು. ಅಲ್ಲದೆ ಮಾರಾಕಾಸ್ತ್ರಗಳಿಂದ ಇರಿದಿದ್ದರು. ಈ ಘಟನೆಯಲ್ಲಿ ಗಾಯಗೊಂಡ ಸುನಿಲ್ ಹಾಗು ಸಹೋದ್ಯೋಗಿ ಶ್ರೀಕಂಠ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಚಿಕಿತ್ಸೆ ಸ್ಪಂದಿಸದೆ ಸುನಿಲ್ ಮೃತಪಟ್ಟಿದ್ದಾರೆ. ಈ ಘಟನೆಯನ್ನು ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘ .ರಿ ಸಿಐಟಿಯು ರಾಜ್ಯ ಸಮಿತಿಯು ಖಂಡಿಸಿದೆ. ಅಲ್ಲದೆ ಈ ಘಟನೆಯಲ್ಲಿ ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಒಳಪಡಿಸಲು ಒತ್ತಾಯಿಸಿದೆ. ಮೃತನ ಕುಟುಂಬಕ್ಕೆ 25, ಲಕ್ಷ ಪರಿಹಾರ ಹಾಗು ಅವಲಂಬಿತರಿಗೆ ಸರ್ಕಾರಿ ಉದ್ಯೋಗವನ್ನು ನೀಡಲು ಸಹ ಸಂಘವು ಸರ್ಕಾರವನ್ನು ಆಗ್ರಹಿಸಿದೆ.

ಘಟನೆಯಲ್ಲಿ ಗಾಯಾಳು ಅಗಿರುವ ಶ್ರೀಕಂಠನಿಗೆ ಉತ್ತಮ ಚಿಕಿತ್ಸೆಯನ್ನು ನೀಡಬೇಕು ಹಾಗು ಅದರ ವೆಚ್ಚವನ್ನು ಸರ್ಕಾರವೆ ಭರಿಸುವಂತೆ ಸಹ ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ.ರಿ ಸಿಐಟಿಯು ರಾಜ್ಯ ಸಮಿತಿಯು ಅಗ್ರಹಿಸಿದೆ.



ಇತ್ತೀಚಿನ ದಿನಗಳಲ್ಲಿ ಮುನಿಸಿಪಾಲ್ ಕಾರ್ಮಿಕರ ಮೇಲೆ ಹಲ್ಲೆಗಳು ಹೆಚ್ಚುತ್ತಿವೆ. ಕೆಲಸದ ಒತ್ತಡವು ಹೆಚ್ಚಿದೆ. ಸೂಕ್ತ ರಕ್ಷಣಾ ಸಲಕರಣೆಗಳು ನೀಡದೆ ಕೋವಿಡ್ –19 ಕೆಲಸಗಳಲ್ಲಿ ತೊಡಗಿಸಲಾಗುತ್ತಿದೆ. ನೂರಾರು ಪೌರ ಕಾರ್ಮಿಕರು, ಕಸದ ಅಟೋಚಾಲಕರು, ವಾಟರ್ ಮ್ಯಾನ್ಗಳು ಸೋಂಕಿತರಾಗಿ ಬಳಲುವಂತೆ ಅಗಿದೆ. ಇವರಿಗೆ ಅಗತ್ಯವಾದ ಚಿಕಿತ್ಸೆ ಹಾಗು ಸೂಕ್ತವಾದ ಪರಿಹಾರವನ್ನು ನೀಡುವಂತೆ ಸಹ ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘ .ರಿ ಸಿಐಟಿಯು ರಾಜ್ಯ ಸಮಿತಿಯು ಒತ್ತಾಯಿಸಿದೆ.

ಕೋವಿಡ್–19 ಮರಣ ಹೊಂದುವ ಶವ ಸಂಸ್ಕಾರ, ಸೋಂಕಿತರ ಮನೆಗಳಿಗೆ ಔಷಧಿ ಸಿಂಪಡಿಸುವ ಕೆಲಸಕ್ಕೆ ತಾತ್ಕಾಲಿಕ ಟೆಂಡರ್ ಮೂಲಕ ಪ್ರತ್ಯೇಕ ಕಾರ್ಮಿಕರನ್ನು ತಕ್ಷಣವೆ ನೇಮಿಸಬೇಕು. ಪಿ.ಪಿ.ಇ ಕಿಟ್‌ಗಳನ್ನು ಹಾಗು ಸೂಕ್ತ ಸುರಕ್ಷತಾ ಸಲಕರಣೆಗಳಾದ ಕೈಗೆ ಗ್ಲೌಸ್, ಮಾಸ್ಕ್, ಪೇಸ್ ಶೀಲ್ಡ್, ಸ್ಯಾನಿಟೈಜಾರ್ ನೀಡದೆ ಈ ಕೆಲಸದಲ್ಲಿ ಪೌರಕಾರ್ಮಿಕರನ್ನು ನಿಯೋಜಿಸಬಾರದು, ಸೋಂಕು ಹರಡುವಿಕೆಯು ತುಂಬ ವೇಗವಾಗಿರುವ ಕಾರಣ ಪೌರ ಕಾರ್ಮಿಕರು. ಕಸದ ಆಟೋಚಾಲಕರು/ಸಹಾಯಕರು ಕೆಲಸ ಮುಗಿಸಿ ಮನೆಗೆ ತೆರಳುವಾಗ ಸ್ವಚ್ಚವಾಗಿಹೋಗಲು ಅನುವಾಗುವಂತೆ ಪೌರ ಕಾರ್ಮಿಕರ ಸ್ನಾನ ಗೃಹಗಳನ್ನು ತಕ್ಷಣವೆ ಕಾರ್ಯಾರಂಭಿಸುವಂತೆ ಕ್ರಮ ವಹಿಸಲು ಸರ್ಕಾರವನು ಸಂಘವು ಒತ್ತಾಯಿಸಿದೆ.

ಕರ್ನಾಟಕ ರಾಜ್ಯದ ಉಚ್ಚ ನ್ಯಾಯಲಯದ ನಿರ್ದೇಶನದಂತೆ ಬೆಳಿಗ್ಗೆ–6 ರಿಂದ 11 ತನಕ ಮಾತ್ರ ಕೆಲಸಮಾಡಿಸುವಂತೆ ಪೌರಾಡಳಿತ ನಿರ್ದೇಶನಾಲಯವು ಆದೇಶ ನೀಡಿದ್ದರು ಇದನ್ನು ಪರಿಪಾಲಿಸದೆ ಉಲ್ಲಂಘಿಸಲಾಗುತ್ತಿದೆ. ಇದರ ಕಡ್ಡಾಯ ಜಾರಿಗೆ ಕ್ರಮ ವಹಿಸುವಂತೆ ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ–ಸಿಐಟಿಯು ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಹಳ್ಳಿಗಳಿಗೆ ಕೊರೊನಾ ಹಬ್ಬಲು ಸರಕಾರದ ಲಾಕ್‌ಡೌನ್ ಕಾರಣವೆ?

ಗುರುರಾಜ ದೇಸಾಯಿ

ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ಹೆಚ್ಚಾಗುವುದಕ್ಕ ಸರಕಾಗಳು ಕೊಡುತ್ತಿರುವ ಕಾರಣ ಏನು ಅಂದ್ರೆ ನಗರ ಪ್ರದೇಶಕ್ಕೆ ದುಡಿಯುವುದಕ್ಕಾಗಿ ವಲಸೆ ಬಂದಿದ್ದ ಕಾರ್ಮಿಕರು ಹಳ್ಳಿಗಳಿಗೆ ಹೋದ್ರು, ಆ ಕಾರಣದಿಂದಾಗಿ ಕೋವಿಡ್ ಪ್ರಮಾಣ ಹೆಚ್ಚಾಗಿದೆ ಎಂದು ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳು ಗಂಭೀರ ಆರೋಪವನ್ನು ಮಾಡುತ್ತಿದ್ದರೆ, ವಲಸೆ ಕಾರ್ಮಿಕರು ಮಾತ್ರ ಸರಕಾರದತ್ತ ಬೊಟ್ಟುಮಾಡಿ ತೋರಸ್ತಿದ್ದಾರೆ. ಹಳ್ಳಿಗಳಿಗೆ ಕೋವಿಡ್ ಹರಡಲು ಸರಕಾರ ಹಾಗೂ ಸರಕಾರ ಜಾರಿ ಮಾಡಿದ ಲಾಕ್‌ಡೌನ್ ಕಾರಣ ಎಂದು ಆರೋಪಿಸಿದ್ದಾರೆ.



ಕೊರೊನಾದ ಎರಡನೇ ಅಲೆ ಈಗ ಸದ್ದಿಲ್ಲದೇ ಹಳ್ಳಿಗಳ ಕಡೆ ದಾಪುಗಾಲಿಡುತ್ತಿದೆ. ಕೊರೊನಾ ಇನ್ನಷ್ಟು ಅನಾಹುತಗಳನ್ನು ಸೃಷ್ಟಿಸಬಹುದು ಎಂಬ ಭೀತಿ ಗ್ರಾಮೀಣ ಪ್ರದೇಶದ ಜನರನ್ನು ಕಾಡುತ್ತಿದೆ. ಇತ್ತ ಸರಕಾರದ ನಿರ್ಲಕ್ಷ್ಯ ಎಂದಿನಂತೆ ಮುಂದುವರೆದಿದೆ. ಸೌಲಭ್ಯಗಳಿದ್ದು ನಗರಗಳಲ್ಲಿ ಹಾಹಾಕಾರ ನಿಂತಿರಲಿಲ್ಲ. ಸೌಲಭ್ಯಗಳಿಲ್ಲದ ಹಳ್ಳಿಗಳ ಕಥೆ ಏನೂ ಎಂಬ ಪ್ರಶ್ನೆ ಈಗ ಸಹಜವಾಗಿ ಮೂಡುತ್ತಿದೆ.

ಗ್ರಾಮದ ಜನಸಂಖ್ಯೆ 4 ಸಾವಿರ ಇದ್ದರೆ ಅಲ್ಲಿ ಪ್ರತಿದಿನ ಒಬ್ಬರ ಸಾವು ಖಚಿತವಾಗುತ್ತಿದೆ. ಅನೇಕ ಗ್ರಾಮಗಳಲ್ಲಿ ಪ್ರತಿದಿನದ ಸಾವಿನ ಸಂಖ್ಯೆ 5ಕ್ಕೆ ಏರಿಕೆಯಾಗಿದೆ. ಬಿಡದೇ ಕಾಡುತ್ತಿರುವ ಸತ್ತವರ ನೆರಳು ಒಂದುಕಡೆಯಾದ್ರೆ, ಮತ್ತೊಂದೆಡೆ ಇತರೆ ರೋಗಗಳಿಗೆ ಸೂಕ್ತ ಚಿಕಿತ್ಸೆ ಸಿಗದೇ ಪರದಾಡುತ್ತಿರುವ ದೃಶ್ಯಗಳು, ಒಟ್ಟಿನಲ್ಲಿ ಹಳ್ಳಿಗಳು ಈಗ ಕೊರೋನಾ ಹಾಟ್‌ಸ್ಪಾಟ್ ಆಗಿವೆ.

ಹೌದು. ಕೆಣಟಿಜಜಜಿಟಿಜಜರೊನಾ 1ನೇ ಅಲೆಯಲ್ಲಿ ಸುರಕ್ಷಿತವಾಗಿದ್ದ ಹಳ್ಳಿಗಳಲ್ಲಿ ಇದೀಗ ಕೋವಿಡ್–19 ಎರಡನೇ ಅಲೆ ಸಾವುನೋವುಗಳನ್ನು ತಂದೊಡ್ಡಿದೆ. ಗ್ರಾಮಗಳಲ್ಲಿನ ಮುಗ್ಧ ಜೀವಗಳು ಸದ್ದಿಲ್ಲದೇ ಮಣ್ಣು ಸೇರುತ್ತಿವೆ. ಸದಾ ಹಸನ್ಮುಖೀಗಳಾಗಿ ಆರೋಗ್ಯವಂತ ಜೀವನ ನಡೆಸಿದ್ದ ಹಳ್ಳಿಗರಲ್ಲಿ ಸೂತಕದ ಛಾಯೆ ಅವರಿಸಿದ್ದು, ಎಲ್ಲೆಡೆ ಸ್ಮಶಾನ ಮೌನ ಆವರಿಸಿದೆ. ಒಂದು ಕಡೆ ಲಾಕ್‌ಡೌನ್‌ನಿಂದ ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡು, ಬೆಳೆದ ಬೆಳೆಗಳಿಗೂ ಸೂಕ್ತ ಬೆಲೆ ಸಿಕ್ಕದೇ ಒದ್ದಾಡುತ್ತಿದ್ದರೆ, ಇನ್ನೊಂದೆಡೆ ಮನೆಗೆ ಕೊರೊನಾ ವಕ್ಕರಿಸಿಕೊಂಡಿದ್ದು, ಚಿಕಿತ್ಸೆ ಪಡೆಯಲು ಪರದಾಟ ನಡೆಸುವ ಸ್ಥಿತಿ ಹಳ್ಳಿಗಳದ್ದಾಗಿದೆ. 60% ರಷ್ಟು ಹೊಸ ಪ್ರಕರಣಗಳು ಹಳ್ಳಿಗಾಡಿನಲ್ಲಿ ಪತ್ತೆಯಾಗುತ್ತಿರುವುದು ಆತಂಕದ ವಿಚಾರವಾಗಿದೆ.

ಹಳ್ಳಿಗಳಲ್ಲಿನ ಕೋವಿಡ್ ಪ್ರಮಾಣ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿ ಇದೆ. ಉತ್ತರ ಪ್ರದೇಶದಲ್ಲಿ ನಿರಂತರವಾಗಿ ಏರಿಕೆಯಾಗುತ್ತಿದೆ. ಉತ್ತರ ಪ್ರದೇಶದಲ್ಲಿ ಜನವರಿಯಲ್ಲಿ 69.01 ರಷ್ಟು ಇದ್ದದ್ದು, ಫೆಬ್ರವರಿಯಲ್ಲಿ 70.04, ಮಾರ್ಚ್‌ನಲ್ಲಿ 58.09, ಏಪ್ರಿಲ್‌ನಲ್ಲಿ 69.09 ಇದ್ದರೆ. ಮೇ ನಲ್ಲಿ 78.04 ಕ್ಕೆ ಹೆಚ್ಚಳವಾಗಿದೆ. ರಾಜಸ್ಥಾನದಲ್ಲಿ ಜನವರಿಯಲ್ಲಿ 69.04 ಫೆಬ್ರವರಿಯಲ್ಲಿ 64, ಮಾರ್ಚ್ ನಲ್ಲಿ 72.03 ಏಪ್ರಿಲ್ ನಲ್ಲಿ 73.8 ಮೇ ನಲ್ಲಿ 74.03. ಹೆಚ್ಚಳವಾಗಿದೆ.

ಮಹಾರಾಷ್ಟ್ರದಲ್ಲಿ ಜನವರಿಯಲ್ಲಿ 40.07, ಪೆಬ್ರವರಿಯಲ್ಲಿ 48.9 ಮಾರ್ಚ್ ನಲ್ಲಿ 46.04, ಏಪ್ರಿಲ್ ನಲ್ಲಿ 49.05 ಮೇ ನಲ್ಲಿ 65.9 ರಷ್ಟು ಏರಿಕೆಯಾಗಿದೆ. ಕರ್ನಾಟಕದಲ್ಲಿ ಜನವರಿಯಲ್ಲಿ 45.07 ರಷ್ಟು ಇದ್ದದ್ದು ಫೆಬ್ರವರಿಯಲ್ಲಿ 41.07, ಮಾರ್ಚ್‌ನಲ್ಲಿ 34.08 ಏಪ್ರಿಲ್ ನಲ್ಲಿ 37.04 ಇದ್ದದ್ದು ಈಗ 54.08 ಕ್ಕೆ ಏರಿಕೆಯಗಿರುವುದು ಆತಂಕವನ್ನು ಸೃಷ್ಟಿಸುತ್ತಿದೆ.

ಕೇರಳ ರಾಜ್ಯದಲ್ಲಿ ಮಾತ್ರ ಗ್ರಾಮೀಣ ಭಾಗದಲ್ಲಿ ನಿಯಂತ್ರಣಕ್ಕೆ ತರುವು ಪ್ರಯತ್ನ ನಡೆಯುತ್ತಿದೆ. ಜನವರಿಯಲ್ಲಿ 49.0 ಇದ್ದದ್ದು ಫೆಬ್ರವರಿಯಲ್ಲಿ 48.07, ಮಾರ್ಚ್‌ನಲ್ಲಿ 44.06, ಏಪ್ರಿಲ್‌ನಲ್ಲಿ 41.04 ಮೇ ನಲ್ಲಿ 43.05 ರಷ್ಟಿದೆ. ಕೇರಳದಲ್ಲಿ ಆಸ್ಪತ್ರೆಗಳಲ್ಲಿ ಸೂಕ್ತ ಸೌಲಭ್ಯ ಇರುವಂತದ್ದು ವಿಶೇಷವಾಗಿ ಗ್ರಾಮೀಣ ಪ್ರದೇಶದ ಆರೋಗ್ಯ ಕೇಂದ್ರಗಳಲ್ಲಿ ಆರೈಕೆಯನ್ನು ಮುತುವರ್ಜಿಯಿಂದ ಮಾಡಲಾಗುತ್ತಿದೆ. ಆಕ್ಸಿಜನ್, ಬೆಡ್, ಲಸಿಕೆ ವಿಚಾರದಲ್ಲಿ ಕೇರಳ ರಾಜ್ಯ ನಿರ್ಲಕ್ಷ್ಯವನ್ನು ಮಾಡದೆ. ನಿರಂತರವಾಗಿ ವಿತರಣೆ ಮಾಡುತ್ತಿದೆ.

ಈ ರಾಜ್ಯಗಳಲ್ಲಿ ಒಂದೊಂದು ಪ್ರದೇಶದಲ್ಲಿ ಭಿನ್ನವಾಗಿ ಕಂಡರೂ ಹಳ್ಳಿಗಳಲ್ಲಿ ಕೋವಿಡ್ ಹೆಚ್ಚಾಗುತ್ತಿರುವುದು ಅಪಾಯದ ಸಂಕೇತವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ಹೆಚ್ಚಾಗುವುದಕ್ಕ ಸರಕಾಗಳು ಕೊಡುತ್ತಿರುವ ಕಾರಣ ಏನು ಅಂದ್ರೆ ನಗರ ಪ್ರದೇಶಕ್ಕೆ ದುಡಿಯುವುದಕ್ಕಾಗಿ ವಲಸೆ ಬಂದಿದ್ದ ಕಾರ್ಮಿಕರು ಹಳ್ಳಿಗಳಿಗೆ ಹೋದ್ರು, ಆ ಕಾರಣದಿಂದಾಗಿ ಕೋವಿಡ್ ಪ್ರಮಾಣ ಹೆಚ್ಚಾಗಿದೆ ಎಂದು ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳು ಗಂಭೀರ ಆರೋಪವನ್ನು ಮಾಡುತ್ತಿದ್ದರೆ, ವಲಸೆ ಕಾರ್ಮಿಕರು ಮಾತ್ರ ಸರಕಾರದತ್ತ ಬೊಟ್ಟುಮಾಡಿ ತೋರಸ್ತಿದ್ದಾರೆ. ಹಳ್ಳಿಗಳಿಗೆ ಕೋವಿಡ್ ಹರಡಲು ಸರಕಾರ ಹಾಗೂ ಸರಕಾರ ಜಾರಿ ಮಾಡಿದ ಲಾಕ್‌ಡೌನ್ ಕಾರಣ ಎಂದು ಆರೋಪಿಸಿದ್ದಾರೆ.

ನೆಮ್ಮದಿಯಾಗಿದ್ದ ಹಳ್ಳಿಗಳಿಗೆ ಕೋವಿಡ್ ಅಂತೂ ಬಂದಾಗಿದೆ. ಆದರೆ ಅದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸರಕಾರಗಳು ಇನ್ನು ಮುತುರ್ಜಿ ತೋರುತ್ತಿಲ್ಲ. ಮೊದಲೆ ಹಳ್ಳಿಗಳೆಂದರೆ ಮೂಗು ಮುರಿಯುವ ಸರಕಾರ ಇಂತಹ ಸಂದರ್ಭದಲ್ಲಾದರೂ ಎಚ್ಚೆತ್ತುಕೊಂಡು ಹಳ್ಳಿಗಳಿಗೆ ರಕ್ಷಣೆ ನೀಡಬೇಕಿತ್ತು ಆದರೆ ಎಲ್ಲಾ ವಿಚಾರದಲ್ಲೂ ಹಳ್ಳಿಗಳಿಗೆ ಸರಕಾರ ತಾರತಮ್ಯ ಮಾಡುತ್ತಿದೆ ಎಂಬುದಕ್ಕೆ ಇಲ್ಲೊಂದು ರಿಪೋರ್ಟ್ ಇದೆ ನೋಡೋಣ ಬನ್ನಿ.

ಸರಕಾರ ಲಸಿಕೆ ವಿತರಣೆಯಲ್ಲಿ ಗ್ರಾಮೀಣ ಪ್ರದಶಕ್ಕೊಂದು, ನಗರಪ್ರದೇಶಕ್ಕೊಂದು ತಾರತ್ಮವನ್ನು ಮಾಡಿದಂತೆ ಕಾಣುತ್ತಿದೆ. ನಗರ ಪ್ರದೇಶಕ್ಕೂ, ಗ್ರಾಮೀಣ ಪ್ರದೇಶಕ್ಕೂ ದೊಡ್ಡ ಪ್ರಮಾಣದಲ್ಲಿ ಲಸಿಕೆ ವಿತರಣೆಯಲ್ಲಿ ಅಸಮಾನತೆ ಕಂಡು ಬರುತ್ತಿದೆ. ಲಸಿಕೆ ವಿತರಣೆಯಲ್ಲಿ ಮೊದಲ ಡೋಸ್ ನ್ನು ಪಡೆದ ರಾಜ್ಯಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ವ್ಯತ್ಯಾಸ ಇದೆ. ಮಹಾರಾಷ್ಟ್ರದಲ್ಲಿ ನಗರ ಪ್ರದೇಶದಲ್ಲಿ 100 ಜನರಲ್ಲಿ ಮೊದಲ ಡೋಸ್ ನ್ನು 32.14 ರಷ್ಟು ಜನ ಪಡೆದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ 14.71 ರಷ್ಟು ಜನ ಪಡೆದುಕೊಂಡಿದ್ದಾರೆ. ಮದ್ಯಪ್ರದೇಶದಲ್ಲಿ ನಗರ ಪ್ರದೇಶದಲ್ಲಿ 100 ಜನರಲ್ಲಿ ಮೊದಲ ಡೋಸ್ ನ್ನು 23.18 ರಷ್ಟು ಜನ ಪಡೆದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ 10.86 ರಷ್ಟು ಜನ ಪಡೆದುಕೊಂಡಿದ್ದಾರೆ. ಕರ್ನಾಟಕದಲ್ಲಿ ನಗರ ಪ್ರದೇಶದಲ್ಲಿ 100 ಜನರಲ್ಲಿ ಮೊದಲ ಡೋಸ್ ನ್ನು 23.44 ರಷ್ಟು ಜನ ಪಡೆದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ 17.17 ರಷ್ಟು ಜನ ಪಡೆದುಕೊಂಡಿದ್ದಾರೆ. ಹೀಗೆ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಲಸಿಕೆಯ ವ್ಯತ್ಯಾಸವನ್ನು ನಾವು ತಿಳಿಯಬಹುದು.

ಎರಡು ಡೋಸ್ ನ್ನು ನೀಡುತ್ತಿರುವ ರಾಜ್ಯಗಳಲ್ಲಿ ಮಹಾರಾಷ್ಟ್ರದಲ್ಲಿ ಗ್ರಾಮೀಣ ಪ್ರದೇಶದಲ್ಲಿ 2.86 ನಷ್ಟು ಲಸಿಕೆ ನೀಡಿದ್ದರೆ. ನಗರ ಪ್ರದೇಶದಲ್ಲಿ 7.25 ಪ್ರತಿಶತ ಜನರಿಗೆ ಲಸಿಕೆ ನೀಡಲಾಗಿದೆ. ಅಂದರೆ ಗ್ರಾಮಣ ಭಾಗದಲ್ಲಿ 100 ಜನರಿಲ್ಲಿ ಇಬ್ಬರಿಂದ ಮೂರು ಜನರಿಗೆ. ನಗರ ಪ್ರದೇಶದಲ್ಲಿ 7 ರಿಂದ 8 ಜನರಿಗೆ ವಿತರಣೆ ಮಾಡಲಾಗುತ್ತಿದೆ. ಮಧ್ಯಪ್ರದೇಶದಲ್ಲಿ ನಗರ ಪ್ರದೇಶದಲ್ಲಿ 4.96, ಗ್ರಾಮೀಣ ಪ್ರದೇಶದಲ್ಲಿ 1.84ರಷ್ಟು ಜನರಿಗೆ ಲಸಿಕೆ ನೀಡಿದ್ರೆ. ಕರ್ನಾಟಕದಲ್ಲಿ ನಗರ ಪ್ರದೇಶದಲ್ಲಿ 5.82 ರಷ್ಟು, ಗ್ರಾಮೀಣ ಭಾಗದಲ್ಲಿ 3.4 ರಷ್ಟು ಜನರಿಗೆ ಲಸಿಕೆ ಹಾಕಿಸಿಕೊಂಡಿದ್ದಾರೆ.

ವಿವಿಧ ವರ್ಗದ ಫಲಾನುಭವಿಗಳಿಗೆ ಇದುವರೆಗೆ ಒಂದು ಕೋಟಿಗಿಂತ ಹೆಚ್ಚು ಪ್ರಮಾಣದ ಲಸಿಕೆಗಳನ್ನು ನೀಡಿದ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವು ಒಂದು ಆದರೂ, ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಸಾಕಷ್ಟು ಅಂತರವಿದೆ. ಮೇ 20 ರವರೆಗೆ ರಾಜ್ಯದಲ್ಲಿ 1,17,94,907 ಜನರಿಗೆ ಲಸಿಕೆ ನೀಡಲಾಗಿದೆ. ಇದರಲ್ಲಿ 92,23,948 ಜನ ಮೊದಲ ಲಸಿಕೆ ಪಡೆದಿದ್ದರೆ. 25,70,959 ಜನ ಎರಡನೇ ಲಸಿಕೆ ಪಡೆದಿದ್ದಾರೆ. ರಾಜುಕ್ಕೆ ಬಂದ ಲಸಿಕೆಯಲ್ಲಿ 20% ಕ್ಕಿಂತ ಹೆಚ್ಚು ಲಸಿಕೆಯನ್ನು ಬೆಂಗಳೂರಿನಲ್ಲಿ ನೀಡಲಾಗಿದೆ. ಇದು ಬಿಬಿಎಂಪಿ ಪ್ರದೇಶಗಳಲ್ಲಿ 18.73% ಆಗಿದ್ದರೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ 2.75% ಆಗಿದೆ. ಮೈಸೂರಿನಲ್ಲಿ ಒಟ್ಟು ಡೋಸೇಜ್‌ಗಳಲ್ಲಿ 7.05% ಅನ್ನು ನೀಡಲಾಗಿದೆ. ಯಾದಗಿರಿ ಮತ್ತು ಕೊಡುಗಿನಲ್ಲಿ 1% ಡೋಸ್ ಗಳನ್ನು ನೀಡಲಾಗಿದೆ. ಲಸಿಕೆಯ ಕೊರತೆ, ಆ ಜಿಲ್ಲೆಗಳಿಗೆ ಸರಿಯಾಗಿ ಹಂಚದಿರುವ ಅಸಮಾನತೆಯನ್ನು ಇದು ತೋರುತ್ತಿದೆ.

ಒಟ್ಟಾರೆ ಈ ಅಂಕಿ ಅಂಶದ ಪ್ರಕಾರ ಬೆಂಗಳೂರು ನಗರವು ಮೇ 20 ರವರೆಗೆ 100 ಜನರಲ್ಲಿ 26 ಜನರಿಗೆ ಲಸಿಕೆ ನೀಡಿದ್ದರೆ. ಕರ್ನಾಟಕದ ಉಳಿದ ಜಿಲ್ಲೆಗಳು 100 ಜನರಲ್ಲಿ 18 ಜನರಿಗೆ ಲಸಿಕೆ ನೀಡಲಾಗಿದೆ.. ಎರಡನೆಯ ಲಸಿಕೆ ನೀಡುವಲ್ಲಿ ಈ ಅಸಮಾನತೆಯು ಹೆಚ್ಚು ಸ್ಪಷ್ಟವಾಗಿರುತ್ತದೆ. ಬೆಂಗಳೂರು ನಗರದಲ್ಲಿ 100 ಜನರಲ್ಲಿ 7 ಜನರಿಗೆ ಲಸಿಕೆ ನೀಡಿದರೆ, ಡೋಸ್‌ಗಳನ್ನು ಇತರ ಜಿಲ್ಲೆಗಳಲ್ಲಿ 3 ಜನರಿಗೆ ಮಾತ್ರ ಸಲಿಕೆ ನೀಡಲಾಗುತ್ತಿದೆ. ಲಸಿಕೆಯನ್ನು ನೀಡುವುದಕ್ಕೆ ಗ್ರಾಮೀಣ ಭಾಗದಲ್ಲಿ ಸೌಲಭ್ಯಗಳಲ್ಲಿಲ್ಲ ಅಂತಾ ಅಲ್ಲ. ಅಲ್ಲೂ ಸೌಲಭ್ಯಗಳಿವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಹಾಕುವ ವ್ಯವಸ್ಥೆ ಮಾಡಲಾಗುತ್ತಿತ್ತು. ಆದರೆ. ಲಸಿಕೆಯ ಕೊರತೆ ಇದಕ್ಕೆ ಮುಖ್ಯ ಕಾರಣ ಆಗಿದೆ. ನಗರ ಪ್ರದೇಶದಲ್ಲಿ ಒಂದಿಷ್ಟು ಜನ ಲಸಿಕೆ ವಿತರಣೆಗೆ ಪ್ರತಿರೋಧ ತೋರಿದ್ದಾಗಿ ಲಸಿಕೆ ಅಭಿಯಾನ ನಗರ ಪ್ರದೇಶಕ್ಕೆ ತಿರುಗಿ ಗ್ರಾಮೀಣ ಪ್ರದೇಶಗಳನ್ನು ನಿರ್ಲಕ್ಷ್ಯ ಮಾಡಲಾಯಿತು.

ಗ್ರಾಮೀಣ ಪ್ರದೇಶದಲ್ಲಿ ಕೋವಿಡ್ ವಾರಿಯರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೆ ಸರಿಯಾದ ಸೌಲಭ್ಯಗಳನ್ನು ನೀಡುತ್ತಿಲ್ಲ. ಪಿಪಿಇ ಕಟ್ಟೆ ಕಥೆ ದೂರ ಇಳಿತು. ಕನಿಷ್ಟ ಗ್ಲೌಸ್, ಸ್ಯಾನೀಟೈಸರ್, ಟ್ಯಾಬ್ಲೆಟ್ ಗಳ ಕಿಟ್ ನೀಡುತ್ತಿಲ್ಲ. ಇದು ಅವರ ಆರೋಗ್ಯದ ಮೇಲೆ ಸಮಸ್ಯೆ ಬೀರುವ ಜೊತೆಗೆ ಇತರರ ಮೇಲೂ ಪ್ರಭಾವ ಬೀರುತ್ತದೆ. ಕೋವಿಡ್ ವಾರಿಯರ್‌ಗಳು ಕೋವಿಡ್ ಪೀಡಿತರ ಮನೆಗೆ ಭೇಟಿ ಕೊಡಬೇಕಾಗುತ್ತೆ. ಅವರು ಆಸ್ಪತ್ರೆ ಸೇರುವಂತೆ ನೋಡಿಕೊಳ್ಳಬೇಕಾಗುತ್ತು. ಅದೇ ವೇಳೆ ಅವರು ಇತರರ ಮನೆಗೆ ಭೇಟಿ ಕೊಟ್ಟಾಗ ಅವರನ್ನು ಅನುಮಾನದಿಂದ ನೋಡುವುದು, ಅವಮಾನ ಮಾಡುತ್ತಿರುವುದು ಅನೇಕ ಕಡೆಗಳಲ್ಲಿ ಕಂಡು ಬುತ್ತಿದೆ.

ಮುಖ್ಯವಾಗಿ ಜನಜಾಗೃತಿ ಮೂಡಿಸುವಲ್ಲಿ ಸರಕಾರ ಮತ್ತು ಜಿಲ್ಲಾಡಳಿತಗಳು ವಿಫಲವಾಗುತ್ತಿರುವುದನ್ನು ನೋಡುತ್ತಿದ್ದೇವೆ. ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜ್ವರ, ಶೀತ, ಕೆಮ್ಮಿನ ಚಿಕಿತ್ಸೆಗಾಗಿ ಜನ ಕಿಕ್ಕಿರಿದು ಸೇರುತ್ತಿದ್ದಾರೆ. ಇವರ್‍ಯಾರಿಗೂ ಕೊರೊನಾ ಪರೀಕ್ಷೆ ನಡೆಯುತ್ತಿಲ್ಲ. ಮುನ್ನೆಚ್ಚರಿಕೆ ಕ್ರಮಗಳ ಕುರಿತು ಅರಿವು ಮೂಡಿಸುವವರಿಲ್ಲ. ಬೆಳಗ್ಗೆ ಎದ್ದ ತಕ್ಷಣ ಗುಟಕಾ, ಎಲೆ ಅಡಿಕೆ ಹಾಕಿಕೊಂಡು ಜಿಗಿಯುತ್ತಾ ಊರ ತುಂಬಾ ಓಡಾಡುವವರ ಸಂಖ್ಯೆ ಹೆಚ್ಚಿರುತ್ತದೆ. ಇದರಲ್ಲಿ ಯಾರೊಬ್ಬರಿಗಾದರೂ ಕೊರೊನಾ ಬಂದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ.

ಕ್ವಾರಂಟೈನ್ ನಿಯಮಾವಳಿಯೇ ಪಾಲನೆಯಾಗುತ್ತಿಲ್ಲ. ಇನ್ನೂ ಜಿಲ್ಲಾಡಳಿತ, ತಾಲೂಕಾಡಳಿತ ಆಯಾ ಗ್ರಾಪಂಗಳು ಬರೀ ಧ್ವನಿವರ್ಧಕಗಳ ಮೂಲಕ ಟೆಸ್ಟ್ ಮಾಡಿಸಿಕೊಳ್ಳಿ, ಬೇರೆ ಊರಿಂದ ಬಂದವರು ಕ್ವಾರಂಟೈನ್ ಆಗಿ ಎಂದು ಹೇಳುತ್ತಿದೆ. ಕ್ವಾರಂಟೈನ್ ಆಗೋದಕ್ಕೆ ಹಳ್ಳಿಗಳಲ್ಲಿ ಬಹುತೇಕರು 20*30 ಜಾಗದಲ್ಲಿ ಜೀವನ ಮಾಡುತ್ತಿರುತ್ತಾರೆ. ಎಷ್ಟೋಜನ ಗುಡಿಸಲು ವಾಸಿಗಳಾಗಿದ್ದಾರೆ. ಊರಿಗೆ ಬಂದವರು ಪರೀಕ್ಷಿಸಿ ಕನಿಷ್ಟ 15 ದಿನಗಳ ಕಾಲ ತಾಲ್ಲೂಕಿಗೊಂದು ಕ್ವಾರಂಟೈನ್ ಕೇಂದ್ರ ತೆರೆದಿದ್ದರೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ಹೀಗಾಗಿ, ಗ್ರಾಮೀಣ ಪ್ರದೇಶಕ್ಕೆ ಮರಳಿ ಬಂದವರೆಲ್ಲರೂ ಬೇಕಾಬಿಟ್ಟಿಯಾಗಿ ಓಡಾಡಿದರು. ಇದರ ಪರಿಣಾಮ ಕೋವಿಡ್ ಈಗ ಇಡೀ ಊರೆಲ್ಲ ಹಬ್ಬುತ್ತಿದೆ.

ಹೀಗೆ ಹಳ್ಳಿ ಹಳ್ಳಿಗಳಿಗೆ ಕೊರೋನಾ ಹಬ್ಬುತ್ತಿದ್ದರೂ ಗ್ರಾಮೀಣ ಪ್ರದೇಶದಲ್ಲಿ ತಾವಾಗಿಯೇ ಟೆಸ್ಟ್ ಮಾಡಿಸಿಕೊಳ್ಳಲು ಮಾತ್ರ ಜನತೆ ಮುಂದೆ ಬರುತ್ತಿಲ್ಲ. ನೆಗಡಿ, ಕೆಮ್ಮು, ಜ್ವರ, ಮೈ ಕೈ ನೋವು ಕಾಣಿಸಿಕೊಂಡರೂ ಇದು ಕೊರೋನಾ ಅಲ್ಲ ಎಂಬ ನಿರ್ಲಕ್ಷ್ಯ ಭಾವನೆ ತಾಳುತ್ತಿದ್ದಾರೆ. ಟೆಸ್ಟ್ ಮಾಡಿಸಿಕೊಳ್ಳಲು ಹೋದರೆ ಕೊರೋನಾ ಪಾಸಿಟಿವ್ ಬಂದಿದೆ ಎಂದು ಹೇಳಿ ಬಿಡುತ್ತಾರೋ ಎಂಬ ಭೀತಿ ಎಲ್ಲರಲ್ಲೂ ಮನೆ ಮಾಡಿದೆ. ಎಲ್ಲಿ ಸಾರ್, ಟೆಸ್ಟ್ ಮಾಡಿಸೋಕೆ ಹೋದರೆ ಕೊರೋನಾ ಪಾಸಿಟಿವ್ ಎಂದರೆ ಏನು ಮಾಡೋದು? ಮರಳಿ ವಾಪಸ್ ಬರುತ್ತೇವೆ ಎಂಬ ನಂಬಿಕೆ ಕೂಡ ಇಲ್ಲ. ಅದಕ್ಕೆ ಟೆಸ್ಟ್ ಮಾಡಿಸಿಕೊಳ್ಳೊಕೆ ಹೋಗುತ್ತಿಲ್ಲ ಎಂದು ಹೇಳುವುದು ಮಾಮೂಲಿಯಾಗಿದೆ. ಇತ್ತೀಚೆಗೆ ಇಂತಹ ನಿರ್ಲಕ್ಷ್ಯದಿಂದಾಗಿ ಹಲವುಜನ ಸಾಯುತ್ತಿದ್ದಾರೆ.

ಹಾಗಾಗಿ ಸರಕಾರ ಜನಜಾಗೃತಿ ಮೂಡಿಸಲು ಪಂಚಾಯತ್ ಮಟ್ಟದಲ್ಲಿ ಯೋಜನೆಗಳನ್ನು ಹಾಕಿಕೊಳ್ಳಬೇಕಿದೆ. ವಿಶೇಷವಾಗಿ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಜನ ಕೋವಿಡ್ ಬಗ್ಗೆ ಅಷ್ಟಾಗಿ ತಲೆ ಕೆಡಸಿಕೊಂಡಿಲ್ಲ. ಅವರಿಗೆ ಇದರ ಬಗ್ಗೆ ಅರಿವು ಮೋಡಿಸಬೇಕಿದೆ. ಕಲ್ಯಾಣ ಕರ್ನಾಕದ ಕೆಕೆಆರ್‌ಡಿಬಿಯಲ್ಲಿ ಬಳಕೆ ಆಗದೆ ಬಿದ್ದರುವ ದುಡ್ಡಲ್ಲಿ ಕನಿಷ್ಟ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸುವ ಕ್ರೀಯಾಯೋಜನೆ ಹಾಕಬೇಕಿದೆ. ಬೆಡ್, ಆಕ್ಸಿಜನ್ ಸೇರಿದಂತೆ ಮೂಲ ಸೌಲಭ್ಯಗಳ ಕಡೆ ಸರಕಾರ ಮತ್ತು ಜಿಲ್ಲಾಡಳಿತಗಳು ಹೆಚ್ಚು ಮುತುವರ್ಜಿ ವಹಿಸಬೇಕಿದೆ.

ಇನ್ನೂ ಸರಕಾರ ತನ್ನ ವೈಫಲ್ಯಗಳನ್ನು ಮರೆಮಾಚಿಕೊಳ್ಳಲು ಮತ್ತೆ 14 ದಿನಗಳ ಕಾಲ ಲಾಕ್‌ಡೌನ್ ವಿಸ್ತರಿಸಿದೆ. ಜೂನ್ 7 ರವರೆಗೆ ಕಟ್ಟುನಿಟ್ಟಿನ ನಿಯಮಗಳು ಜಾರಿಯಲ್ಲಿರುತ್ತವೆ ಅಂತಾ ಸಿಎಂ ಹೇಳಿದ್ದಾರೆ. ಅಗತ್ಯ ಕ್ರಮಗಳನ್ನು ಕೈಗೊಳ್ಳದೆ, ಮೂಲಸೌಲಭ್ಯಗಳನ್ನು ನೀಡದೆ, ವೈದ್ಯಕೀಯ ವ್ಯವಸ್ಥೆಯನ್ನು ಬಲಪಡಿಸದೆ ಲಾಕ್‌ಡೌನ್ ನ್ನು ಇನ್ನೆರಡು ತಿಂಗಳು ವಿಸ್ತರಿಸಿದರೂ ಯಾವ ಪ್ರಯೋಜನ ಇಲ್ಲ. ಸರಕಾರಕ್ಕೆ ಇದು ಯಾಕೋ ಅರ್ಥವಾದಂತೆ ಕಾಣುತ್ತಿಲ್ಲ. ಇತ್ತ ಒತ್ತಾಯಪೂರ್ವಕ್ ಲಾಕ್‌ಡೌನ್ ಹೇರಿ, ಅತ್ತ ಮೂಗಿಗೆ ತುಪ್ಪ ಸವರುವ ಪ್ಯಾಕೇಜ್ ಘೋಷಣೆ ಮಾಡಿರುವುದು ಸಾರ್ವಜನಿಕರಿಗೆ ಯಾವುದೇ ಸಹಾಯವಾಗಿಲ್ಲ.

ಜನ ಸಾಯಲಿ, ಕೋವಿಡ್ ಸಂಖ್ಯೆ ಹೆಚ್ಚಾಗಲಿ ಬಿಡಲಿ ಲಾಕ್‌ಡೌನ್ ಜಾರಿಯಾಗಬೇಕು. ಯಾರೂ ಹೊರಗೆ ಬರಬಾರದು ಹೊರಗೆ ಬಂದ್ರೆ ಪೋಲೀಸರು ನೋಡ್ಕೋತಾರೆ ಅಂತ ಮೌನಕ್ಕೆ ಶರಣಾಗಿದ್ದಾರೆ. ಇನ್ನೂ ಪ್ರಧಾನಿ ಮೋದಿ ಸರಿಯಾದ ಲಸಿಕೆ, ಆಕ್ಸಿಜನ್ ವಿತರಿಸುವಲ್ಲಿ ಕೇಂದ್ರ ಸರಕಾರ ಸೋತಿದೆ ಎಂಬುದನ್ನು ಒಪ್ಪಿಕೊಳ್ಳುವ ಬದಲು ಕೋವಿಡ್ ನಿಂದ ಮಡಿದವರಿಗೆ ಶ್ರದ್ಧಾಂಜಲಿ ಎಂದು ಭಾವನಾತ್ಮಕವಾಗಿ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಸರಕಾರ ಇಂತಹ ಉದ್ಧಟತನಗಳನ್ನು ಬಿಟ್ಟು ಜನರ ಜೀವ ಉಳಿಸುವ ಕ್ರಮಗಳನ್ನು ಜಾರಿ ಮಾಡಬೇಕಿದೆ. ■

ಸ್ತ್ರೀವಾದ ಅಂಚಿನಿಂದ ಕೇಂದ್ರದೆಡೆಗೆ

ಅತಿಥಿ ಅಂಕಣ



ಡಾ. ಕೇಶವ ಶರ್ಮ ಕೆ.

ಬೆಲ್ ಹುಕ್ಸ್ ಸ್ತ್ರೀವಾದದ ದೃಷ್ಟಿಯಿಂದ ಅತ್ಯಂತ ಮಹತ್ವದ ಲೇಖಕಿ. ಅವಳ ಪುಸ್ತಕ 'ಫೆಮಿನಿಸ್ಟ್ ಥಿಯರಿ ಫ್ರಂ ಮಾರ್ಜಿನ್ ಟು ಸೆಂಟರ್', "ಸ್ತ್ರೀವಾದ ಅಂಚಿನಿಂದ ಕೇಂದ್ರದೆಡೆಗೆ" ಆಗಿ ಕನ್ನಡಕ್ಕೆ ಬಂದಿದೆ. ಬೆಲ್ ಹುಕ್ಸ್ ಬರೀ ಲೇಖಕಿ ಮಾತ್ರವೇ ಅಲ್ಲ. ಆಕೆ ಹೋರಾಟಗಾರ್ತಿಯೂ ಹೌದು. ನಮಗೆ ಸ್ತ್ರೀವಾದವನ್ನು ಬೇರೆ ದಿಕ್ಕಿನಲ್ಲಿ ನೋಡಲು ಈ ಕೃತಿಯು ಸಹಾಯವನ್ನು ಮಾಡುತ್ತದೆ. ನಮಗೆ ಇದು ಅನುವಾದದ ಕೃತಿಯೆಂದು ಅನಿಸುವುದಿಲ್ಲ. ಇದರ ಮೂಲ ಕೃತಿಯು ಕೂಡಾ ಅತಿ ಗಂಭೀರವಾದ, ಹುಬ್ಬು ಗಂಟಿಕ್ಕಿ ಬರೆದ ಬರಹ ಎಂದು ಅನಿಸುವುದಿಲ್ಲ. ಇದು ನಮಗೆ ಒಂದು ಆತ್ಮಚರಿತ್ರೆ ಅಥವಾ ಕಪ್ಪು ಜನಾಂಗದ ಒಬ್ಬಳು ಮಹಿಳೆಯ ಜೀವನ ಕ್ರಮದ ಚಿತ್ರಣ ಎಂದು ಭಾಸವಾಗುತ್ತದೆ.


ಎರಡು ಅತ್ಯಂತ ಮುಖ್ಯವಾದ ಚರ್ಚೆಗಳು ಇವತ್ತು ಚಾಲ್ತಿಯಲ್ಲಿವೆ. ಒಂದನ್ನು ನಾವು ರಚನಾವಾದ ಎಂದು ಹೇಳುತ್ತೇವೆ. ಎರಡನೆಯ ಚರ್ಚೆಯನ್ನು ರಚನೋತ್ತರವಾದ ಎಂದು ಕರೆಯುತ್ತಾರೆ. ರಚನಾವಾದವನ್ನು ನಾವು ಕೇಂದ್ರ ಮತ್ತು ಪರಿಧಿಯ ಕಲ್ಪನೆಯಲ್ಲಿ ವಿವರಿಸುತ್ತೇವೆ. ಯಾವುದೇ ರಚನೆಗೆ ಒಂದು ಕೇಂದ್ರವಿರುತ್ತದೆ. ಅದಕ್ಕೆ ಅನುಸಾರವಾಗಿ ರಚನೆಯು ಇರುತ್ತದೆ. ಅದರ ರೂಪವನ್ನು ಕೂಡಾ ನಾವು ಹೀಗೆಯೇ ಗ್ರಹಿಸುವುದು ಅತ್ಯಂತ ಅಗತ್ಯ ಎಂದು ರಚನಾವಾದವು ಹೇಳುತ್ತದೆ. ಮತ್ತೊಂದು ರಚನೆಯನ್ನು ಅಲ್ಲಗಳೆಯುತ್ತದೆ. ರಚನೆಗೆ ನಾವು ಹೆಚ್ಚು ಮಹತ್ವವನ್ನು ಕೊಡಬೇಕಾಗಿಲ್ಲ ಎನ್ನುವುದು ಅದರ ವಾದ. ಇದನ್ನು ರಚನೋತ್ತರವಾದ ಎಂದು ಹೇಳಿದವರೂ ಇದ್ದಾರೆ. ಅದರ ಜೊತೆಗೆ ಕೆಲವರು ನಿರಚನೆಯ ಸಿದ್ಧಾಂತ ಕರೆದಿದ್ದಾರೆ. ಇದು ಬಹುಪತ್ಯ ಎನ್ನುವುದಕ್ಕೆ ಹೆಚ್ಚು ಒತ್ತನ್ನು ಕೊಡುತ್ತದೆ. ಇದು ಸಾಹಿತ್ಯದಲ್ಲಿ ಇರುವ ಪ್ರಶ್ನೆ. ಇದರ ಮತ್ತೊಂದು ಆಯಾಮವನ್ನು ನಾವು ಸಮಾಜವಿಜ್ಞಾನದ ಚರ್ಚೆಯಲ್ಲಿ ಗಮನಿಸುತ್ತೇವೆ. ಒಂದು ರಚನೆಯಲ್ಲಿ ಯಾರು ಕೇಂದ್ರದಲ್ಲಿ ಇರುತ್ತಾರೆ ಮತ್ತು ಯಾರು ಅಂಚಿನಲ್ಲಿ ಇರುತ್ತಾರೆ ಎನ್ನುವುದು ಅದರ ಒಂದು ಪರಿಕಲ್ಪನೆಯು ಆಗಿದೆ. ನಮ್ಮ ಸಬಾಲ್ಟರ್ನ್ ಅಧ್ಯಯನದಲ್ಲಿ ವಿಶೇಷವಾಗಿ ಬಂದಿದೆ ಎಂದು ಗಮನಿಸಬೇಕು. ನಮ್ಮ ಅನೇಕ ಹೋರಾಟಕ್ಕೆ ಇದು ಮೂಲವಾದ ಒಂದು ತಾತ್ವಿಕ ಸಿದ್ಧತೆಯನ್ನು ಇದು ಮಾಡಿಕೊಟ್ಟಿದೆ.

ಕಳೆದ ಕೆಲವು ವರ್ಷಗಳಲ್ಲಿ ಸ್ತ್ರೀವಾದವನ್ನು ಖಚಿತವಾಗಿ ವಿವರಿಸುತ್ತಾ ಬಂದಿರುವ ಶ್ರೀಮತಿ. ಎಚ್.ಎಸ್ ಕೆಲಸವು ಅತ್ಯಂತ ಮಹತ್ವದ್ದು. ಅವರು 'ಸೆಕೆಂಡ್ ಸೆಕ್ಸ್' ಕೃತಿಯನ್ನು ಅನುವಾದ ಮಾಡಿದ್ದು ಒಂದು ಮಹತ್ವದ ಕೆಲಸವಾಗಿತ್ತು. ಒಂದು ಮಾತನ್ನು ಇಲ್ಲಿ ಹೇಳಿದರೆ ಅಪ್ರಸ್ತುತವಾಗದು ಎನ್ನುವ ಧೈರ್ಯದಿಂದ ಹೇಳಬಹುದು. ಕನ್ನಡದ ಅನೇಕ ಲೇಖಕರು ಮತ್ತು ಲೇಖಕಿಯರು ಚರ್ಚೆಯ ಕೇಂದ್ರಕ್ಕೆ ಬರುವುದಿಲ್ಲ. ಅವರೂ ಅಂಚಿನಲ್ಲಿಯೇ ಇರುತ್ತಾರೆ. ಚರ್ಚೆಯಾಗಬೇಕಾದ ಕೃತಿಗಳು ಆಗುವುದಿಲ್ಲ. ಅದು ಬೇರೆ ಪ್ರಶ್ನೆ. ಬೆಲ್ ಹುಕ್ಸ್ ಸ್ತ್ರೀವಾದದ ದೃಷ್ಟಿಯಿಂದ ಅತ್ಯಂತ ಮಹತ್ವದ ಲೇಖಕಿ. ಅವಳ ಪುಸ್ತಕ 'ಫೆಮಿನಿಸ್ಟ್ ಥಿಯರಿ ಫ್ರಂ ಮಾರ್ಜಿನ್ ಟು ಸೆಂಟರ್.' ನಮ್ಮ ಅನೇಕ ಓದುಗರು ಈ ಮಹತ್ವದ ಕೃತಿಯನ್ನು ಓದಬೇಕು. ನಮಗೆ ಇಂಗ್ಲೀಷಿನಲ್ಲಿ ಬಂದ ಪುಸ್ತಕಗಳನ್ನು ಓದಲು ಸಾಧ್ಯವಾಗುವುದಿಲ್ಲ. ನಮಗೆ ಇಂಗ್ಲೀಷ್ ಗೊತ್ತಿಲ್ಲ. ನಾವು ಅನಿವಾರ್ಯವಾಗಿ ಅನುವಾದಕ್ಕೆ ಕಾಯಬೇಕು. ಆದರೂ ಅದು ಅನುವಾದ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಹಲವು ಭಾಷೆಗಳ ಒಂದು ರೂಪವನ್ನು ಸೇರಿಸಿದರೆ ಹೇಗೆ ಇರುತ್ತದೆಯೋ ಅದೇ ರೀತಿಯಲ್ಲಿ ಇಂಗ್ಲೀಷ್ ಇದೆ. ಈ ಸನ್ನಿವೇಶದಲ್ಲಿ "ಸ್ತ್ರೀವಾದ ಅಂಚಿನಿಂದ ಕೇಂದ್ರದೆಡೆಗೆ" ಕೃತಿಯು ಕನ್ನಡಕ್ಕೆ ಬಂದಿದೆ. ಒಂದು ಮಾತನ್ನು ಮೊದಲೇ ಹೇಳಬಹುದು. ಈ ಪುಸ್ತಕವು ನಮಗೆ ಅತ್ಯಂತ ದೊಡ್ಡ ಉಪಕಾರವನ್ನು ಮಾಡಿದೆ. ಯಾಕೆ ಇದನ್ನು ಹೇಳಿದ್ದೇನೆಂದರೆ ಬೆಲ್ ಹುಕ್ಸ್ ಬರೀ ಲೇಖಕಿ ಮಾತ್ರವೇ ಅಲ್ಲ. ಆಕೆ ಹೋರಾಟಗಾರ್ತಿಯೂ ಹೌದು. ಕನ್ನಡದ ಜ್ಞಾನದ ಜಗತ್ತಿಗೆ ಇಂಥಾ ಅನೇಕ ಪುಸ್ತಕಗಳು ಬರಬೇಕಾಗಿದೆ. ಈ ಕೃತಿಯಲ್ಲಿ ನಮಗೆ ಹುಕ್ಸ್ ಹೇಳುವ ನಿಲುವು ಮುಖ್ಯವಾದ್ದು.

19ನೆಯ ಶತಮಾನದಲ್ಲಿ ನಾವು ಅನೇಕ ರೀತಿಯಲ್ಲಿ ಹೋರಾಟವನ್ನು ಮಾಡಿದ್ದೇವೆ. ಶೋಷಣೆಯನ್ನು ವಿರೋಧಿಸುವುದು ನಮ್ಮ ಗುರಿಯಾಗಿದೆ. ಅಧಿಕಾರವನ್ನು ನೋಡುವ ಕ್ರಮಗಳು ಮತ್ತು ಭಿನ್ನವಾಗುತ್ತದೆ. ಹೀಗಾಗಿ ನಾವು ಅಧಿಕಾರ ಮತ್ತು ಅದರ ಸ್ವರೂಪವನ್ನು ನೋಡುವುದು ಬೇರೆ ಕ್ರಮವೇ ಆಗುತ್ತದೆ. ವಾಸ್ತವವಾಗಿ ಹೋರಾಟವೂ ಒಂದು ದೃಷ್ಟಿಯಿಂದ ಬಹಳ ಮಹತ್ವದ ಅಭಿವ್ಯಕ್ತಿಯೇ ಆಗಿರುತ್ತದೆ. ಪ್ರಭುತ್ವವು ತನ್ನನ್ನು ತಾನೇ ನಿರ್ವಚಿಸಲು ಪ್ರಯತ್ನವನ್ನು ಮಾಡುತ್ತದೆ. ಪ್ರಭುತ್ವ ಮತ್ತು ಅದರ ರಾಜಕೀಯವಾದ ಸ್ವರೂಪವನ್ನು ಹೀಗೆ ಇದೆ ಎಂದು ಹೇಳಲು ಬರುವುದೂ ಇಲ್ಲ. ಬೇರೆ ಬೇರೆ ರೀತಿಯ ಪ್ರಭುತ್ವ ಮತ್ತು ಅದರ ಸ್ವರೂಪಗಳು ಇರುತ್ತವೆ. ಅದು ನೀತಿಯನ್ನು ಹೇಳುತ್ತದೆ. ಮತ್ತು ನಮ್ಮ ನಡವಳಿಕೆಯನ್ನು ನಿರ್ಬಂಧಿಸುತ್ತದೆ. ವಾಸ್ತವವಾಗಿ ಕ್ರಿಶ್ಚಿಯಾನಿಟಿಯು ಕೆಲವು ರೀತಿಯ ನಿಯಮವನ್ನು ಹೇರಿತ್ತು. ಮತ್ತು ಈಗಲೂ ಅನೇಕ ಧರ್ಮಗಳು ಪ್ರಭುತ್ವದ ಜೊತೆಗೆ ತಮ್ಮನ್ನು ಗುರುತಿಸಿಕೊಂಡಿವೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಒಂದು ಕಾಲಕ್ಕೆ ಕ್ರಿಶ್ಚಿಯನ್ ಧರ್ಮವು ಸಮಾಜವನ್ನು ನಿಯಂತ್ರಿಸಿದ್ದವು. ಮತ್ತು ಧರ್ಮ ಹಾಗೂ ಅದರ ಲಕ್ಷಣಗಳೂ ಬೇರೆಯಾಗಿದ್ದವು. ವ್ಯಕ್ತಿ ಮತ್ತು ಅವನ ಪಾಪದ ನಿವಾರಣೆಯೇ ಧರ್ಮದ ಗುರಿಯೆಂದು ಅವುಗಳು ಹೇಳಿದ್ದವು. ತಾನು ಕಪ್ಪು ಮಹಿಳೆ ಎಂದು ಹೇಳುತ್ತಾ ನಾವು ಸಾಗಬೇಕಾದ ದಾರಿಯು ಯಾವುದು ಎಂದೂ ಸೂಚಿಸುತ್ತಾಳೆ. (ಪುಟ 91)

ನಮ್ಮ ಚರ್ಚೆಗಳ ಹಿಂದೆ ಬೇರೆ ಬೇರೆ ಒತ್ತಡಗಳೂ ಇರುತ್ತವೆ. ಹಾಗೆಯೇ ಕೆಲವೊಮ್ಮೆ ರಾಜಕೀಯ ಆಸಕ್ತಿಗಳೂ ಇರುತ್ತವೆ. ಚರ್ಚೆಗಳಿಗೆ ಇರುವ ರಾಜಕೀಯ ಆಯಾಮವು ಒಂದು ಅಧಿಕಾರದ ವಿಭಿನ್ನವಾದ ಒಂದು ನಿಲುವನ್ನು ಹೇಳುತ್ತದೆ. ಅದನ್ನು ನಾವು ಯಜಮಾನಿಕೆಯ ನಿಲುವು ಎಂದೂ ಹೇಳಬಹುದು. ಯಾವುದು ಒಂದು ದೇಶದಲ್ಲಿ ಯಜಮಾನಿಕೆಯನ್ನು ಸೂಚಿಸುತ್ತದೆಯೋ ಅದು ತನ್ನ ಹಿತಾಸಕ್ತಿಗಾಗಿ ತನ್ನದೇ ಆದ ಮೌಲ್ಯವನ್ನು ಉಳಿದವರ ಮೇಲೆ ಹೇರುತ್ತದೆ. ಆದರೆ ಸಾಮಾನ್ಯ ಮನುಷ್ಯರು ರಾಜಕಾರಣವನ್ನು ಮತ್ತು ಅಧಿಕಾರದ ಕೇಂದ್ರವನ್ನು ನೋಡುವ ಕ್ರಮಗಳು ಬೇರೆಯಾಗುತ್ತದೆ. ಅವರು ಯಾವುದೇ ವಿಮರ್ಶೆಯನ್ನು ಮಾಡುವುದಿದ್ದರೂ ಅದರ ನಿರೂಪಣೆಯು ಬೇರೆಯಾಗಿರುತ್ತದೆ. ಇದನ್ನು ಅತ್ಯಂತ ಖಚಿತವಾಗಿ ಲೇಖಕಿ ಹೇಳುತ್ತಾಳೆ. ಅವಳಲ್ಲಿ ದಮನ ಎನ್ನುವುದು ಬಹು ಆಯಾಮವನ್ನು ಕೂಡಾ ಪಡೆದಿದೆ. (ಪು.18) ಈಕೆ ಲೇಖಕಿ. ಸಾಮಾಜಿಕ ಕಾರ್ಯಕರ್ತೆ ಆದ್ದರಿಂದ ಅವಳ ಮಾತಿಗೆ ಒಂದು ವಿಶಿಷ್ಟತೆಯು ಇದೆ. (ಅಧ್ಯಾಯ 2)

ಲೇಖಕರು ಮತ್ತು ಬುದ್ಧಿಜೀವಿಗಳು ರಾಜಕಾರಣವನ್ನು ನೋಡುವ ವಿಧಾನವು ಬೇರೆಯಾಗಿರುತ್ತದೆ. ಸಾಧಾರಣ ವರ್ಗದ ಜನರು ರಾಜಕಾರಣವನ್ನು ನೋಡುವ ಕ್ರಮದಲ್ಲಿ ವ್ಯತ್ಯಾಸವಿದೆ. ಅದನ್ನು ಇನ್ನೊಂದರ ಥರ ಹೇಳುವುದು ಸಾಧ್ಯವಿಲ್ಲ. ಯಾವುದೇ ವಾಗ್ವಾದ ಮತ್ತು ಚರ್ಚೆಯಲ್ಲಿ ಅತ್ಯಂತ ಮುಖ್ಯವಾಗಿ ಇರುವುದು ಒಂದು ಸಂಗತಿ: ಅದನ್ನು ನಾವು ಹೀಗೆ ಹೇಳಬಹುದು. ಮೌಖಿಕ ಶಕ್ತಿ ಮತ್ತು ವೈಯಕ್ತಿಕವಾದ ನಿರೂಪಣೆಗಳು. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ನಡೆಯುತ್ತಿರುವ ಚರ್ಚೆಗಳನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಇಬ್ಬರು ಚರ್ಚೆಯನ್ನು ಮಾಡುತ್ತಾರೆ ಎಂದರೆ ಅದರಲ್ಲಿ ಬರುವ ಚರ್ಚೆಗೆ ಮತ್ತು ಹೊರಗೆ ನಡೆಯುತ್ತಿರುವ ವಿದ್ಯಮಾನಕ್ಕೆ ಎಷ್ಟೋ ಸರ್ತಿ ಸಂಬಂಧವು ಇಲ್ಲದೆ ಹೋಗಬಹುದು. ಒಂದು ಅಸಂಗತವಾದ ನಾಟಕದಂತೆ ನಮಗೆ ಭಾಸವಾಗಬಹುದು. ಅಧಿಕಾರ ಎನ್ನುವುದು ಇರುವುದು ದೂರದರ್ಶನದ ಆಚೆಗೆ. ದೂರದರ್ಶನದಲ್ಲಿ ನಡೆಯುವ ಚರ್ಚೆಗಳು ಹೇಗೆ ಇರುತ್ತವೆ ಎಂದು ಪೀಟರ್ ಲಂಟ್ ಹೀಗೆ ಹೇಳುತ್ತಾನೆ: ಅದರಲ್ಲಿ ಭಾಗವಹಿಸುವವರು ಒಂದು ದೃಷ್ಟಿಯಿಂದ ಜನರ ಪ್ರತಿನಿಧಿಗಳಂತೆ ಕಾಣುಸುತ್ತಾರೆ. ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಾರೆ. ರಾಜಕಾರಣಿಗಳು ಮತ್ತು ರಾಜಕೀಯವನ್ನು ಹೇಳುವಾಗ ಅವರಲ್ಲಿ ಒಂದು ಅಧಿಕೃತತೆಯು ಕಾಣುತ್ತದೆ. ಸಂವಹನದ ದೃಷ್ಟಿಯಿಂದ ಅವರಿಗೆ ಒಂದು ಅವಕಾಶವೂ ಸಿಕ್ಕಿದೆ. ಅದನ್ನು ಸಾಮಾಜಿಕ ಮತ್ತು ರಾಜಕೀಯ ಅವಕಾಶ ಎಂದೂ ಹೇಳಬಹುದು. ದೂರದರ್ಶನದಲ್ಲಿ ಕೇಳುಗರು ಇರುತ್ತಾರೆ. ಅವರು ನೋಡುಗರ ಮೇಲೆ ಒಂದು ನಿಲುವನ್ನು ಪ್ರಸ್ತುತಪಡಿಸುತ್ತಾರೆ, ಆದರೆ ಒಂದು ಸಂಗತಿಯನ್ನು ನಾವು ನಮ್ಮ ಗಮನಕ್ಕೆ ತರುವುದು



ಅತ್ಯಂತ ಆವಶ್ಯಕ. ಅಧಿಕಾರ ಎನ್ನುವುದು ಒಂದು ಎಳೆಯ ಸರವಲ್ಲ. ಅದರಲ್ಲಿ ಬೇರೆ ಬೇರೆ ಎಳೆಗಳು ಇರುತ್ತವೆ. ಅದರ ರೂಪವನ್ನು ನಾವು ಒಂದು ಮುಷ್ಟಿಯಲ್ಲಿ ಹಿಡಿಯಲು ಆಗುವುದಿಲ್ಲ ಎನ್ನುವುದನ್ನು ಈ ಕೃತಿಯು ಸೂಚಿಸುತ್ತದೆ.

ಆಕೆಯು ಸಮಾಜದ ಸ್ವರೂಪವನ್ನು ಹೇಳುವುದು ಮಾತ್ರವೇ ಅಲ್ಲ, ಅದರ ಜೊತೆಗೆ ಸಮಾಜದಲ್ಲಿ ಇರುವ ಅಧಿಕಾರ ಮತ್ತು ಅದರ ರೂಪಗಳನ್ನು ಹೇಳುತ್ತಾನೆ. ಯಜಮಾನಿಕೆಯನ್ನು ವಹಿಸುವ ಗುಂಪುಗಳು ಇನ್ನೊಂದು ಗುಂಪನ್ನು ಆಳಿಸಿಕೊಳ್ಳುವ ಗುಂಪಾಗಿ ಪರಿವರ್ತನೆ ಮಾಡುತ್ತದೆ. ಅವನಲ್ಲಿ ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗವು ಸ್ಪಷ್ಟವಾಗಿ ಕಾಣುತ್ತದೆ. ಆಳುವವರು ಮತ್ತು ಆಳಿಸಿಕೊಳ್ಳುವವರು ಎನ್ನುವುದು ಇಲ್ಲಿ ಖಚಿತ. ಇದನ್ನು ಸಂವಾದಿ ಎಂದು ಹೇಳಬೇಕಾಗಿಲ್ಲ. ಆದರೆ ಇದರ ನಿಯಮ ಎನ್ನುವುದು ಬೇರೆಯಾಗುತ್ತದೆ. ಇದನ್ನು ಒಂದು ಸಾರದ ರೂಪವಾಗಿ ಆಕೆಯು ನಿರೂಪಿಸುತ್ತಾಳೆ. (ಈ ಸಂಕಲನದ ಆರನೆಯ ಲೇಖನವನ್ನು ಗಮನಿಸುವುದು ಅಗತ್ಯವಿದೆ.) ಆಳುವವರು ನಿರ್ದಿಷ್ಟವಾದ ಅಧಿಕಾರವನ್ನು ಹೊಂದಿರುತ್ತಾರೆ. ಇದರಲ್ಲಿಯೂ ಪ್ರಜಾಪ್ರಭುತ್ವವು ಇದನ್ನು ಬಹಳ ಚೆನ್ನಾಗಿ ಬಳಸುತ್ತದೆ. ಅದು ಜನರನ್ನು ಕೆಲವು ನಿಯಮಕ್ಕೆ ಒಪ್ಪುವ ಹಾಗೆ ಮಾಡುತ್ತದೆ. ಯಾವಾಗ ನಾವು ಅಧಿಕಾರವನ್ನು ಒಪ್ಪುತ್ತೇವೆಯೋ ಆಗ ಅದನ್ನು ನಾವು ಒಪ್ಪಿದ್ದೇವೆ ಮತ್ತು ಅದನ್ನು ನಾವು ಅಂಗೀಕರಿಸಿದ್ದೇವೆ ಎನ್ನುವುದೂ ನಮ್ಮ ಅರಿವಿಗೆ ಬರುವುದಿಲ್ಲ. ಆಳುವ ವರ್ಗವು ಯಾವಾಗಲೂ ಆಳಿಸಿಕೊಳ್ಳುವ ವರ್ಗಕ್ಕೆ ನಾನು ನಿನ್ನನ್ನು ಆಳು ಎಂದು ಭಾವಿಸುವುದಿಲ್ಲ ಎಂಬಂತೆ ಸೂಚಿಸುತ್ತದೆ. ಇದು ಕೇವಲ ಸೂಚನೆಯು ಮಾತ್ರವೇ. ಕಪ್ಪು ಮಹಿಳೆಯರು ಮತ್ತು ಸ್ತ್ರೀವಾದಿ ಸಿದ್ಧಾಂತವು ಈ ದೃಷ್ಟಿಯಿಂದ ಮಹತ್ವದ ಲೇಖನವೂ ಹೌದು.

ಅಧಿಕಾರ ಎನ್ನುವುದು ಒಬ್ಬರು ಅದು ಇದೇ ಎಂದು ಹೇಳದಿದ್ದರು ಇರುತ್ತದೆ. ಅದು ಒಂದು ಚಲನೆಯೂ ಆಗಿರುತ್ತದೆ. ಹಾಗೆಯೇ ಅದು ನಿರಂತರವೂ ಹೌದು. ಆದ್ದರಿಂದ ಇದನ್ನು ನಾವು ಬೇರೆ ಥರ ನೋಡಬೇಕು. ಆಳುವ ವರ್ಗವು ತನಗೆ ಬೇಕಾದ ರೀತಿಯಲ್ಲಿ ಹೇಗೆ ಕಾನೂನು ಮುಂತಾದವುಗಳನ್ನು ಚಲಾವಣೆಗೆ ತರುತ್ತದೆ ಎಂದರೆ ಇದರಲ್ಲಿ ಮೇಲು ನೋಟಕ್ಕೆ ಯಾವುದೇ ಹುಳುಕು ಕಾಣಿಸುವುದೇ ಇಲ್ಲ. ಅದು ಎಷ್ಟರ ಮಟ್ಟಿಗೆ ಇದೆ ಎಂದರೆ ಯಾವುದೋ ಒಂದು ಕ್ಷಣಕ್ಕೆ ತನ್ನ ನಿಯಮವನ್ನು ಕೂಡಾ ಮುರಿಯಬಹುದು. ಮತ್ತೊಂದು ನಿರ್ಧಾರವನ್ನು ಚಾಲ್ತಿಗೆ ತರಬಹುದು. ಇದು ವಾಸ್ತವವಾಗಿ ಸಮಸ್ಯೆ. ಇದು ನಡೆಯುವಾಗ ಒಂದು ಪ್ರಭುತ್ವವು ಆಳಿಸಿಕೊಳ್ಳುವವರ ಒಪ್ಪಿಗೆಯನ್ನು ಪಡೆದೇ ಪಡೆಯುತ್ತದೆ ಎಂದು ಅರ್ಥವಲ್ಲ. ಇದು ನಡೆಯುವಾಗ ಸಮಾಜವು ಪರಿವರ್ತನೆಯನ್ನು ಕಾಣುತ್ತದೆ. ಅದರ ಮತ್ತೊಂದು ಬಗೆಯಲ್ಲಿ ಹರಡುತ್ತದೆ. ಇದು ಅತ್ಯಂತ ಮುಖ್ಯವಾದ ಅಂಶವೂ ಹೌದು. ಆಳುವ ವರ್ಗ ಮತ್ತು ಅದರ ಯಜಮಾನಿಕೆಗೆ ಬೇಕಾದ ಪೋಲಿಸ್ ವ್ಯವಸ್ಥೆಯು ಇರುತ್ತದೆ. ಅದರ ಮೂಲಕವೇ ಒಂದು ವ್ಯವಸ್ಥೆಯು ಮತ್ತೊಂದು ವ್ಯವಸ್ಥೆಯಾಗಿಯೂ ಪಲ್ಲಟವಾಗುತ್ತದೆ. ಜನರ ಮಧ್ಯೆ ಕಾನೂನು ಇರುತ್ತದೆ. ಮತ್ತೊಂದು ಅರ್ಥದಲ್ಲಿ ಈ ಪೋಲಿಸ್ ವ್ಯವಸ್ಥೆಯೇ ಒಂದು ಸೀಮಾ ರೇಖೆಯನ್ನು ನಿರ್ಮಾಣ ಮಾಡುತ್ತದೆ. ಆಳುವವರ ಆಸೆಗಳು ಮತ್ತು ಆಳುವ ವರ್ಗದ ಹಿತಾಸಕ್ತಿಯು ಮಾತ್ರವೇ ಮುಖ್ಯವಾಗಿ ಉಳಿದ ವಿಚಾರಗಳು ಗೌಣವಾಗುತ್ತದೆ. ಸಾಮಾನ್ಯರು ಮತ್ತು ಅವರ ಬಯಕೆಗಳು ಹೇಗೆ ಇರುತ್ತವೆ ಎಂದರೆ ಅದು ಹೆಚ್ಚು ವಿಶೇಷವನ್ನು ಹೊಂದಿರುವುದು ಸಾಧ್ಯವಿಲ್ಲ. ಆದರೆ ಜನರು ಮತ್ತು ಅವರ ಬಯಕೆಗಳನ್ನು ಆಳುವ ವರ್ಗ ಸಹಿಸುವುದು ಸಾಧ್ಯವಿಲ್ಲ. ಇದರ ಅರಿವು ಲೇಖಕಿಗೆ ಇದೆ.

ರೇಮಂಡ್ ವಿಲಿಯಂಸ್ ಒಂದು ಮಾತನ್ನು ಹೇಳುತ್ತಾನೆ. ವಸ್ತು ಮತ್ತು ಅದರ ಅಸ್ತಿತ್ವ ಎನ್ನುವುದು ಪರಿಪೂರ್ಣವಾದರೆ ಅದರಲ್ಲಿ ಒಂದು ರೂಪವು ಸಿದ್ಧವಾಗುತ್ತದೆ. ಮನುಷ್ಯ ಮತ್ತು ಅವನ ಸಾಮಾನ್ಯವಾದ ಸಂವೇದನೆಯು ಬೇರೆ ಬೇರೆ ಥರ ಇರುತ್ತಾರೆ. ಅನೇಕ ಜನರು ಇವತ್ತು ಸಮಾಜದಲ್ಲಿ ತಮ್ಮ ಸಂವೇದನೆಯ ಮೂಲಕ ಒಂದು ನಿರ್ಧಾರವನ್ನು ಮಾಡುತ್ತಾರೆ. ವಾಸ್ತವವನ್ನು ಅರ್ಥ ಮಾಡಿಕೊಳ್ಳಲು ನಮಗೆ ಒಂದು ಸಂವೇದನೆಯು ಇರಬೇಕಾಗುತ್ತದೆ. ಸಮಾಜ ಮತ್ತು ಅದರ ಅರ್ಥವನ್ನು ಗಮನಿಸಲು ಕೂಡಾ ನಮಗೆ ಸಂವೇದನೆಯು ಇರಬೇಕಾಗುತ್ತದೆ. ಆದ್ದರಿಂದ ತಾತ್ವಿಕ ಎನ್ನುವುದು ನಮಗೆ ಒಂದು ಅಮೂರ್ತವಾದ ಸಂಗತಿಯೂ ಆಗಿರುತ್ತದೆ. ತಾತ್ವಿಕ ಎನ್ನುವುದು ನಮ್ಮ ಅಸ್ತಿತ್ವವನ್ನು ನಿರೂಪಿಸುತ್ತದೆ. ಅದನ್ನು ನಾವು ಇನ್ನೊಂದು ಥರ ಯೋಚಿಸಬಹುದು. ಎಷ್ಟೋ ಸರ್ತಿ ನಮ್ಮ ಅನುಭವ ಎನ್ನುವುದು ಸಾಚಾ ಆಗಿರುತ್ತದೆ ಎಂದು ಹೇಳುವುದು ಅತ್ಯಂತ ಕಷ್ಟ. ನಮ್ಮ ವ್ಯಕ್ತಿತ್ವವನ್ನು ಅನೇಕ ಸಂಗತಿಗಳು ನಿರ್ಧಾರ ಮಾಡುತ್ತದೆ. ಅದರ ಮೂಲಕ ಕೆಲವನ್ನು ತರಬೇತು ಮಾಡುತ್ತದೆ. ಇದನ್ನು ನಾವು ಇನ್ನೂ ಅನೇಕ ಸಂಗತಿಗಳಲ್ಲಿ ಕಾಣುತ್ತೇವೆ. ಗುಂಪು ಮತ್ತು ಅವುಗಳ ವಿಚಾರಧಾರೆಗಳು ಬೇರೆ ಬೇರೆ ಸಂಸ್ಥೆಗಳ ಮೂಲಕ ವ್ಯಕ್ತವಾಗುತ್ತದೆ. ಶಾಲೆಗಳು, ಸಂಸತ್ತು, ಆಸ್ಪತ್ರೆಗಳು ಸಂಸ್ಕೃತಿಯ ಮೇಲೆ ಪ್ರಭಾವವನ್ನು ಬೀರುತ್ತವೆ ಎಂದು ವಿಲಿಯಂಸ್ ಹೇಳುತ್ತಾನೆ.

ಯಾವುದು ಯಜಮಾನಿಕೆಯ ಪ್ರಾತಿನಿಧಿಕ ರೂಪವಾಗಿದೆಯೋ ಅದು ಸಾಂಸ್ಕೃತಿಕ ರೂಪಗಳ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಯಜಮಾನಿಕೆಯನ್ನು ವಹಿಸುವ ವರ್ಗಗಳು ರೂಪಿಸುವ ನೀತಿ ಸಂಹಿತೆಗಳು ನಮ್ಮ ಸಂಸ್ಕೃತಿಯ ಭಾಗಗಳು ಎಂದೇ ನಾವು ಭಾವಿಸುತ್ತೇವೆ. ಅನೇಕ ಸಂದರ್ಭಗಳಲ್ಲಿ ಬುದ್ಧಿಜೀವಿಗಳು ಸಾಂಸ್ಥಿಕವಾದ ಮೌಲ್ಯಗಳನ್ನು ಪ್ರಚುರ ಪಡಿಸುವಂತೆಯೇ ಮಾತಾಡುತ್ತಾರೆ. ಹಾಗೆ ನೋಡುವುದಿದ್ದರೆ ಆಧುನಿಕ ಯುಗದಲ್ಲಿ ಬಂದಿರುವ ಆಡಳಿತಾತ್ಮಕ ವ್ಯವಸ್ಥೆಯು ಅದರದೇ ಆದ ರಚನೆಯನ್ನು ಒಳಗೊಂಡಿದೆ. ಸಂಸ್ಕೃತಿಯ ಚರ್ಚೆಯಲ್ಲಿ ಈ ಆಡಳಿತಾತ್ಮಕ ವ್ಯವಸ್ಥೆಯು ಬಹು ದೊಡ್ಡ ಸಂಶೋಧನೆಯ ಅವಕಾಶವನ್ನೂ ಕಲ್ಪಿಸಿದೆ. ಈ ಕಾರಣದಿಂದ ನಮಗೆ ಸ್ತ್ರೀವಾದವನ್ನು ಬೇರೆ ದಿಕ್ಕಿನಲ್ಲಿ ನೋಡಲು ಈ ಕೃತಿಯು ಸಹಾಯವನ್ನು ಮಾಡುತ್ತದೆ. ಇದರ ಅನುವಾದ ಅತ್ಯಂತ ಚೆನ್ನಾಗಿದೆ. ನಮಗೆ ಇದು ಅನುವಾದದ ಕೃತಿಯೆಂದು ಅನಿಸುವುದಿಲ್ಲ. ಇದರ ಮೂಲ ಕೃತಿಯು ಕೂಡಾ ಅತಿ ಗಂಭೀರವಾದ, ಹುಬ್ಬು ಗಂಟಿಕ್ಕಿ ಬರೆದ ಬರಹ ಎಂದು ಅನಿಸುವುದಿಲ್ಲ. ಇದು ನಮಗೆ ಒಂದು ಆತ್ಮಚರಿತ್ರೆ ಅಥವಾ ಕಪ್ಪು ಜನಾಂಗದ ಒಬ್ಬಳು ಮಹಿಳೆಯ ಜೀವನ ಕ್ರಮದ ಚಿತ್ರಣ ಎಂದು ಭಾಸವಾಗುತ್ತದೆ.





ಲಕ್ಷದ್ವೀಪದಲ್ಲಿ ಗುಜರಾತ ಮಾದರಿ

ಪ್ರಕಾಶ ಕಾರಟ್

ಒಂದು ಶಾಂತಿಪೂರ್ಣ ತಾಣವಾಗಿದ್ದ ಲಕ್ಷದ್ವೀಪವನ್ನು ಆಡಳಿತಗಾರನ ಹಿಂದುತ್ವ ಪ್ರಯೋಗಕ್ಕಾಗಿ ಅಸಮಾಧಾನದ ಒಂದು ಕುದಿಯುವ ಹಂಡೆಯಾಗಿ ಪರಿವರ್ತಿಸಲಾಗಿದೆ. ಈತ ಮೋದಿ-ಷಾ ಜೋಡಿಯ ಒಬ್ಬ ಏಜೆಂಟನಾಗಿ ಕೆಲಸ ಮಾಡುತ್ತಿದ್ದಾರೆ. ಮುಸ್ಲಿಂ ಬಹುಸಂಖ್ಯಾತ ಪ್ರದೇಶವೊಂದರಲ್ಲಿ ಪ್ರಫುಲ್ ಪಟೇಲ್ ಧೋರಣೆಗಳಲ್ಲಿ ಕಾಶ್ಮೀರದ ಅನುಭವದ ಛಾಯೆ ಕಾಣುತ್ತದೆ. ಆದರೆ ಇಲ್ಲಿ ಅನುಸರಿಸುತ್ತಿರುವ ನಿಜವಾದ ಮಾದರಿಯೆಂದರೆ ಗುಜರಾತಿನದ್ದೇ- ಅಂದರೆ ಹಿಂದುತ್ವ ಮತ್ತು ನವ-ಉದಾರವಾದದ ಒಂದು ಕಲಬೆರಕೆಯನ್ನು ಹೇರಲಾಗುತ್ತಿದೆ. ಈ ಹೊರೆಯನ್ನು ಹೊರಬೇಕಾಗಿ ಬಂದಿರುವುದು 99ಶೇ. ಮುಸ್ಲಿಮರಿರುವ ಲಕ್ಷದ್ವೀಪದ ಜನಗಳು.



ಕೇಂದ್ರಾಡಳಿತ ಪ್ರದೇಶವಾಗಿರುವ ಲಕ್ಷದ್ವೀಪ ಒಂದು ದ್ವೀಪಸಮೂಹ, ಸುಮಾರು 65,000 ಜನರ ನೆಲೆಬೀಡು. ಈ ನೀರವ, ಶಾಂತಿಪ್ರಿಯ ಜನಗಳನ್ನು ಒಂದು ನಿರ್ದಯ ಆಳ್ವಿಕೆಗೆ ಒಳಪಡಿಸಲಾಗಿದೆ, ಅದು ಅವರ ಜೀವನಶೈಲಿ, ಜೀವನೋಪಾಯಗಳು, ಆಹಾರ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ವಂಚಿಸ ಹೊರಟಿದೆ.

ಈ ದ್ವೀಪಕ್ಕೆ ಈ ಮಾರಕ ರೋಗ ಮೊದಲಿಗೆ ತಗಲಿದ್ದು ಕೊವಿಡ್–19 ವೈರಾಣುವಿನ ಸ್ವರೂಪದಲ್ಲಿ ಅಲ್ಲ, ಬದಲಾಗಿ ಡಿಸೆಂಬರ್ 2020ರಲ್ಲಿ ಒಬ್ಬ ಹೊಸ ಆಡಳಿತಗಾರ ಅಧಿಕಾರ ವಹಿಸಿಕೊಂಡಾಗ. ಅದುವರೆಗೆ, ಈ ಕೇಂದ್ರಾಡಳಿತ ಪ್ರದೇಶದ ಎಲ್ಲ ಆಡಳಿತಗಾರರು ಐಎಎಸ್ ಅಧಿಕಾರಿಗಳಾಗಿರುತ್ತಿದ್ದರು. ಮೊತ್ತ ಮೊದಲ ಬಾರಿಗೆ, ಗುಜರಾತಿನ ಒಬ್ಬ ರಾಜಕಾರಣಿಯನ್ನು ಈ ಹುದ್ದೆಗೆ ನೇಮಿಸಲಾಗಿದೆ. ಪ್ರಫುಲ್ ಖೋಡ ಪಟೇಲ್ ಈ ಹಿಂದೆ ಗುಜರಾತಿನ ಒಬ್ಬ ಎಂ.ಎಲ್.ಎ. ಆಗಿದ್ದರು, 2011ರಲ್ಲಿ ನರೇಂದ್ರ ಮೋದಿ ಸರಕಾರದಲ್ಲಿ ಗೃಹ ಇಲಾಖೆಯಲ್ಲಿ ರಾಜ್ಯ ದರ್ಜೆಯ ಮಂತ್ರಿಯೂ ಆಗಿದ್ದರು.

ಈ ಮೊದಲು, ಆತ ವಿಲೀನಗೊಂಡ ದಾದ್ರ ಮತ್ತು ನಗರ್ ಹವೇಲಿ ಹಾಗೂ ದಮನ್ ಮತ್ತು ದೀವ್‌ನ ಉದ್ಘಾಟನಾ ಆಡಳಿತಗಾರರು. ಅಲ್ಲಿ ಹಲವು ವಿಷಯಗಳಲ್ಲಿ, ಮುಖ್ಯವಾಗಿ ದಮನ್ ಕಡಲತೀರದಲ್ಲಿನ ಆದಿವಾಸಿಗಳ ವಾಸಸ್ಥಳಗಳನ್ನು ಧ್ವಂಸ ಮಾಡಿ ಅವರನ್ನು ನಿರ್ವಸಿತರನ್ನಾಗಿ ಮಾಡಿ, ಅದನ್ನು ಅವರು ಪ್ರತಿಭಟಿಸಿದಾಗ ಹಲವರನ್ನು ಜೈಲಿಗೆ ತಳ್ಳಿದ ವಿವಾದಾಸ್ಪದ ವ್ಯಕ್ತಿಯಾದರು.

ಇಲ್ಲೀಗ ಆತ ಲಕ್ಷದ್ವೀಪದ ಮೇಲೆ ಗುಜರಾತ್ ಮಾದರಿಯನ್ನು, ಅಂದರೆ ಹಿಂದುತ್ವ ಮತ್ತು ನವ-ಉದಾರವಾದದ ಒಂದು ಕಲಬೆರಕೆಯನ್ನು ಹೇರುತ್ತಿದ್ದಾರೆ. ಈ ಹೊರೆಯನ್ನು ಹೊರಬೇಕಾಗಿ ಬಂದಿರುವುದು 99ಶೇ. ಮುಸ್ಲಿಮರಿರುವ ಲಕ್ಷದ್ವೀಪದ ಜನಗಳು.

ಪಟೇಲ್ ಜನಗಳ ಭೂಮಿ ಹಕ್ಕುಗಳ ಮೇಲೆ ನೇರ ದಾಳಿಯನ್ನು ಮಾಡಿದ್ದಾರೆ. ಕರಡು 'ಲಕ್ಷದ್ವೀಪ ಅಭಿವೃದ್ಧಿ ಪ್ರಾಧಿಕಾರ ನಿಬಂಧನೆ' ಪಟ್ಟಣ ಯೋಜನೆಗೆ ಅಥವ ಇತರ ಅಭಿವೃದ್ಧಿ ಕಾರ್ಯಗಳಿಗೆ ಜನಗಳನ್ನು ಅವರ ಆಸ್ತಿಗಳಿಂದ ಎಬ್ಬಿಸಲು ಮತ್ತು ಬೇರಡೆಗಳಿಗೆ ಕಳಿಸಲು ಅವಕಾಶ ಕಲ್ಪಿಸುತ್ತದೆ. ಈ ಕರಾಳ ಭೂಮಿ ನೀತಿ ಅಭಿವೃದ್ಧಿ ಉದ್ದೇಶಗಳಿಗೆ ಯಾವುದೇ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಅವಕಾಶ ಕೊಡುತ್ತದೆ– ಇದರಲ್ಲಿ ಕಟ್ಟಡಗಳು, ಇಂಜಿನಿಯರಿಂಗ್, ಕಲ್ಲು ಮತ್ತು ಇತರ ಗಣಿಗಾರಿಕೆಗಳೂ ಸೇರಿವೆ. ಇದು ಈ ದ್ವೀಪದ ಸೂಕ್ಷ್ಮ ಪರಿಸರ ವ್ಯವಸ್ಥೆಯನ್ನು ಧ್ವಂಸ ಮಾಡಲಿದೆ. ಈ ಆಡಳಿತಗಾರ ಡೈರಿ ಫಾರ್ಮ್‌ಗಳನ್ನು ಮುಚ್ಚಿಸಿ ದ್ದಾರೆ ಮತ್ತು (ಗುಜರಾತಿನ) 'ಅಮುಲ್'ಗೆ ಇಲ್ಲಿಗೆ ಡೈರಿ ಉತ್ಪನ್ನಗಳನ್ನು ಪೂರೈಸ ಬೇಕೆಂದು ಹೇಳಿರುವುದಾಗಿ ವರದಿಯಾಗಿದೆ. ವಿವಿಧ ಇಲಾಖೆಗಳಲ್ಲಿ ನೂರಾರು ತಾತ್ಕಾಲಿಕ ಮತ್ತು ಗುತ್ತಿಗೆ ಕಾರ್ಮಿಕರನ್ನು ತೆಗೆದು ಹಾಕಲಾಗಿದೆ.

ಇವುಗಳಲ್ಲಿ ಅತಿ ಕೆಟ್ಟ ಹಲ್ಲೆ ಎಂದರೆ ಮೀನುಗಾರರ ಮೇಲೆ ನಡೆಸಿರುವಂತದ್ದು. ಇಲ್ಲಿ ಬಹುಪಾಲು ಜನರಿಗೆ ಮೀನುಗಾರಿಕೆ ಜೀವನಾಧಾರವಾಗಿದೆ. ಅವರು ತಮ್ಮ ಬಲೆಗಳು ಮತ್ತಿತರ ಸಾಧನಗಳನ್ನು ಇಡಲು ಕಡಲತಡಿಯಲ್ಲಿ ನಿರ್ಮಿಸಿಕೊಂಡಿದ್ದ ತಾತ್ಕಾಲಿಕ ಷೆಡ್‌ಗಳನ್ನು ಪಟೇಲ್ ಆಡಳಿತ ಧ್ವಂಸ ಮಾಡಿದೆ, ಅದಕ್ಕೆ ಕೊಟ್ಟಿರುವ ಕಾರಣ ಅವು ಕರಾವಳಿ ಕಾವಲು ಕಾಯ್ದೆಯನ್ನು ಉಲ್ಲಂಘಿಸಿವೆ ಎಂದು.

ಇಲ್ಲಿನ ಜನಗಳ ಆಹಾರಾಭ್ಯಾಸಗಳ ಮೇಲೆ ಹಲ್ಲೆ ನಡೆಸುವ ಯೋಜಿತ ಪ್ರಯತ್ನ ನಡೆದಿದೆ. ಶಾಲಾ ಮಕ್ಕಳಿಗೆ ಮತ್ತು ಹಾಸ್ಟೆಲುಗಳಲ್ಲಿ ಮಾಂಸಾಹಾರಿ ಆಹಾರ ವಸ್ತುಗಳನ್ನು ನಿಲ್ಲಿಸಲಾಗಿದೆ. ರಾಸುಗಳನ್ನು ಕಡಿಯುವುದು, ಸಾಗಿಸುವುದು, ಗೋಮಾಂಸದ ಮಾರಾಟ ಮತ್ತು ಖರೀದಿಯನ್ನು ಕಾನೂನುಬಾಹಿರಗೊಳಿಸಲಾಗಿದೆ. ಇಲ್ಲಿ ಮದ್ಯಪಾನವನ್ನು ಇಲ್ಲಿಯ ಜನಗಳ ಧಾರ್ಮಿಕ ಮತ್ತು ಸಾಂಸ್ಕೃತಿಕ ಭಾವನೆಗಳಿಗಾಗಿ ನಿಷೇಧಿಸಲಾಗಿತ್ತು. ಈಗ ನಾಲ್ಕು ದ್ವೀಪಗಳಲ್ಲಿ ಪ್ರವಾಸೋದ್ಯಮದ ಹೆಸರಲ್ಲಿ ಮದ್ಯ ಮಾರಾಟಕ್ಕೆ ಪರ್ಮಿಟ್‌ಗಳನ್ನು ಕೊಡಲಾಗುತ್ತದೆ.

ಪಂಚಾಯತು ಕಾಯ್ದೆಯನ್ನು ತಿದ್ದುಪಡಿ ಮಾಡಿ ಎರಡಕ್ಕಿಂತ ಹೆಚ್ಚು ಮಕ್ಕಳಿರುವವರನ್ನು ಚುನಾವಣಾ ಸ್ಪರ್ಧೆಗೆ ಅನರ್ಹರನ್ನಾಗಿ ಮಾಡಲಾಗಿದೆ. ಮುಸ್ಲಿಮರು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹಡೆಯುತ್ತಾರೆ ಎಂಬ ಗ್ರಹಿಕೆಯಿಂದ ಹೀಗೆ ಮಾಡಲಾಗಿದೆ.



ಮತಾಂಧತೆಯ ವೈರಸ್ ಈಗ ಈ ದ್ವೀಪವನ್ನೂ ತಟ್ಟಿದೆ.

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಕೇರಳದೊಂದಿಗೆ ಪಾರಂಪರಿಕ ವ್ಯಾಪಾರ ಮತ್ತು ಆರ್ಥಿಕ ಸಂಬಂಧಗಳನ್ನು ಕಡಿದು ಹಾಕುವ ಒಂದು ಪ್ರಯತ್ನ ನಡೆಸಲಾಗುತ್ತಿದೆ. ಈ ದ್ವೀಪಗಳಿಂದ ಹಡಗುಗಳು ಸಾಮಗ್ರಿಗಳನ್ನು ಕೊಹಿಕ್ಕೋಡ್ ಜಿಲ್ಲೆಯ ಬೇಪ್ಪೂರ್ ಬಂದರಿಗೆ ಒಯ್ಯುತ್ತಿದ್ದವು. ಈಗ ಇಂತಹ ಸಾಮಗ್ರಿ ಸಾಗಾಟವನ್ನು ಕರ್ನಾಟಕದ ಮಂಗಳೂರು ಬಂದರಿಗೆ ತಿರುಗಿಸಬೇಕು ಎಂದು ಆದೇಶ ಹೊರಡಿಸಲಾಗಿದೆ.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

2020ರ ವರ್ಷಾದ್ಯಂತ ಲಕ್ಷದ್ವೀಪ ಕೊವಿಡ್ ವೈರಾಣುವಿನಿಂದ ಮುಕ್ತವಾಗಿತ್ತು, ಏಕೆಂದರೆ ಇಲ್ಲಿಂದ ಮುಖ್ಯ ಭೂಭಾಗಕ್ಕೆ ಹೋಗುವವರು ಮತ್ತು ಅಲ್ಲಿಂದ ಈ ದ್ವೀಪಸಮೂಹಕ್ಕೆ ಬರುವವರು ಕಟ್ಟುನಿಟ್ಟಾದ ಕ್ವಾರಂಟೈನ್ ಕ್ರಮಗಳನ್ನು ಅನುಸರಿಸಬೇಕಾಗಿತ್ತು. ಉದಾಹರಣೆಗೆ, ಈ ಕೇಂದ್ರಾಡಳಿತ ಪ್ರದೇಶಕ್ಕೆ ಯಾರೇ ಬಂದರೂ ಅವರು ಹದಿನಾಲ್ಕು ದಿನಗಳ ಕ್ವಾರಂಟೈನ್‌ನಲ್ಲಿ ಇರಬೇಕಾಗಿತ್ತು. ಆದರೆ, ಹೊಸ ಆಡಳಿತಗಾರ ಈ ಕ್ವಾರಂಟೈನ್ ನಿರ್ಬಂಧಗಳನ್ನು ತೆಗೆದು, ನೆಗೆಟಿವ್ ಆರ್‌ಟಿ-ಪಿಸಿಆರ್ ವರದಿಯಿದ್ದರೆ ಸಾಕು ಎಂದು ಮಾಡಿದರು. ಇಲ್ಲಿ ಕೊವಿಡ್‌ನ ಮೊದಲ ಪ್ರಕರಣ ಜನವರಿ ತಿಂಗಳಲ್ಲಿ ಕಾಣಿಸಿಕೊಂಡಿತು. ಇದುವರೆಗೆ 7000ಕ್ಕಿಂತ ಹೆಚ್ಚು ಕೇಸುಗಳು ದಾಖಲಾಗಿವೆ, ಇದು ಇಲ್ಲಿಯ ಜನಸಂಖ್ಯೆಯ 10ಶೇ.ಕ್ಕಿಂತಲೂ ಹೆಚ್ಚು.

ಗುಜರಾತ್ ಮಾದರಿ ಯೊಂದಿಗಿನ ಇನ್ನೊಂದು ಸಾಮ್ಯತೆ ಎಂದರೆ ಭಿನ್ನಮತದ ಸರ್ವಾಧಿಕಾರಶಾಹೀ ದಮನ, ಮತ್ತು ಇದಕ್ಕಾಗಿ ಕರಾಳ ಕಾನೂನುಗಳ ಬಳಕೆ. ಗೂಂಡಾ ನಿಯಂತ್ರಣ ಕಾಯ್ದೆ ಸಮಾಜ-ವಿರೋಧಿಗಳನ್ನು ದಮನ ಮಾಡಲು ಒಂದು ವರ್ಷದ ವರೆಗೆ ನಿರೋಧಕ ಬಂಧನದ ಪ್ರಸ್ತಾವನೆಯನ್ನು ಇಟ್ಟಿದೆ.

ಅಪರಾಧ ದರ ಅತ್ಯಂತ ಕಡಿಮೆ ಮಟ್ಟದಲ್ಲಿರುವ ಒಂದು ಪ್ರದೇಶದಲ್ಲಿ ಇಂತಹ ಪ್ರಸ್ತಾವನೆಯನ್ನು ಇಡಲಾಗಿದೆ. ಈಗಾಗಲೇ ಈ ಎಲ್ಲ ಜನ-ವಿರೋಧಿ ಕ್ರಮಗಳನ್ನು ಪ್ರತಿಭಟಿಸುವವವರನ್ನು ಬಂಧಿಸಲಾಗುತ್ತಿದೆ ಮತ್ತು ಮಾಧ್ಯಮಗಳನ್ನು ದಮನ ಮಾಡಲಾಗುತ್ತಿದೆ. ಆನ್‌ಲೈನ್ ಸುದ್ದಿ ತಾಣಗಳನ್ನು ಮುಚ್ಚಲಾಗುತ್ತಿದೆ; ಆಡಳಿತಗಾರರಿಗೆ ಸಂದೇಶಗಳನ್ನು ಕಳಿಸಿದರೆಂದು ಮೂವರು ಶಾಲಾ ವಿದ್ಯಾರ್ಥಿಗಳನ್ನೂ ಇತ್ತೀಚೆಗೆ ಬಂಧಿಸಲಾಗಿದೆ.

ಒಂದು ಶಾಂತಿಪೂರ್ಣ ತಾಣವಾಗಿದ್ದ ಲಕ್ಷದ್ವೀಪವನ್ನು ಆಡಳಿತಗಾರನ ಹಿಂದುತ್ವ ಪ್ರಯೋಗಕ್ಕಾಗಿ ಅಸಮಾಧಾನದ ಒಂದು ಕುದಿಯುವ ಹಂಡೆಯಾಗಿ ಪರಿವರ್ತಿಸಲಾಗಿದೆ. ಈತ ಮೋದಿ-ಷಾ ಜೋಡಿಯ ಒಬ್ಬ ಏಜೆಂಟನಾಗಿ ಕೆಲಸ ಮಾಡುತ್ತಿದ್ದಾರೆ, ಏಕೆಂದರೆ ಪಟೇಲ್ ಒಂದು ಕೇಂದ್ರಾಡಳಿತ ಪ್ರದೇಶದ ಆಡಳಿತಗಾರನಾಗಿ ಅಮಿತ್ ಷಾ ಅಡಿಯಲ್ಲಿರುವ ಗೃಹ ಇಲಾಖೆಗೆ ಮಾತ್ರ ಉತ್ತರದಾಯಿಯಾಗಿದ್ದಾರೆ.

ಮುಸ್ಲಿಂ ಬಹುಸಂಖ್ಯಾತ ಪ್ರದೇಶವೊಂದರಲ್ಲಿ ಪಟೇಲರ ಧೋರಣೆಗಳು ಕಾಶ್ಮೀರದ ಅನುಭವದ ಛಾಯೆಯನ್ನು ತೋರುತ್ತಿವೆ. ಆದರೆ ಇಲ್ಲಿ ಅನುಸರಿಸುತ್ತಿರುವ ನಿಜವಾದ ಮಾದರಿಯೆಂದರೆ ಗುಜರಾತಿನದ್ದೇ-ಪರಿಸರವನ್ನು ನಾಶಪಡಿಸುವ, ಅಲ್ಪಸಂಖ್ಯಾತ ಸಮುದಾಯದ ಮೇಲೆ ಹಿಂದುತ್ವ ಮೌಲ್ಯಗಳನ್ನು ಹೇರುವ, ಭಿನ್ನಮತವನ್ನು ನಿರ್ದಯವಾಗಿ ಹತ್ತಿಕ್ಕುವ ಮತ್ತು ಒಂದು ಮಹಾ ಸಾಂಕ್ರಾಮಿಕದ ಸಮಯದಲ್ಲಿ ಮಾನವ ಜೀವದ ಬಗ್ಗೆ ಒಂದು ನಿರ್ಮಮ ಉಪೇಕ್ಷೆಯ ಅಭಿವೃದ್ಧಿ ಮಾದರಿ.

ಲಕ್ಷದ್ವೀಪದ ಜನತೆ ತಮ್ಮ ಬದುಕಿನ ಮೇಲೆ ಈ ಹಲ್ಲೆಗಳನ್ನು ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದಾರೆ. ಈ ದಾಳಿಗಳ ವಿರುದ್ಧ ಹೋರಾಟದಲ್ಲಿ ಅವರು ಏಕಾಂಗಿಗಳಲ್ಲ. ಲಕ್ಷದ್ವೀಪದೊಂದಿಗೆ ನಿಕಟ ಪಾರಂಪರಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿರುವ ಕೇರಳ(ಇಲ್ಲಿನ ಜನಗಳ ಭಾಷೆ ಮಲೆಯಾಳಂನ ಒಂದು ಆಡುಭಾಷೆ) ಒಂದಾಗಿ ಈ ದ್ವೀಪದ ಜನಗಳ ಹಕ್ಕುಗಳ ರಕ್ಷಣೆಗೆ ಎದ್ದು ನಿಂತಿದೆ. ಪ್ರತಿಯೊಂದು ರಾಜಕೀಯ ಮತ್ತು ಸಾಮಾಜಿಕ ಸಂಘಟನೆ(ಬಿಜೆಪಿ ಮತ್ತು ಆರೆಸ್ಸೆಸ್ ಬಿಟ್ಟು) ಲಕ್ಷದ್ವೀಪದ ಜನಗಳೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸಿದ್ದಾರೆ.

ಪಟೇಲ್‌ರನ್ನು ಆಡಳಿತಗಾರನಾಗಿ ಹಿಂದಕ್ಕೆ ಕರೆಸಿಕೊಳ್ಳಬೇಕು ಎಂಬ ಆಗ್ರಹ ಬಲವಾಗುತ್ತಿದೆ. ಆತ ಭಾರತದ ಈ ಶಾಂತಿಯುತ ಮತ್ತು ಸುಂದರ ಭಾಗಕ್ಕೆ ಸರಿಪಡಿಸಲಾಗದ ಅನಾಹುತ ಉಂಟು ಮಾಡುವ ಮೊದಲು ಮೋದಿ ಸರಕಾರ ಈ ಆಗ್ರಹಕ್ಕೆ ಕಿವಿಗೊಡಬೇಕಾಗುತ್ತದೆ.

ದಣಿವರಿಯದ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್.ದೊರೆಸ್ವಾಮಿ

ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಮತ್ತು ಸ್ವಾತಂತ್ರ್ಯಾನಂತರವೂ ಆ ಹೋರಾಟದ ಪ್ರಜಾಪ್ರಭುತ್ವವಾದಿ ಆಶಯಗಳನ್ನು ಸಾಕಾರಗೊಳಿಸಲು ಅವಿಶ್ರಾಂತವಾಗಿ ಶ್ರಮಿಸಿರುವ ಜನಪ್ರಿಯ ಜನಪರ ಹೋರಾಟಗಾರ ಹೆಚ್. ಎಸ್. ದೊರೆಸ್ವಾಮಿ ಮೇ 26ರಂದು ತಮ್ಮ 104 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಅಗಲಿದ ಅವಿಶ್ರಾಂತ ಸೇನಾನಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಕಾರ್ಯದರ್ಶಿ ಯು.ಬಸವರಾಜ್ ಭಾವ ಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತ ನೀಡಿರುವ ಹೇಳಿಕೆಯನ್ನು ಮತ್ತು ಇನ್ನಿತರ ನುಡಿನಮನಗಳನ್ನು ಈ ಮುಂದೆ ಕೊಡಲಾಗಿದೆ.



ದೇಶ ಹಾಗೂ ರಾಜ್ಯದ ಜನತೆ ಅತ್ಯಂತ ಸಂಕಷ್ಟದಲ್ಲಿರುವಾಗ, ಜನಪರ ಹೋರಾಟಗಳಿಗೆ ತಮ್ಮ ಇಳಿವಯಸ್ಸಿನಲ್ಲಿಯೂ ಸ್ಫೂರ್ತಿ ದಾಯಕವಾಗಿದ್ದ ಹಿರಿಯ ಸೇನಾನಿಯ ಅಗಲಿಕೆ ಜನ ಚಳುವಳಿಗಳಿಗೆ ತೀವ್ರ ಸಂಕಟವನ್ನು ಉಂಟು ಮಾಡಿದೆ.

ಸ್ವಾತಂತ್ರ್ಯಾ ನಂತರವೂ ಸ್ವಾತಂತ್ರ್ಯಕ್ಕಾಗಿ ಎಡೆಬಿಡದೆ ಹೋರಾಡಿದ, ಶ್ರೀ ಹಾರನಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿಯವರು ಬ್ರಿಟೀಷರ ವಿರುದ್ಧ ಚಲೇಜಾವ್ ಚಳುವಳಿ, ಮೈಸೂರು ಸಂಸ್ಥಾನದೊಳಗೆ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಮೈಸೂರು ಚಲೋ ಮತ್ತು ಗ್ರಾಮಗಳನ್ನು ವಿಮೋಚನೆಗೊಳಿಸುವ ಚಳುವಳಿ, ಕಾರ್ಮಿಕರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸುವ ಚಳುವಳಿಗಳಲ್ಲಿ ಕ್ರಿಯಾಶೀಲ ಪಾತ್ರ ವಹಿಸುವ ಮೂಲಕ ಸ್ವಾತಂತ್ರ್ಯ ಹೋರಾಟದ ಪ್ರಮುಖ ಕೊಂಡಿಯಾಗಿದ್ದರು.

ಪತ್ರಿಕಾ ಸ್ವಾತಂತ್ರ್ಯಕ್ಕಾಗಿ, ಪತ್ರಿಕೆಗಳ ಮೇಲಿನ ನಿಷೇಧವನ್ನು ಉಲ್ಲಂಘಿಸಿ ಸ್ವಾತಂತ್ರ್ಯ ಹೋರಾಟದ ಸುದ್ದಿಗಳನ್ನು ಜನರಿಗೆ ತಲುಪಿಸುವುದಕ್ಕಾಗಿ ಭೂಗತವಾಗಿ ಪತ್ರಿಕೆಯನ್ನು ಹೊರತರುವ ಕ್ಲಿಷ್ಟ ಮತ್ತು ಅಪಾಯಕಾರಿ ಕೆಲಸವನ್ನು ಅವರು ಕೈಗೊಂಡಿದ್ದರು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಮತ್ತು ನಂತರ ನಾಲ್ಕಾರು ಪತ್ರಿಕೆಗಳ ಸಂಪಾದಕರಾಗಿದ್ದರು. ಅವರ ಬರಹಗಳು, ಭಾಷಣಗಳು ಜನರನ್ನು ಹೋರಾಟಕ್ಕೆ ಸೆಳೆಯುತ್ತಿದ್ದವು.

ಚಲೇಜಾವ್ ಚಳುವಳಿಯ ಭಾಗವಾಗಿ ರಹಸ್ಯ ಕಾರ್ಯಾಚರಣೆ, ಬಾಂಬ್ ತಯಾರಿಕೆ, ಸಾಗಾಣಿಕೆ, ತಹಸೀಲ್ದಾರ್ ಮೊದಲಾದ ಬ್ರಿಟಿಷರ ಮುಖ್ಯ ಕಛೇರಿಗಳನ್ನು ಸುಡುವುದು ಇತ್ಯಾದಿ ಸಮರಶೀಲ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ಈ ಸಂದರ್ಭಗಳಲ್ಲಿಯೇ ಅವರು ಜೈಲುವಾಸವನ್ನು ಅನುಭವಿಸಿದರು.

ಸ್ವಾತಂತ್ರ್ಯಾ ನಂತರ ಯಾವ ಪದವಿ, ಅಧಿಕಾರಗಳ ಆಮಿಷಕ್ಕೆ ಬಲಿಯಾಗದೆ ಸರ್ವೋದಯ ಕಾರ್ಯವನ್ನು ಮುಂದುವರೆಸಿದರು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕರೂ ಸಾಮಾನ್ಯ ಜನರಿಗೆ ಸ್ವಾತಂತ್ರ್ಯ ಸಿಗದ ಪರಿಸ್ಥಿತಿಯಿಂದ ನೊಂದ ಅವರು ಜನರ ಸಮಸ್ಯೆಗಳಿಗಾಗಿ ಹೋರಾಟದಲ್ಲಿ ತೊಡಗಿದರು.

ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಇಂದಿರಾಗಾಂಧಿ ಯವರಿಗೆ ಪತ್ರ ಬರೆದರೆಂಬ ಪ್ರಜಾಪ್ರಭುತ್ವ ಪ್ರೇಮದ ಕಾರಣಕ್ಕೇ ಮತ್ತೆ ಜೈಲುವಾಸ ಅನುಭವಿಸಿದ್ದರು.

ಜಾಗತೀಕರಣ, ಖಾಸಗೀಕರಣಗಳು ಜನರಿಗೆ ಸಿಕ್ಕ ಅಲ್ಪ ಸ್ವಲ್ಪ ಸ್ವಾತಂತ್ರ್ಯವನ್ನೂ ಕಸಿದುಕೊಳ್ಳುತ್ತಿರುವುದನ್ನು ಅವಲೋಕಿಸಿ ಮತ್ತೆ ತಮ್ಮ ಇಳಿ ವಯಸ್ಸಿನಲ್ಲಿ, ಯೌವ್ವನದ ಹುರುಪಿನಿಂದ ನಿರಂತರವಾಗಿ ಹೋರಾಟದ ಕಣಕ್ಕೆ ಧುಮುಕಿದರು. ತೀವ್ರವಾದಕ್ಕೆ ಸಿಲುಕಿ ಸಂಕಷ್ಟದಲ್ಲಿದ್ದ ಹಲವು ಯುವಜನರನ್ನು ಮುಖ್ಯವಾಹಿನಿಗೆ ತರುವಲ್ಲಿ ಅವರ ಪಾತ್ರವನ್ನು ಗಮನಿಸಬಹುದು. ಅವರು ಭೂಹೀನರು, ಆದಿವಾಸಿಗಳು, ಸ್ಲಂ ಪ್ರದೇಶದ ಜನರ ಭೂಮಿ, ವಸತಿ ಪ್ರಶ್ನೆಗಳಿಗಾಗಿ ನಡೆದ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಒಂದು ಮಟ್ಟಿನ ನ್ಯಾಯ ದೊರಕಿಸಲು ಸಾಧ್ಯವಾದುದು ಉಲ್ಲೇಖನೀಯ.

ಕೋಮುದಂಗೆಗಳು, ಬಾಬ್ರಿಮಸೀದಿ ನಾಶ, ಕೋಮುವಾದಿ ಶಕ್ತಿಗಳು ಅಧಿಕಾರವನ್ನು ಹಿಡಿದದ್ದು, ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ಧಾಳಿ ಅವರನ್ನು ಮತ್ತಷ್ಟು ಕ್ರುದ್ಧರನ್ನಾಗಿಸಿತು. ಕೋಮುಸೌಹಾರ್ದತೆ, ನಾಗರೀಕ ಹಕ್ಕುಗಳಿಗಾಗಿ ಅಹೋರಾತ್ರ ಶ್ರಮಿಸಿದರು.

ಕಳೆದ ಮೂರು ದಶಕಗಳಲ್ಲಿ ಅವರು ಭಾಗವಹಿಸಿದ, ನೇತೃತ್ವ ವಹಿಸಿದ ಹೋರಾಟಗಳು ಅಸಂಖ್ಯ. ಇಂತಹ ದಣಿವರಿಯದ ಸ್ವಾತಂತ್ರ್ಯ ಹೋರಾಟಗಾರನ ನಿಧನ ಕರ್ನಾಟಕಕ್ಕೆ ಮಾತ್ರವಲ್ಲ ದೇಶಕ್ಕೆ ಅಪಾರ ನಷ್ಟವಾಗಿದೆ.

"ಪೌರವಾಣಿ"ಸಂಪಾದಕರಾಗಿ ಪ್ರಭುತ್ವಕ್ಕೆ ಸವಾಲು...

"ಮೈಸೂರು ಸರ್ಕಾರದ ನಿರಂಕುಶ ನೀತಿಯನ್ನು ಪ್ರತಿಭಟಿಸಿ, ನಾಳೆಯಿಂದ ನಮ್ಮ ಪತ್ರಿಕೆಯನ್ನು ಹೊರತರಬಾರದೆಂದು ತೀರ್ಮಾನಿಸಿದ್ದೇವೆ"

ದೇಶಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಸಂಸ್ಥಾನ ಮಾತ್ರ ಒಕ್ಕೂಟಕ್ಕೆ ಸೇರಲು ಸಹಿ ಮಾಡದೆ ರಾಜಪ್ರಭುತ್ವದ ಪರತಂತ್ರದಲ್ಲಿಯೇ ಮುಂದುವರೆಯುತ್ತಿದ್ದಾಗ 'ಮೈಸೂರು ಚಲೋ' ಚಳವಳಿ ನಡೆಸಲು ಕಾಂಗ್ರೆಸ್ ನಿರ್ಧರಿಸಿತು. ಆಗ "ಪೌರವಾಣಿ' ಪತ್ರಿಕೆಯ ಸಂಪಾದಕರಾಗಿದ್ದ ಹೆಚ್.ಎಸ್.ದೊರೆಸ್ವಾಮಿ ಈ ಚಳುವಳಿಯಲ್ಲಿ ಪತ್ರಕರ್ತನಾಗಿ ವಹಿಸಿದ ಪಾತ್ರವನ್ನು 'ಇತಿಹಾಸ ದರ್ಪಣ' ಪತ್ರಿಕೆಯ ಸಂಪಾದಕ ಹಂ.ಗು.ರಾಜೇಶ್ ತಮ್ಮ ಒಂದು ಲೇಖನದಲ್ಲಿ ನೆನಪಿಸಿಕೊಂಡಿದ್ದಾರೆ. ಅದರ ಆಯ್ದ ಭಾಗವನ್ನು ಈ ಮುಂದೆ ಕೊಡಲಾಗಿದೆ.

ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಬಾಂಬ್ ಪ್ರಕರಣವೊಂದರ ಆರೋಪದ ಮೇಲೆ ದೊರೆಸ್ವಾಮಿಯವರನ್ನು 14 ತಿಂಗಳುಗಳ ಕಾಲ ಸ್ಥಾನಬದ್ಧತೆಯ ಮೇಲೆ ಸೆಂಟ್ರಲ್ ಜೈಲಿನಲ್ಲಿರಿಸಲಾಯಿತು. .... ಜೈಲಿನಿಂದ ಬಿಡುಗಡೆಗೊಂಡ ದೊರೆಸ್ವಾಮಿ ಅವರಿಗೆ ಯಾವುದೇ ಕೆಲಸ ಸಿಗಲಿಲ್ಲ. ಆದ್ದರಿಂದ ಸ್ನೇಹಿತರೊಬ್ಬರ ಸಲಹೆಯಂತೆ ಅವರು ಲೀಸ್ ಪಡೆದುಕೊಂಡಿದ್ದ ಕಾಡಿನಿಂದ ಮರದ ದಿಮ್ಮಿಗಳನ್ನು ಕಡೆದು ಬೆಂಗಳೂರಿನ ಪ್ಲೈವುಡ್ ಕಾರ್ಖಾನೆಗೆ ಸಾಗಿಸುವ ಕೆಲಸ ಆರಂಭಿಸಿದರು. ಮೊದಲು ಒಳ್ಳೆಯ ಆದಾಯವೇ ಬರುತ್ತಿತ್ತು. ಎರಡನೇ ಮಹಾಯುದ್ಧ ತೀವ್ರಗೊಂಡ ಪರಿಣಾಮ ಸಾಗಾಟಕ್ಕೆ ಬೇಕಾದ ಲಾರಿಗಳು ದೊರೆಕದಾದವು. ನ್ಯಾಯಾಧೀಶರೊಬ್ಬರ ಹಳೆಯ ಲಾರಿಯಲ್ಲಿ ಸಾಗಿಸಲು ಪ್ರಯತ್ನಪಟ್ಟರು. ಅದು ಸದಾ ಕೆಟ್ಟುನಿಲ್ಲುತ್ತಿತ್ತು. ರಿಪೇರಿಗೆ ಹೆಚ್ಚು ಸಮಯ ಬೇಕಾಗುತ್ತಿತ್ತು. ಹೀಗಿರಬೇಕಾದರೆ ಒಮ್ಮೆ ಮರವನ್ನು ತುಂಬುತ್ತಾ ಸಂಜೆ ಆಯಿತು. ಮಧ್ಯಾಹ್ನದಿಂದ ಊಟವಿಲ್ಲದೆ ಬಸವಳಿದಿದ್ದ ದೊರೆಸ್ವಾಮಿ ಅವರು ರಾತ್ರಿ ಕಾಡಿನಲ್ಲಿಯೇ ಕಳೆಯ ಬೇಕಾಯಿತು. ಅದೇ ರಾತ್ರಿ ಆನೆಯೊಂದು ಬಂದು ಲಾರಿಯನ್ನೂ ಉರುಳಿಸಿ ಹೋಯಿತು. ಆ ವನವಾಸವನ್ನು ಅನುಭವಿಸಿದ ದೊರೆಸ್ವಾಮಿ ಅವರು ಆ ಕೆಲಸಕ್ಕೆ ಶರಣು ಹೇಳಿದರು.

ಮುಂದೆ ಭವಿಷ್ಯದ ಚಿಂತೆ ಎದುರಾಯಿತು. ಆಗ ಮೈಸೂರಿನಲ್ಲಿಯೇ ನೆಲೆಸಲು ನಿರ್ಧರಿಸಿ, ಪ್ರಕಾಶನವನ್ನು ತೆರೆಯಲು ನಿರ್ಧರಿಸಿದರು. ಜಗನ್ಮೋಹನ ಅರಮನೆಯ ರಸ್ತೆಯಲ್ಲಿ ಒಂದು ಅಂಗಡಿಯನ್ನು ಬಾಡಿಗೆಗೆ ಪಡೆದು 'ಸಾಹಿತ್ಯ ಮಂದಿರ' ಎಂಬ ಪುಸ್ತಕ ಅಂಗಡಿ ತೆರೆದು ಪ್ರಕಾಶನ ಆರಂಭಿಸಿದರು. ಅನೇಕ ಪ್ರಸಿದ್ಧ ಸಾಹಿತಿಗಳು ಸಂಪರ್ಕಕ್ಕೆ ಬಂದರು. ವ್ಯಾಪಾರ ಕೂಡ ಚೆನ್ನಾಗಿಯೇ ನಡೆಯುತ್ತಿತ್ತು. ಹೀಗೆ ಮೈಸೂರಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ದೊರೆಸ್ವಾಮಿ ಅವರು ಗುರುತಿಸಲ್ಪಟ್ಟರು.

....

ಮೈಸೂರಿನಲ್ಲಿ 'ಸಾಹಿತ್ಯ ಮಂದಿರ' ಪ್ರಕಾಶನ ಕೂಡ ಚೆನ್ನಾಗಿಯೇ ನಡೆಯುತ್ತಿತ್ತು. ದೊರೆಸ್ವಾಮಿ ಅವರು ಎ.ಎಂ.ಸಿ.ಸಿ. ಮೈಸೂರಿನ ಸದಸ್ಯರೂ ಆಗಿದ್ದರು. ಅಷ್ಟರಲ್ಲಿ ಬೆಂಗಳೂರಿನ ಎ.ಎಂ.ಸಿ.ಸಿ. ಸದಸ್ಯರೂ ಹಾಗೂ 'ಪೌರವಾಣಿ' ಪತ್ರಿಕೆಯ ಸಂಪಾದಕರೂ ಆಗಿದ್ದ ಭದ್ರಣ್ಣನವರ ಅಕಾಲಿಕ ಮರಣ ಹೊಂದಿದರು. ಭದ್ರಣ್ಣನವರ ಆಸೆಯಂತೆ 'ಪೌರವಾಣಿ' ಪತ್ರಿಕೆಯನ್ನು ಮುನ್ನಡೆಸಲು ಯಾರೂ ಮುಂದೆ ಬಾರದಿದ್ದಾಗ ದೊರೆಸ್ವಾಮಿ ಅವರು ಆ ಕಾರ್ಯಕ್ಕೆ ಒಪ್ಪಿದರು. ಅದಕ್ಕಾಗಿ ಮತ್ತೆ ಬೆಂಗಳೂರಿಗೆ ಬಂದು ನೆಲೆಸಬೇಕಾಯಿತು. ಮೊನಚಾದ ಬರವಣಿಗೆ ಮತ್ತು ಖಂಡತುಂಡ ವಿಚಾರಗಳಿಗೆ 'ಪೌರವಾಣಿ' ಹೆಸರಾಗಿತ್ತು. ಅದರ ಹಿಂದೆ ಪತ್ರಿಕಾಲಯದಲ್ಲಿ ಸಂಪಾದಕರಾದ ದೊರೆಸ್ವಾಮಿ ಅವರು ನಿರ್ವಹಿಸುತ್ತಿದ್ದ ಕೆಲಸ ಒಂದೆರಡಲ್ಲ! ಕಸಗುಡಿಸುವುದರಿಂದ ಹಿಡಿದು, ಮುದ್ರಣಕ್ಕೆ ಕಾಗದ ಸಿದ್ಧಪಡಿಸುವುದು, ಬಂಡಲ್ ಕಟ್ಟುವುದು, ಅಂಗಡಿ, ಅಂಚೆಗಳಿಗೆ ಪತ್ರಿಕೆಗಳನ್ನು ಹಾಕಿಬರುವುದು ಇವೆಲ್ಲ ಕೆಲಸಗಳನ್ನು ನಿರ್ವಹಿಸಬೇಕಾಗುತ್ತಿತ್ತು. ಅಲ್ಲಿ ಕೆಲಸ ಮಾಡುವ ಯಾರಿಗೂ ವೇತನವಿರಲಿಲ್ಲ. ದೊರೆಸ್ವಾಮಿ ಅವರಿಗೆ ಕಛೇರಿಯಲ್ಲಿಯೇ ವಾಸ್ತವ್ಯ. ಎಂ.ಎನ್.ಸೀತಾರಾಮಯ್ಯನವರ ಮನೆಯಲ್ಲಿ ಊಟದ ವ್ಯವಸ್ಥೆ. ಹೀಗಿತ್ತು

ಪುಟ 12 ನೋಡಿ

ದೊರೆಯಾಗಲೊಲ್ಲದ ದೊರೆಸ್ವಾಮಿ

ಪರಿಸರವಾದಿ ಪತ್ರಕರ್ತ ನಾಗೇಶ ಹೆಗ್ಡೆ ಯವರ ಫೇಸ್‌ಬುಕ್ ಪೋಸ್ಟ್‌ನಿಂದ.....

ಅವರು ಹೆಸರಿಗಷ್ಟೇ ದೊರೆಸ್ವಾಮಿ. ದೊರೆತನಕ್ಕೂ ದೂರ, ಸ್ವಾಮಿತ್ವಕ್ಕೂ ಪ್ರತಿರೋಧ.

ನಾನು ಪತ್ರಕರ್ತ ಆಗಲೆಂದು ಬೆಂಗಳೂರಿಗೆ ಬಂದಾಗ ಈ ವಿಶಿಷ್ಟ ಪತ್ರ-ಕರ್ತರ ಪರಿಚಯವಾಯಿತು. ಇವರು ಆಗಾಗ "ವಾಚಕರ ವಾಣಿಗೆ ಪತ್ರ ಬರೆಯುತ್ತಿದ್ದರು. ಕುಸಿಯುತ್ತಿರುವ ನೈತಿಕತೆ, ಹೆಚ್ಚುತ್ತಿರುವ ಅಸಮಾನತೆ, ಆಳುವ ವರ್ಗದ ಸ್ವಾರ್ಥಪರ ಧೋರಣೆ, ಅಧಿಕಾರಿಗಳ ನಿರ್ಲಕ್ಷ್ಯ –ಹೀಗೆ ಎಚ್ಚರಿಕೆಯ ಕಾರ್ಡ್ ಅವರಿಂದ ಪ್ರಜಾವಾಣಿಗೆ ಬರುತ್ತಿತ್ತು.

ಒಮ್ಮೆ ನನಗೂ ಒಂದು ಕಾರ್ಡ್ ಹಾಕಿದರು. ಪರಿಸರ ರಕ್ಷಣೆ ಕುರಿತು ಗಾಂಧೀ ಭವನದಲ್ಲಿ ಮೀಟಿಂಗ್ ಮಾಡಬೇಕು, ಬನ್ನಿ ಅಂತ.

ಡ್ಯೂಟಿ ಮುಗಿಸಿ, ಎಂದಿನಂತೆ ಸೈಕಲ್ ಮೇಲೆ ಅವರಿದ್ದಲ್ಲಿಗೆ ಹೋದೆ. ನೋಡಿದರೆ, ಅವರು ಅಷ್ಟೆತ್ತರ ನಾನು ಇಷ್ಟೆತ್ತರ. ಅವರಿಗೆ 60, ನನಗೆ 30.

ನನ್ನ ಬರಹಗಳನ್ನೆಲ್ಲ ಓದಿಕೊಂಡಿದ್ದ ಅವರು ಬೆನ್ನಮೇಲೆ ಕೈ ಇಟ್ಟು "ಹೀಗೆ ಲೇಖನ ಬರೆದರೆ, ವರದಿ ಮಾಡಿದರೆ ಸಾಲದು; ಜನರನ್ನು ಎಬ್ಬಿಸೋಕೆ ಬೇರೆ ತಂತ್ರ ಹೂಡಬೇಕು, ಸತ್ಯಾಗ್ರಹ ಮಾಡಬೇಕು; ಸುದ್ದಿ ಮಾಡಬೇಕು" ಎಂದರು.

"ಸುದ್ದಿ– ಅದನ್ನು ನಾವು ಹ್ಯಾಗೆ ಮಾಡೋಕೆ ಸಾಧ್ಯ? ಸುದ್ದಿಯನ್ನು ವರದಿ ಮಾಡೋದಷ್ಟೇ ನಮ್ಮ ಕೆಲಸ" ಎಂದು ನಾನು ವಾದಿಸಿದ್ದೆ.

"ಒಂದು ಕರಪತ್ರ ಬರೆದುಕೊಡಿ" ಎಂದು ನನಗೆ ಆದೇಶ ನೀಡಿದರು. ಸ್ವಾತಂತ್ರ್ಯ ಹೋರಾಟದ, ಎಮರ್ಜೆನ್ಸಿ ಕಾಲದ ಭೂಗತ ಚಳವಳಿಗಳ ತಮ್ಮ ಅನುಭವವನ್ನು ವಿವರಿಸಿದರು. ಕರಪತ್ರದ ವಿಷಯವನ್ನೂ ಸೂಚಿಸಿದರು.

"ವಿದ್ಯುತ್ ಶಕ್ತಿಯ ಹೆಸರಿನಲ್ಲಿ ಪ್ರಕೃತಿಯ ಧ್ವಂಸ ಕಾರ್ಯ ನಡೀತಿದೆ. ಅದರ ಬಗ್ಗೆ ನಾಗರಿಕರು ಚರ್ಚೆ ಮಾಡಬೇಕು. ಗಾಂಧೀಭವನದಲ್ಲಿ ಸಭೆಗೆ ಬನ್ನಿ" ಎಂಬ ಆಮಂತ್ರಣ ಕರಪತ್ರ. ಅದರಲ್ಲಿ ಏನೇನು ಮುಖ್ಯಾಂಶ ಇರಬೇಕು ಎಂಬುದನ್ನೂ ತಿಳಿಸಿದರು.

ಕರಪತ್ರವನ್ನು ಯಾರದೋ ನೆರವಿನಿಂದ ಮುದ್ರಿಸಿ ಹೇಗೋ ಹಂಚಿರಬೇಕು. ಸಭೆ ಸೇರಿತು. ಸಾಕಷ್ಟು ಸಂಖ್ಯೆಯಲ್ಲಿ ಸರ್ಕಾರೇತರ ಸಂಸ್ಥೆ (NGO)ಗಳೂ ಪಾಲ್ಗೊಂಡಿದ್ದವು. ರಾಜ್ಯದ ಎಲ್ಲೆಲ್ಲಿ ನಿಸರ್ಗ ಸಂಪತ್ತಿನ ಕೊಳ್ಳೆ ಆಗುತ್ತಿದೆ, ಹೇಗೆ ಅಲ್ಲೆಲ್ಲ ಜನಜಾಗೃತಿ ಮಾಡಬೇಕು ಯಾರು ಯಾರು ಹೇಗೆ ಹೇಗೆ ಸಂಘಟನೆಗೆ ಕೈಜೋಡಿಸಬೇಕು ಇತ್ಯಾದಿ ಚರ್ಚೆ.

ನನ್ನ ಪಾಲಿಗೆ ಪರಿಸರ ಸಾಹಿತ್ಯವನ್ನು ಒದಗಿಸುವ, ಲೋಗೋ, ಭಿತ್ತಿಚಿತ್ರಗಳ ವಿನ್ಯಾಸದ, ಕರಪತ್ರ ಹೊರಡಿಸುವ ಕೆಲಸ ಬಂತು.

ಅಲ್ಲಿಂದ ಆರಂಭವಾಯಿತು "ಪರಿಸರವಾದ" ಎಂಬ ನಮ್ಮ ಹೊಸ ಇಸಂ. ನನ್ನ ಹೊಸ "ಗೆರಿಲ್ಲಾ" ಜರ್ನಲಿಸಂ.

ಕಡಲತೀರದಲ್ಲಿ ಶಿವರಾಮ ಕಾರಂತರು, ಬೆಂಗಳೂರಿನ ಜನಸಾಗರದಲ್ಲಿ ದೊರೆಸ್ವಾಮಿಯವರು ನಮ್ಮ ಹೊಸ ಚಳವಳಿಯ ಎರಡು ಮುಖ್ಯ ಆಧಾರಸ್ತಂಭಗಳಾಗಿದ್ದವು. ಆಮೇಲಿಂದ ದೊರೆಸ್ವಾಮಿಯವರು ಅನೇಕ ಬಗೆಯ ಪರಿಸರ ಪ್ರತಿಭಟನೆಗಳಲ್ಲಿ ನಾಡಿನುದ್ದಕ್ಕೂ ಓಡಾಡಿದರು. ಅದೆಷ್ಟೊ ಬಾರಿ ಎನ್‌ಆರ್ ಕಾಲೊನಿಯಲ್ಲಿದ್ದ ತಮ್ಮ ಮನೆಗೆ ನನ್ನನ್ನು ಕರೆಸಿಕೊಂಡು ಅಂದಂದಿನ ತಂತ್ರಜ್ಞಾನದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುತ್ತಿದ್ದರು.

ಕೈಗಾ ಚಳವಳಿಯ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ವನ್ಯಸಂಪತ್ತು ಅವರನ್ನು ಮೂಕವಿಸ್ಮಿತರನ್ನಾಗಿಸಿತ್ತು. ಅನೇಕ ಹಳ್ಳಿಗಳಲ್ಲಿ

ಪುಟ 12 ನೋಡಿ



ವಿಧ್ವಂಸದ ಯಾತನೆಯ 2 ವರ್ಷಗಳು





ಕಳೆದ ಎರಡು ವರ್ಷಗಳು ಭಾರತದ ಜನರಿಗೆ ಹಾಗೂ ನಮ್ಮ ಸಾಂವಿಧಾನಿಕ ಗಣತಂತ್ರಕ್ಕೆ ಯಾತನಾಮಯ, ಭೀತಿಗ್ರಸ್ತ ವರ್ಷಗಳು. 2020ರ ಜನವರಿಯ ಕೊನೆಯಲ್ಲಿ ಕೊವಿಡ್-19 ಮೊದಲಿಗೆ ಸ್ಫೋಟಗೊಂಡಂದಿನಿಂದಲೂ, ಮೋದಿ ಸರಕಾರ ಈ ಮಹಾರೋಗವನ್ನು ಎದುರಿಸಲು ಮತ್ತು ಹಾಗೂ ಜನರ ಜೀವವನ್ನು ಉಳಿಸಲು ಮನಃಪೂರ್ವಕವಾಗಿ ತೊಡಗಲೇ ಇಲ್ಲ, ಬದಲಿಗೆ ಈ ಸರ್ಕಾರ ಆರ್‌ಎಸ್‌ಎಸ್‌ನ ಯೋಜನೆಯನ್ನು ಅನಾವರಣಗೊಳಿಸುವ ತನ್ನ ಎಂದಿನ ಕಾರ್ಯದಲ್ಲಿಯೇ ಅವಿರತವಾಗಿ ಮಗ್ನವಾಗಿದೆ. ಅದರ ಒಟ್ಟಾರೆ ಫಲಿತಾಂಶವೇನೆಂದರೆ; ಜೀವರಕ್ಷಕ ಔಷಧಿಗಳ ತೀವ್ರ ಕೊರತೆ ಮತ್ತು ಆಸ್ಪತ್ರೆಗಳಲ್ಲಿ ಹಾಸಿಗೆಗಳ ಹಾಗೂ ವೆಂಟಿಲೇಟರುಗಳ ತೀವ್ರ ಕೊರತೆಯಿಂದಾಗಿ ಜನರು ಉಸಿರಾಡಲಾಗದೇ ಜೀವ ಕಳೆದುಕೊಳ್ಳುವಂತಾಗಿದೆ. ನದಿಗಳಲ್ಲಿ, ಮುಖ್ಯವಾಗಿ ಗಂಗಾ ನದಿಯಲ್ಲಿ ತೇಲುವ ಶವಗಳ ಭೀಭತ್ಸ ದೃಶ್ಯಗಳು ಮತ್ತು ಸಾಮೂಹಿಕ ಅಂತ್ಯಕ್ರಿಯೆಗಳು ಈ ಸರಕಾರ ದೇಶಕ್ಕೆ ಮತ್ತು ಜನಗಳಿಗೆ ತಂದು ಕೊಟ್ಟ ಸಾವಿನ ಘೋರ ಕುಣಿತವನ್ನು ಬಿಂಬಿಸುತ್ತಿವೆ.



ಸೀತಾರಾಮ್ ಯೆಚುರಿ

ಅನು: ಟಿ. ಸುರೇಂದ್ರ ರಾವ್

ಮರುಆಯ್ಕೆಯಾದ ಮೋದಿ-2 ಸರ್ಕಾರದ ಈ ಎರಡು ವರ್ಷಗಳಲ್ಲಿ, ಏಳು ವರ್ಷಗಳ ಹಿಂದೆ 2014ರ ಸಾರ್ವತ್ರಿಕ ಚುನಾವಣೆಯ ನಂತರದಲ್ಲಿ ಚಾಲನೆಗೆ ತಂದ ಪ್ರಕ್ರಿಯೆಯ ಕ್ರೋಢೀಕರಣವನ್ನು ನಾವು ಕಾಣುತ್ತಿದ್ದೇವೆ. ಅದು ಭಾರತವನ್ನು, ಒಂದು ಉನ್ಮತ್ತ ಅಸಹಿಷ್ಣು, ಮತೀಯ, ಫ್ಯಾಸಿಸ್ಟ್ ನಮೂನೆಯ "ಹಿಂದೂ ರಾಷ್ಟ್ರ"ವನ್ನಾಗಿ ಪರಿವರ್ತಿಸಬೇಕೆಂಬ ಕಲ್ಪನೆಯ ಆರ್‌ಎಸ್‌ಎಸ್‌ನ ಯೋಜನೆಯನ್ನು ಸಾಕಾರಗೊಳಿಸುವ ಪ್ರಕ್ರಿಯೆ. 1925ರಲ್ಲಿ ಅದರ ಸ್ಥಾಪನೆಯಾದಾಗ ಘೋಷಿಸಲ್ಪಟ್ಟ ಉದ್ದೇಶವದು. "ಹಿಂದುತ್ವ" ಎಂಬುದನ್ನು ಸಾವರ್ಕರ್ ಒಂದು ರಾಜಕೀಯ ಯೋಜನೆಯಾಗಿ ಸೃಷ್ಟಿಸಿದರು, ಇದಕ್ಕೂ ಹಿಂದೂ ಧರ್ಮಕ್ಕೂ ಏನೇನೂ ಸಂಬಂಧವಿಲ್ಲ. ಈ ಯೋಜನೆಯನ್ನು ಜಾರಿ ಮಾಡಲು ಒಂದು ಸೈದ್ಧಾಂತಿಕ ನೆಲೆಯ ಸಂಘಟನಾತ್ಮಕ ಸಂರಚನೆಯನ್ನು 1939ರಲ್ಲಿ ಗೋಲ್ವಾಲ್ಕರ್ ಹುಟ್ಟುಹಾಕಿದರು. ಆರ್‌ಎಸ್‌ಎಸ್‌ನ ಈ ಯೋಜನೆಗೆ ತದ್ವಿರುದ್ಧವಾದ ಭಾರತದ ಸಂವಿಧಾನದ ಮೇಲೆ ದಾಳಿ ಮಾಡುವ ಹುನ್ನಾರ ಅವರದಾಗಿದೆ. ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರ ಸಂವಿಧಾನವನ್ನು ನಿರ್ನಾಮಗೊಳಿಸುವ ಕ್ರಿಯೆಯು 2019ರ ಚುನಾವಣೆಯ ನಂತರ ಉನ್ಮಾದಕರ ವೇಗ ಪಡೆದುಕೊಂಡಿದೆ.

ಮಹಾಸೋಂಕಿನ ಮಹಾವಿನಾಶ

ಭಾರತದಲ್ಲಿ ಈ ಮಹಾಸೋಂಕು 2020ರ ಜನವರಿಯ ಕೊನೆಯಲ್ಲಿ ಮೊದಲಿಗೆ ಸ್ಫೋಟಗೊಂಡಂದಿನಿಂದಲೂ, ಮೋದಿ ಸರಕಾರ ಈ ಮಹಾರೋಗವನ್ನು ಎದುರಿಸಲು ಮತ್ತು ಹಾಗೂ ಜನರ ಜೀವವನ್ನು ಉಳಿಸಲು ಮನಃಪೂರ್ವಕವಾಗಿ ತೊಡಗಲೇ ಇಲ್ಲ, ಬದಲಿಗೆ ಈ ಸರ್ಕಾರ ಆರ್‌ಎಸ್‌ಎಸ್‌ನ ಯೋಜನೆಯನ್ನು ಅನಾವರಣಗೊಳಿಸುವ ತನ್ನ ಎಂದಿನ ಕಾರ್ಯದಲ್ಲಿಯೇ ಅವಿರತವಾಗಿ ಮಗ್ನವಾಗಿದೆ.

ಇದರಿಂದಾಗಿ ಭಾರತದ ಜನರು ದುಬಾರಿ ಬೆಲೆ ತೆರಬೇಕಾಗಿ ಬಂದಿದೆ. ಇಡೀ ಒಂದು ವರ್ಷ, ನಮ್ಮ ಪಕ್ಷ ಹಾಗೂ ಇತರ ಹಲವಾರು ವಿರೋಧ ಪಕ್ಷಗಳು ಎಷ್ಟು ಗೋಗರೆದರೂ, ಈ ಮಹಾಸೋಂಕನ್ನು ಎದುರಿಸುವ ನಿಟ್ಟಿನಲ್ಲಿ ಯಾವುದೇ ಅಗತ್ಯ ಕ್ರಮ ಕೈಗೊಳ್ಳಲಿಲ್ಲ. ನಿಜ ಹೇಳಬೇಕೆಂದರೆ, ಏನನ್ನು ಮಾಡದ ಒಂದು ಅಸಡ್ಡೆಯೇ ಆವರಿಸಿತ್ತು. ನಮ್ಮ ಆರೋಗ್ಯ ಸಿಬ್ಬಂದಿಗಳಿಗೆ ಅಗತ್ಯವಿದ್ದ ಸಂರಕ್ಷಕ ಸಲಕರಣೆಗಳನ್ನು ಒದಗಿಸುವಲ್ಲಿ, ಆಸ್ಪತ್ರೆಗಳಲ್ಲಿ ಸ್ಥಳವನ್ನು ವ್ಯಾಪಕವಾಗಿ ವಿಸ್ತರಿಸುವಲ್ಲಿ, ಖಾಸಗಿ ಆಸ್ಪತ್ರೆಗಳ ಸೌಕರ್ಯಗಳನ್ನು ಒಳಗೊಳ್ಳುವಲ್ಲಿ(ಸ್ಪೈನ್ ದೇಶದಲ್ಲಿ ಎಲ್ಲಾ ಖಾಸಗಿ ಆರೋಗ್ಯ ಸೌಕರ್ಯಗಳನ್ನು ತಾತ್ಕಾಲಿಕವಾಗಿ ರಾಷ್ಟ್ರೀಕರಣ ಮಾಡಿರುವುದನ್ನು ಸರ್ಕಾರದ ಗಮನಕ್ಕೆ ತಂದಾಗಲೂ) ಮತ್ತು ಆಮ್ಲಜನಕ ಪೂರೈಸುವಲ್ಲಿ ಹಾಗೂ ಆಗತಾನೇ ಉತ್ಪಾದನೆಯಾಗುತ್ತಿದ್ದ ಲಸಿಕೆಗಳಿಗೆ ಸರ್ಕಾರದಿಂದ ಮುಂಚೆಯೇ ಬೇಡಿಕೆಗಳನ್ನು ಸಲ್ಲಿಸುವಲ್ಲಿ ಹೀಗೆ ಆರೋಗ್ಯ ಕ್ಷೇತ್ರದಲ್ಲಿ ಯಾವುದೇ ತಯಾರಿ ಮಾಡಲಿಲ್ಲ. ಈ ಎಲ್ಲಾ ವಿಷಯಗಳಿಗೆ ಮೋದಿ ಸರ್ಕಾರ ಯಾವುದೇ ಗಮನ ನೀಡಲಿಲ್ಲ, ಹಾಗಾಗಿ ದಯನೀಯವಾಗಿ ವಿಫಲವಾಗಿದೆ.

ಹಠಾತ್ತಾಗಿ, ಯಾವುದೇ ತಯಾರಿಯಿಲ್ಲದೇ, ಕೆಟ್ಟ ಯೋಜನೆಯ ಲಾಕ್ಡೌನ್ ಭಾರಿ ಅನಾಹುತವನ್ನೇ ಮಾಡಿತು. ಕೋವಿಡ್ ದಾಳಿಗೆ ಮುಂಚೆಯೇ ಹಿಂಜರಿತಕ್ಕೆ ಜಾರಿದ್ದ ಭಾರತದ ಆರ್ಥಿಕತೆಯು ಈಗ ವಿನಾಶದ ಅಂಚನ್ನು ತಲುಪಿತು. ಕೋಟ್ಯಾಂತರ ಜನರು ಉದ್ಯೋಗ ಕಳೆದುಕೊಂಡರು. ಹಸಿವು ವ್ಯಾಪಕವಾಗಿತ್ತು. ಆದರೆ ನೇರ ನಗದು ಹಣ ವರ್ಗಾವಣೆಯನ್ನಾಗಲೀ ಅಥವಾ ಉಚಿತ ಆಹಾರ ಧಾನ್ಯಗಳ ವಿತರಣೆಯನ್ನಾಗಲೀ ಸರ್ಕಾರ ಕೈಗೊಳ್ಳಲಿಲ್ಲ.

ಕೈಗಾರಿಕಾ ಕೇಂದ್ರಗಳಿಂದ ವಲಸೆ ಕಾರ್ಮಿಕರು ಹತಾಶರಾಗಿ ತಮ್ಮ ತಮ್ಮ ಮನೆ ಊರುಗಳಿಗೆ ಹೋಗಬೇಕೆಂದು ದೊಡ್ಡ ಸಂಖ್ಯೆಯಲ್ಲಿ ಗುಳೆ ಹೋಗುವ ದೃಶ್ಯಗಳು ದೇಶವಿಭಜನೆಯ ಸಂದರ್ಭದಲ್ಲಿನ ಜನರ ಸಂಕಟವನ್ನು ನೆನಪಿಸುವಂತಿದ್ದವು. ಅವರಿಗೆ ರಸ್ತೆ ಸಾರಿಗೆಯನ್ನಾಗಲೀ ಅಥವಾ ರೈಲು ಪ್ರಯಾಣ ವ್ಯವಸ್ಥೆಯನ್ನಾಗಲೀ ಸರ್ಕಾರ ಒದಗಿಸಲಿಲ್ಲ. ಇದು ಸಹಜವಾಗಿಯೇ, ವೈರಾಣು ವ್ಯಾಪಕವಾಗಿ ಹಬ್ಬಲು ಕಾರಣವಾಯಿತಲ್ಲದೇ ಭಾರತದ ಉತ್ಪಾದನಾ ಚಟುವಟಿಕೆಯ ಬೆನ್ನೆಲುಬಾಗಿರುವ ಈ ಅದೃಷ್ಟಹೀನ ಬಡವರ ಹೇಳಲಾಗದ ಸಾವು-ನೋವುಗಳಲ್ಲಿ ಪರ್ಯವಸಾನವಾಯಿತು.

ಎಲ್ಲಾ ಮುನ್ನೆಚ್ಚರಿಕೆಗಳಿದ್ದರೂ, ಅವುಗಳ ನಡುವೆಯೂ, ಮೋದಿ ಸರ್ಕಾರ ಕೋವಿಡ್ ವಿರುದ್ಧದ ಸಮರದಲ್ಲಿ ಗೆದ್ದಿರುವುದಾಗಿ ಸಾರಿತು. ತನ್ನನ್ನು "ವಿಶ್ವಗುರು" ಎಂದು ಬಿಂಬಿಸಿಕೊಳ್ಳುವ ಆತುರದಲ್ಲಿ, ಭಾರತವು ತನ್ನ ಲಸಿಕೆ ಉತ್ಪಾದನೆ ಮೂಲಕ ಮಾನವ ಕುಲವನ್ನು ರಕ್ಷಿಸುತ್ತಿದೆ ಎಂದು ಆಟಾಟೋಪದಿಂದ ಹೇಳಿಕೊಂಡರು.


ಈ ಮಧ್ಯೆ, ಕುಂಭಮೇಳಕ್ಕೆ ಅನುಮತಿ ನೀಡಲಾಯಿತು. ಮುಂಬರುವ ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕೋಮು ಧ್ರುವೀಕರಣದ ಮೂಲಕ ಹೆಚ್ಚು ಮತಗಳನ್ನು ಗಳಿಸಿ ಚುನಾವಣಾ ಪ್ರಯೋಜನ ಪಡೆಯುವ ಸಲುವಾಗಿ ಒಂದು ವರ್ಷ ಮುಂಚೆಯೇ ಅದನ್ನು ಮಾಡುವ ತೀರ್ಮಾನ ಮಾಡಲಾಯಿತು. ಐಪಿಎಲ್ ಕ್ರಿಕೆಟ್ ಪಂದ್ಯಕ್ಕೆ ಅನುಮತಿ ನೀಡಲಾಯಿತು. ಕೋವಿಡ್‌ನ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಪ್ರಧಾನಿ ಮತ್ತು ಗೃಹಮಂತ್ರಿಗಳ ಬೃಹತ್ ಚುನಾವಣಾ ಸಭೆಗಳನ್ನು ಏರ್ಪಡಿಸಲಾಯಿತು. ಈ ಎಲ್ಲಾ ನಿರ್ಧಾರಗಳು ಅನಾಹುತಕ್ಕೆ ಕಾರಣವಾದವು. ಅವು ಕೋವಿಡ್ ವೈರಾಣುವಿನ ಸಾಮೂಹಿಕ ಪ್ರಸರಣವನ್ನು ತ್ವರಿತಗೊಳಿಸಿದವು. ಸಾವುಗಳು ಮತ್ತು ಸೋಂಕುಗಳು ತೀವ್ರವಾಗಿ ಏರಿದವು, ಜತೆಯಲ್ಲೇ ಲಸಿಕೆಯ ಕೊರತೆ ಕೂಡ ತೀವ್ರಗೊಂಡಿತು.

ಎರಡನೇ ಅಲೆಯ ಕ್ರೌರ್ಯ ಶುರುವಾದಂತೆ, ತನ್ನ ಹೊಣೆಗಾರಿಕೆಯಿಂದ ನುಣುಚಿಕೊಂಡ ಮೋದಿ ಸರ್ಕಾರ ಯಾವುದೇ ಆರ್ಥಿಕ ಪ್ಯಾಕೇಜುಗಳನ್ನು ನೀಡದೇ ರಾಜ್ಯ ಸರ್ಕಾರಗಳ ಮೇಲೆ ಹೊರೆ ಹೊರಿಸಿತು, ಮತ್ತು ಮುನ್ನೆಚ್ಚರಿಕೆಯನ್ನು ಕಡೆಗಣಿಸಿದರೆಂದು ಜನರನ್ನು ದೂಷಿಸಲು ಪ್ರಾರಂಭಿಸಿತು. ಅದರ ಒಟ್ಟಾರೆ ಫಲಿತಾಂಶವೇನೆಂದರೆ; ಜೀವರಕ್ಷಕ ಔಷಧಿಗಳ ತೀವ್ರ ಕೊರತೆ ಮತ್ತು ಆಸ್ಪತ್ರೆಗಳಲ್ಲಿ ಹಾಸಿಗೆಗಳ ಹಾಗೂ ವೆಂಟಿಲೇಟರುಗಳ ತೀವ್ರ ಕೊರತೆಯಿಂದಾಗಿ ಜನರು ಉಸಿರಾಡಲಾಗದೇ ಜೀವ ಕಳೆದುಕೊಳ್ಳುವಂತಾಯಿತು.

ಭಾರತವು ಇವತ್ತು ಪ್ರತಿದಿನ ಅತ್ಯಂತ ಹೆಚ್ಚಿನ ಸಂಖ್ಯೆಯ ಸಾವು ಮತ್ತು ಸೋಂಕಿನ ಪ್ರಕರಣಗಳನ್ನು ಹೊಂದಿರುವ ಅತ್ಯಂತ ರೋಗಗ್ರಸ್ತ ದಾಖಲೆಯನ್ನು ಪಡೆದಿದೆ. ಮೋದಿಯ ಕೋವಿಡ್ ನಿರ್ವಹಣೆ ಅಂತಹ ಅನಾಹುತಕ್ಕೆ ಕಾರಣವಾಗಿದೆ. ಅದು ಜನರ ಜೀವ ರಕ್ಷಣೆಯನ್ನೂ ಮಾಡಲಿಲ್ಲ, ಮರಣ ಹೊಂದಿದವರಿಗೆ ಗೌರವಯುತವಾದ ಅಂತ್ಯಕ್ರಿಯೆಯ ಏರ್ಪಾಟು ಮಾಡಲು ಕೂಡ ಅದಕ್ಕೆ ಸಾಧ್ಯವಾಗಲಿಲ್ಲ. ನದಿಗಳಲ್ಲಿ, ಮುಖ್ಯವಾಗಿ ಗಂಗಾ ನದಿಯಲ್ಲಿ ತೇಲುವ ಶವಗಳ ಭೀಭತ್ಸ ದೃಶ್ಯಗಳು ಮತ್ತು ಸಾಮೂಹಿಕ ಅಂತ್ಯಕ್ರಿಯೆಗಳು ಈ ಸರಕಾರ ದೇಶಕ್ಕೆ ಮತ್ತು ಜನಗಳಿಗೆ ತಂದು ಕೊಟ್ಟ ಸಾವಿನ ಕರಾಳ ನೃತ್ಯವನ್ನು ಬಿಂಬಿಸುತ್ತಿವೆ.

ಈಗಲೂ ಕೂಡ, ಎಲ್ಲಾ ಮೂಲಗಳಿಂದ ಲಸಿಕೆಗಳನ್ನು ತರಿಸುವ ಮೂಲಕ ಮತ್ತು ದೇಶಾದ್ಯಂತ ಎಲ್ಲರಿಗೂ ಉಚಿತವಾದ ಹಾಗೂ ಸಾರ್ವತ್ರಿಕ


ಪುಟ 10 ನೋಡಿ



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ









ವಿಧ್ವಂಸದ ಯಾತನೆಯ 2 ವರ್ಷಗಳು

ಪುಟ 9 ರಿಂದ

ಸಾಮೂಹಿಕ ಲಸಿಕೆಯನ್ನು ನೀಡುವ ಮೂಲಕ ಜನರಿಗೆ ಪರಿಹಾರ ಒದಗಿಸಲು ನಿರಾಕರಿಸುವ ಹೀನಾಯ ಸ್ಥಿತಿಯೇ ಇದೆ. ಈಗಲೂ, ಸಮರೋಪಾದಿಯಲ್ಲಿ ಅಗತ್ಯವಾದ ಆರ್ಥಿಕ ಹಾಗೂ ಆಹಾರ ನೆರವಿನ ಜತೆಯಲ್ಲಿ ಲಸಿಕೆ ನೀಡುವಂತೆ ಮೋದಿ ಸರ್ಕಾರವನ್ನು ಬಲವಂತ ಮಾಡಿದರೆ ಮಾತ್ರವೇ ಭಾರತದ ಜನರು ತಮ್ಮ ಜೀವ ಉಳಿಸಿಕೊಳ್ಳಬಹುದು ಎಂಬುದು ಸತ್ಯಸಂಗತಿ.

ಸಂವಿಧಾನದ ಧ್ವಂಸ

ಮೋದಿ 2.0 ಸರ್ಕಾರ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸ್ಥಾನಮಾನ ನಿರೂಪಿಸಿದ್ದ ಮತ್ತು ರಕ್ಷಿಸಿದ್ದ ಭಾರತೀಯ ಸಂವಿಧಾನದ ಪರಿಚ್ಛೇದ 370 ಮತ್ತು 35ಎ ಗಳನ್ನು ರದ್ದುಗೊಳಿಸುವ ಮೂಲಕ ತನ್ನ ಆಳ್ವಿಕೆಯನ್ನು ಆರಂಭಿಸಿತು. ಒಂದೇ ಹೊಡೆತದಲ್ಲಿ ಒಂದು ರಾಜ್ಯದ ಅಸ್ತಿತ್ವವೇ ಕೊನೆಗೊಂಡಿತು ಮತ್ತು ಕಾರ್ಯತಃ ಮಿಲಿಟರಿಯ ವಶಕ್ಕೆ ಆ ರಾಜ್ಯ ಹೋಯಿತು, ಎಲ್ಲಾ ಸಂಪರ್ಕಗಳೂ ಕಡಿದುಹೋಗಿ ಜನಜೀವನ ಅಸ್ತವ್ಯಸ್ತಗೊಂಡಿತು. ಎರಡು ವರ್ಷಗಳ ನಂತರವೂ ಜನರು ತಮ್ಮ ದಿನನಿತ್ಯದ ಸಹಜ ಚಟುವಟಿಕೆಗಳನ್ನು ನಡೆಸಲಾರದ ಪರಿಸ್ಥಿತಿ ಅಲ್ಲಿದೆ. ಕುತಂತ್ರದಿಂದ ಕೈಗೊಂಡ ಈ ಕ್ರಮವು ಸಂವಿಧಾನ ಮತ್ತದರ ವಿಧಿ–ವಿಧಾನಗಳ ಸ್ಪಷ್ಟ ಉಲ್ಲಂಘನೆಯಾಗಿದೆ.

ಇದರ ಜತೆಯಲ್ಲಿಯೇ ಪೌರತ್ವ (ತಿದ್ದುಪಡಿ) ಕಾಯಿದೆ(ಸಿಎಎ)ಯ ಅಂಗೀಕಾರ ಕೂಡ ಸಂವಿಧಾನದ ನಗ್ನ ಉಲ್ಲಂಘನೆಯಾಗಿದ್ದು ನಮ್ಮ ಸಂವಿಧಾನಕ್ಕೆ ಬಗೆದ ದ್ರೋಹವಾಗಿದೆ. ಮೊಟ್ಟ ಮೊದಲ ಬಾರಿಗೆ, ದೇಶದ ಪೌರತ್ವವನ್ನು ಒಬ್ಬ ವ್ಯಕ್ತಿಯ ಧಾರ್ಮಿಕ ನೆಲೆಗೆ ತಳಕು ಹಾಕಲಾಗಿದೆ.

ಈ ಸಿಎಎ ವಿರುದ್ಧ ದೇಶಾದ್ಯಂತ ದೊಡ್ಡ ಮಟ್ಟದ ಯುವಜನರ ಪಾಲ್ಗೊಳ್ಳುವಿಕೆಯೊಂದಿಗೆ ನಡೆದ ಭಾರಿ ಪ್ರತಿಭಟನೆಗಳನ್ನು ನಿರ್ವಹಿಸಿದ ರೀತಿಯು ಶಾಂತಿಯುತ ಪ್ರತಿಭಟನೆ ಮಾಡುವ ಜನರ ಸಾಂವಿಧಾನಿಕ ಹಕ್ಕುಗಳನ್ನು ಸರ್ಕಾರ ಎಷ್ಟು ತುಚ್ಛವಾಗಿ ಕಾಣುತ್ತದೆ ಎನ್ನುವುದಕ್ಕೆ ಸಾಕ್ಷಿ. ಸಿಎಎ/ಎನ್‌ಪಿಆರ್/ಎನ್‌ಆರ್‌ಸಿಗಳ ವಿರುದ್ಧ ಬೆಳೆಯುತ್ತಿದ್ದ ಈ ಐಕ್ಯತೆಯನ್ನು ಒಡೆಯುವ ಸಲುವಾಗಿ ಅಲಿಘರ್, ಜಾಮಿಯಾ, ಜೆಎನ್‌ಯು ವಿಶ್ವವಿದ್ಯಾಲಯಗಳನ್ನೂ ಒಳಗೊಂಡಂತೆ ಹಲವಾರು ಪ್ರದೇಶಗಳಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ದಾಳಿ ಮಾಡುವ ಮೂಲಕ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ "ನಮಸ್ತೆ ಟ್ರಂಪ್" ಎಂಬ ಭಾರಿ ಸಾರ್ವಜನಿಕ ಸ್ವಾಗತ ಸಮಾರಂಭ ಏರ್ಪಡಿಸುವಾಗಲೇ ದೆಹಲಿಯಲ್ಲಿ ಕೋಮು ಗಲಭೆಯನ್ನು ಹರಿಬಿಡಲಾಯಿತು.

ಸಂವಿಧಾನದ ಆಧಾರ ಸ್ತಂಭಗಳ ಮೇಲೆ ಹಲ್ಲೆ

ಸಂವಿಧಾನದ ಮೇಲಿನ ಹಲ್ಲೆಯು ನಿಜಕ್ಕೂ ಸ್ವತಂತ್ರ ಭಾರತದ ಸ್ವರೂಪದ ಮೇಲೆಯೇ ಮಾಡಿದ ಹಲ್ಲೆಯಾಗಿದೆ. ಭಾರತದ ಸಂವಿಧಾನವು ನಮ್ಮ ದೇಶ ಹಾಗೂ ಜನರ ಶ್ರೀಮಂತ ಬಹುತ್ವ ಹಾಗೂ ವೈವಿಧ್ಯತೆಯ ಅಭಿವ್ಯಕ್ತಿಯಾಗಿದೆ. ಈ ವೈವಿಧ್ಯತೆಯೊಳಗಿನ ಸಮಾನ ಅಂಶಗಳ ಎಳೆಗಳನ್ನು ಬಲಪಡಿಸುವ ಮೂಲಕ ಮಾತ್ರವೇ ಭಾರತದ ಐಕ್ಯತೆಯನ್ನು ಕ್ರೋಢೀಕರಿಸಲು ಸಾಧ್ಯವಾಗುತ್ತದೆ. ಈ ಪರಿಕಲ್ಪನೆಯ ಮೇಲೆಯೇ ದಾಳಿ ಮಾಡುವ ಮೂಲಕ ಬಿಜೆಪಿ/ಆರ್‌ಎಸ್‌ಎಸ್ ನಮ್ಮ ವೈವಿಧ್ಯತೆಗಳ – ಭಾಷಾ, ಜನಾಂಗೀಯ, ಧಾರ್ಮಿಕ ಮುಂತಾದ– ಎಲ್ಲಾ ಅಭಿವ್ಯಕ್ತಿಗಳ ಮೇಲೆ ಏಕರೂಪತೆಯನ್ನು ಹೇರಲು ಬಯಸುತ್ತದೆ. "ಹಿಂದುತ್ವ ರಾಷ್ಟ್ರ"ವೆಂಬ ಆ ಪರಿಕಲ್ಪನೆಯೇ ಎಲ್ಲಾ ಧಾರ್ಮಿಕ ಅಲ್ಪಸಂಖ್ಯಾತ ಗುಂಪುಗಳನ್ನು ಒಂದೇ ಹಿಂದೂವಾದದಲ್ಲಿ ಅಂತರ್ಗತಗೊಳ್ಳಬೇಕು ಅಥವಾ ಸಮಾನತೆಯ ಯಾವುದೇ ಸಾಂವಿಧಾನಿಕ ಹಕ್ಕುಗಳಿಲ್ಲದೇ ಎರಡನೇ ದರ್ಜೆಯ ಪ್ರಜೆಗಳಂತೆ ಬದುಕಬೇಕೆಂಬ ಬಲವಂತಕ್ಕೆ ಒಳಪಡಿಸುತ್ತದೆ. ಹಿಂದೂವಾದದ ಅಡಿಯಲ್ಲಿ ಎಲ್ಲಾ ಭಿನ್ನ ಗುಂಪುಗಳ ಸೇರ್ಪಡೆ ಮೂಲಕ ಜನಾಂಗೀಯ ವೈವಿಧ್ಯತೆಯನ್ನು ಅಳಿಸಿಹಾಕುವ ಪ್ರಯತ್ನ ನಡೆಯುತ್ತಿದೆ. 'ಹಿಂದು–ಹಿಂದಿ–ಹಿಂದೂಸ್ತಾನ್' ಎಂಬ ಆರ್‌ಎಸ್‌ಎಸ್‌ನ ಘೋಷಣೆಯು ಒಂದು ಭಾಷಾ ಏಕರೂಪತೆಯನ್ನು ಹೇರುತ್ತದೆ. ಈ ಯತ್ನವು ಸಾಮಾಜಿಕ ಅಂತಃಸ್ಫೋಟದ ಸೂತ್ರವಾಗುತ್ತದೆ. ಇದನ್ನು ಬಿಜೆಪಿಯು ಪ್ರಜಾಪ್ರಭುತ್ವ, ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಹಕ್ಕುಗಳನ್ನು ಪಕ್ಕಕ್ಕೆ ಎಸೆದು, ಫ್ಯಾಸಿಸ್ಟ್ ನಮೂನೆಯ ವಿಧಾನಗಳನ್ನು ಪ್ರಯೋಗಿಸಿ ಮತ್ತು ಯುಎಪಿಎ, ದೇಶದ್ರೋಹ ಇತ್ಯಾದಿ ಕರಾಳ ಕಾನೂನುಗಳನ್ನು ಬಳಸಿ ದಮನ ಮಾಡುತ್ತದೆ. ಇವುಗಳನ್ನು ವಿರೋಧಿಸುವವರನ್ನೆಲ್ಲಾ "ಆಂತರಿಕ ವೈರಿಗಳು" ಎಂದು ಬಗೆಯಲಾಗುತ್ತದೆ. ಹೀಗೆ ಪ್ರಜಾಪ್ರಭುತ್ವದ ಹಾಗೂ ಸಾಂವಿಧಾನಿಕ ಹಕ್ಕುಗಳಾದ ಸ್ವಾತಂತ್ರ್ಯ ಮತ್ತು ಸಮಾನತೆಯ ನಿರಾಕರಣೆಯಾಗುತ್ತದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದಿರುವುದು ಈಗ ಲಕ್ಷದ್ವೀಪದಲ್ಲಿ ಪುನರಾವರ್ತನೆಗೊಳ್ಳುತ್ತಿದೆ. ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳ ಮೇಲೆ ಆವೇಶಭರಿತ ಕೋಮುವಾದಿ ದಾಳಿಗಳೊಂದಿಗೆ ಜನರ ಸಾಂವಿಧಾನಿಕ ಹಕ್ಕುಗಳ ಮೇಲೆ ಹಲ್ಲೆ ಮಾಡಲು ಯತ್ನಿಸಲಾಗುತ್ತಿದೆ.

ಸ್ವಾವಲಂಬನೆ: ಸ್ವಾವಲಂಬನೆಯ ಆಧಾರಸ್ತಂಭದ ಅಡಿಪಾಯವನ್ನು 2014ರ ನಂತರ ವ್ಯವಸ್ಥಿತವಾಗಿ ಶಿಥಿಲಗೊಳಿಸಲಾಗುತ್ತಿದೆ, 2019ರ ನಂತರ ಇದು ಇನ್ನೂ ಜೋರಾಗಿ ನಡೆಯುತ್ತಿದೆ. ನಿರ್ದಯವಾಗಿ ರಾಷ್ಟ್ರೀಯ ಸಂಪತ್ತನ್ನು ಲೂಟಿ ಮಾಡಲಾಗುತ್ತಿದೆ. ಬಂಟ ಬಂಡವಾಳಶಾಹಿಯ ಅತ್ಯಂತ ಒರಟು ಅಭಿವ್ಯಕ್ತಿಯು ಅದರ ಜತೆಗೂಡಿದೆ. ಸಾರ್ವಜನಿಕ ವಲಯವನ್ನು ಕಳಚಿಹಾಕಲಾಗುತ್ತಿದೆ ಹಾಗೂ ಬೇಕಾಬಿಟ್ಟಿಯಾಗಿ ಮಾರಲಾಗುತ್ತಿದೆ; ಹಣಕಾಸು ವಲಯವನ್ನು ವಿರಾಷ್ಟ್ರೀಕರಣ ಮಾಡಲಾಗುತ್ತಿದ್ದು ಅದು ಅಂಚಿಗೆ ತಳ್ಳಲ್ಪಟ್ಟಿರುವ ಜನವಿಭಾಗಗಳನ್ನು ಹೊರದಬ್ಬುತ್ತದೆ.

ಇದರೊಂದಿಗೆ ದುಡಿಯುವ ಜನರ ಹಕ್ಕುಗಳ ಮೇಲೆ ಒಂದು ನಿರ್ದಯ ದಾಳಿ ಮಾಡುತ್ತಿದೆ. ಎಲ್ಲಾ ಕಾರ್ಮಿಕ ಕಾನೂನುಗಳನ್ನು ರದ್ದುಮಾಡಲಾಗಿದೆ; ಹೊಸ ಕಾರ್ಮಿಕ ಸಂಹಿತೆಗಳು ಒಂದು ಹೀನ ಸಮರ್ಥನೆಯಷ್ಟೆ. ಹೊಸ ಕೃಷಿ ಕಾನೂನುಗಳ ಮೂಲಕ ಕೃಷಿಯನ್ನು ಕಾರ್ಪೊರೇಟ್ ಹಿತಾಸಕ್ತಿಗೆ ಒತ್ತೆಯಿಡಲಾಗುತ್ತಿದೆ, ಅದು ನಿಸ್ಸಂಶಯವಾಗಿಯೂ ಭಾರತೀಯ ಕೃಷಿ ಹಾಗೂ ರೈತರ ವಿನಾಶಕ್ಕೆ ನಾಂದಿ ಹಾಡಲಿದೆ. ಅದೇ ರೀತಿಯಲ್ಲಿ ಖನಿಜ ಸಂಪತ್ತನ್ನು ಖಾಸಗಿಯವರ ಗರಿಷ್ಠ ಲಾಭಕ್ಕಾಗಿ ತೆರೆದಿಡಲಾಗಿದೆ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಕಳೆದ ಏಳು ದಶಕಗಳ ಕಾಲ ಭಾರತದ ಸಹಾಯಕ್ಕೊದಗಿದ ಭಾರತದ ಸ್ವಾವಲಂಬೀ ಬುನಾದಿಗಳನ್ನು ಖಾಸಗಿ ಬಂಡವಾಳದ ಗರಿಷ್ಟ ಲಾಭಕ್ಕಾಗಿ ನಾಶ ಮಾಡಲಾಗುತ್ತಿದೆ.

ಇದರ ಘೋರ ಪರಿಣಾಮವೆಂದರೆ, ಉನ್ನತ ಹಂತಗಳಲ್ಲಿ ಭ್ರಷ್ಟಾಚಾರದ ಮಟ್ಟಗಳ ಏರಿಕೆ, ಚುನಾವಣಾ ಬಾಂಡುಗಳ ಮೂಲಕ ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸುವುದು ಮತ್ತು ವಿದೇಶಿ ಸಂಸ್ಥೆಗಳಿಂದ ವಂತಿಗೆ ಪಡೆಯಲು ರಾಜಕೀಯ ಪಕ್ಷಗಳಿಗೆ ಅನುಮತಿ ನೀಡುವುದು.

ಆರ್ಥಿಕ ಅಸಮಾನತೆಗಳು ಅಸಹ್ಯಕರ ಆಘಾತಕಾರಿ ಮಟ್ಟವನ್ನು ತಲುಪಿರುವುದೇ ಇವೆಲ್ಲವುಗಳ ಒಟ್ಟಾರೆ ಫಲಿತಾಂಶವಾಗಿದೆ. ಬಡವರನ್ನು ಇನ್ನಷ್ಟು ಬಡತನಕ್ಕೆ ಸಂಕಟಕ್ಕೆ ತಳ್ಳುತ್ತಾ, ಶ್ರೀಮಂತರನ್ನು ಹೇಸಿಗೆಯೆನಿಸುವಂತಹ ಶ್ರೀಮಂತಿಕೆಗೆ ಏರಿಸಲಾಗುತ್ತಿದೆ.

ಒಕ್ಕೂಟತತ್ವ: ಕಳೆದ ಎರಡು ವರ್ಷಗಳಲ್ಲಿ ರಾಜ್ಯಗಳ ಹಕ್ಕುಗಳ ಮೇಲಿನ ದಾಳಿಗಳು ಹೆಚ್ಚಾಗುತ್ತಿವೆ. ಕೊರೋನಾ ಮಹಾರೋಗದ ಈ ಇಡೀ ಅವಧಿಯಲ್ಲಿ ಒಕ್ಕೂಟವಾದದ ಮೇಲಿನ ದಾಳಿ ವ್ಯಾಪಕವಾಗಿದೆ. ಜಿ.ಎಸ್.ಟಿ. ಜಾರಿಯ ವಿಷಯದಲ್ಲಿ ರಾಜ್ಯಗಳ ಯಾವುದೇ ಸಲಹೆಗಳನ್ನು ಆಲಿಸಲು ನಿರಾಕರಿಸುತ್ತಿರುವ, ರಾಜ್ಯಗಳಿಗೆ ನೀಡಬೇಕಾದ ಪಾಲನ್ನು ನಿರಾಕರಿಸುತ್ತಿರುವ ಮತ್ತು ಜೀವರಕ್ಷಕ ಔಷಧಿಗಳು ಹಾಗೂ ಉಪಕರಣಗಳ ಮೇಲೆ ವಿಪರೀತ ತೆರಿಗೆಯನ್ನು ವಿಧಿಸುತ್ತಿರುವ ರೀತಿಯು ಇವೆಲ್ಲವೂ ರಾಜ್ಯ ಸರ್ಕಾರಗಳ ಸಾಂವಿಧಾನಿಕ ಹಕ್ಕುಗಳ ಮೇಲೆ ಸವಾರಿ ಮಾಡುವ ಸನ್ನಿವೇಶದತ್ತ ಸಾಗುತ್ತಿವೆ.

ಸಾಮಾಜಿಕ ನ್ಯಾಯ: ಅಲ್ಪಸಂಖ್ಯಾತರು, ದಲಿತರು, ಆದಿವಾಸಿಗಳು ಮತ್ತು ಮಹಿಳೆಯರನ್ನು ಗುರಿಯಾಗಿಸಿದ ವಿಷಪೂರಿತ ದ್ವೇಷ ಪ್ರಚಾರ ಮತ್ತು ಹಿಂಸೆಯ ವಾತಾವರಣವು ಕಳೆದ ಎರಡು ವರ್ಷಗಳಲ್ಲಿ ಅಸಾಧಾರಣವಾಗಿ ಹೆಚ್ಚುತ್ತಿದೆ. ಸಾಮೂಹಿಕ ಅತ್ಯಾಚಾರಗಳು ಮತ್ತು ಹದಿಹರೆಯದ ದಲಿತ ಹೆಣ್ಣುಮಕ್ಕಳ ಕೊಲೆಗಳು, ಆದಿವಾಸಿಗಳನ್ನು ಅವರ ಅರಣ್ಯ ಜಮೀನುಗಳಿಂದ ಒಕ್ಕಲೆಬ್ಬಿಸುವ ಮೂಲಕ ಅರಣ್ಯ ಹಕ್ಕುಗಳ ಕಾಯಿದೆಯ ಬಹುತೇಕ ರದ್ದತಿ, ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ದಿಗಿಲು ಹುಟ್ಟಿಸುವ ಹಲ್ಲೆಗಳು ಹಾಗೂ ಬಡವರ ಮೇಲಿನ ನಿಷ್ಕರುಣೆಯ ದಾಳಿಗಳು ಇವೆಲ್ಲವೂ ಸಂವಿಧಾನವು ನೀಡಿದ ನಮ್ಮ ಜನರ ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸುವ ಮೂಲ ತತ್ವವನ್ನೇ ಹಾಳುಗೆಡವಿವೆ.

"ನವ ಭಾರತ"ದ ಕಥನ


ಮೋದಿ 2.0 ಸರ್ಕಾರವು ಕಳೆದ ಎರಡು ವರ್ಷಗಳಲ್ಲಿ ಸಾಗುತ್ತಿರುವುದು ಜಾತ್ಯತೀತ ಪ್ರಜಾಸತ್ತಾತ್ಮಕ ಸಾಂವಿಧಾನಿಕ ಗಣತಂತ್ರವನ್ನು ನಾಶ ಮಾಡುವ ಮತ್ತು ಅದರ ಸ್ಥಾನದಲ್ಲಿ ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ನಮೂನೆಯ ಹಿಂದುತ್ವ ರಾಷ್ಟ್ರವನ್ನು ಸ್ಥಾಪಿಸುವ ಗುರಿಸಾಧನೆಯ ದಿಕ್ಕಿನಲ್ಲಿ.

ಇದಕ್ಕಾಗಿ ಎಲ್ಲಾ ಸಾಂವಿಧಾನಿಕ ಪ್ರಾಧಿಕಾರ ಮತ್ತು ಸಂಸ್ಥೆಗಳು ಹಾಕಿರುವ ಪರಿಮಿತಿಗಳನ್ನು ತೊಡೆದುಹಾಕಬೇಕಾಗುತ್ತದೆ.

ಸಂಸತ್ತು: ಸಂಸತ್ತನ್ನು ಶಿಥಿಲಗೊಳಿಸುವುದರೊಂದಿಗೆ ಮತ್ತು ಯಾವುದೇ ಅರ್ಥಪೂರ್ಣ ಚರ್ಚೆ ಅಥವಾ ಸಮಿತಿಗಳ ಕಾರ್ಯನಿರ್ವಹಣೆ ನಡೆಯದಂತೆ ಮಾಡುವ ಮೂಲಕ ಇದು ಪ್ರಾರಂಭವಾಗುತ್ತದೆ. ಸಂಸತ್ತನ್ನು ಒಂದು ಬಹುಮತದ ದಬ್ಬಾಳಿಕೆಯ ಮಟ್ಟಕ್ಕೆ ಇಳಿಸಲಾಗಿದೆ.

ಇದು ಅಪಾಯಕಾರಿ. ಭಾರತೀಯ ಸಂವಿಧಾನವನ್ನು ಕೇಂದ್ರವಾಗಿಟ್ಟುಕೊಂಡು, ಶಾಸಕರು ಜನರಿಗೆ ಜವಾಬುದಾರರರು ಮತ್ತು ಸರ್ಕಾರ ಶಾಸಕಾಂಗಕ್ಕೆ ಜವಾಬುದಾರ ಎಂಬುದರ ಮೂಲಕ ಜನತೆಯ ಸಾರ್ವಭೌಮತೆಯ ಚಲಾವಣೆಯಾಗಬೇಕು. ಇದು "ನಾವು ಜನತೆ" ನಮ್ಮ ಸಾರ್ವಭೌಮತೆಯನ್ನು ಚಲಾಯಿಸುವ ರೀತಿ. ಸಂಸತ್ತು ಸರಿಯಾಗಿ ಕಾರ್ಯನಿರ್ವಹಿಸದಿದ್ದಾಗ ಜನತೆಯ ಈ ಸಾರ್ವಭೌಮತೆ ಶಿಥಿಲಗೊಳ್ಳುತ್ತದೆ.

ಇದರ ಜತೆಯಲ್ಲೇ ನ್ಯಾಯಾಂಗದ ಸ್ವಾತಂತ್ರ್ಯವನ್ನು(ಪರಿಚ್ಛೇದ 370 ರದ್ದತಿಯನ್ನು, ಸಿಎಎಯನ್ನು ಪ್ರಶ್ನಿಸಿರುವ ಅರ್ಜಿಗಳು ವಿಚಾರಣೆಗೇ ಬರದೇ ಹಾಗೆಯೇ ಉಳಿದಿವೆ); ಚುನಾವಣಾ ಆಯೋಗದ ನಿಷ್ಪಕ್ಷಪಾತತೆ ಮತ್ತು ಸಿಬಿಐ, ಸಿಎಜಿ, ಜಾರಿ ನಿರ್ದೇಶನಾಲಯ ಇತ್ಯಾದಿ ಮತ್ತಿತರ ಸಾಂವಿಧಾನಿಕ ಸಂಸ್ಥೆಗಳನ್ನು ಮಿತಿಮೀರಿ ದುರ್ಬಳಕೆ ಮಾಡಿ ವ್ಯವಸ್ಥಿತವಾಗಿ ಹಾಳುಗೆಡವಲಾಗುತ್ತಿದೆ. ಅವುಗಳಲ್ಲಿ ಕೆಲವನ್ನು ಬಹಿರಂಗವಾಗಿ ಕೇಂದ್ರ ಸರ್ಕಾರದ ಹಾಗೂ ಗೃಹ ಸಚಿವಾಲಯದ ರಾಜಕೀಯ ಅಂಗವಾಗಿ ಬಳಸಲಾಗುತ್ತಿದೆ.



ರಾಜ್ಯಗಳು ತಾವೇ ಲಸಿಕೆ ಖರೀದಿಸಬಹುದು. ಆದರೆ ಫೋಟೋ ಮಾತ್ರ ಇವರದ್ದೇ ಇರಬೇಕು!
ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಮಾಧ್ಯಮ: ಆರ್.ಎಸ್.ಎಸ್. ತನ್ನ ಕಾರ್ಯಸೂಚಿಯನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾಗಬೇಕಾದರೆ, ಸರ್ಕಾರದ ಕಥನಗಳನ್ನು "ವಸ್ತುನಿಷ್ಟ ಸುದ್ದಿಗಳು" ಎಂದು ಬಿಂಬಿಸುತ್ತಾ ಸರ್ಕಾರಿ–ಪರ ಸುಳ್ಳುಗಳಿಗೆ ಒತ್ತಾಸೆ ಕೊಡುವ ಹಾಗೂ ಧೃವೀಕರಣವನ್ನು ತೀಕ್ಷ್ಣಗೊಳಿಸುವ ಸರ್ಕಾರದ ಪ್ರಚಾರಗಳನ್ನು ಸಕ್ರಿಯವಾಗಿ ಮುಂದೊತ್ತುವ ಒಂದು ಬಹುಮಟ್ಟಿಗೆ ಗುಲಾಮನಾಗಿರುವ ಮಾಧ್ಯಮದ ಅಗತ್ಯವಿರುತ್ತದೆ

ಕಳೆದ ಎರಡು ವರ್ಷಗಳಲ್ಲಿ ಕಾರ್ಪೊರೇಟ್ ಮಾಧ್ಯಮಗಳು ಸರ್ಕಾರದ 'ತುತ್ತೂರಿ ಊದುವ' ದೀನಾವಸ್ಥೆಯನ್ನು ತಲುಪಿರುವುದನ್ನು ಸ್ವತಂತ್ರ ಭಾರತ ಹಿಂದೆಂದೂ ಕಂಡಿಲ್ಲ.

ವಿವೇಚನೆಯ ಮೇಲೆ ದಾಳಿ: ಆರ್.ಎಸ್.ಎಸ್.ನ ಯೋಜನೆ ಸಫಲವಾಗಬೇಕಾದರೆ ವಿವೇಚನೆ, ವೈಚಾರಿಕತೆ ಹಾಗೂ ವೈಜ್ಞಾನಿಕ ಮನೋಭಾವಗಳು ಸಾರ್ವಜನಿಕ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರಲು ಖಂಡಿತವಾಗಿಯೂ ಸಾಧ್ಯವಾಗಬಾರದು. ವೈಜ್ಞಾನಿಕ ಮನೋಭಾವವನ್ನು ನಾಶ ಮಾಡಿ, ಅದರ ಸ್ಥಾನದಲ್ಲಿ ಗೊಡ್ಡು ಸಂಪ್ರದಾಯಶರಣತೆ, ಮೂಢನಂಬಿಕೆಗಳು ಪ್ರಾಬಲ್ಯ ಸಾಧಿಸಿ ಹಿಂದುತ್ವ ರಾಷ್ಟ್ರದ ಉದ್ದೇಶವನ್ನು ಈಡೇರಿಸಿಕೊಳ್ಳುವ ಯತ್ನ ನಡೆಯುತ್ತಿದೆ. ವಿವೇಚನೆ ಹಾಗೂ ವೈಚಾರಿಕತೆಯ ಕೇಂದ್ರಗಳಾದ ವಿಶ್ವವಿದ್ಯಾಲಯಗಳ ಮೇಲೆ ದಾಳಿನಡೆದು ಅವೈಚಾರಿಕತೆ ಮೇಲುಗೈ ಪಡೆಯಲು ಅನುವು ಮಾಡಿಕೊಟ್ಟು ಇತಿಹಾಸ ಮರುರಚನೆಯ ಆರ್.ಎಸ್.ಎಸ್.ನ ಯೋಜನೆಗೆ ಸಹಾಯ ಮಾಡುವ ಯತ್ನ ನಡೆದಿದೆ; ಭಾರತದ ಸಮ್ಮಿಶ್ರ ಚರಿತ್ರೆಯ ಅಧ್ಯಯನದ ಸ್ಥಾನದಲ್ಲಿ ಹಿಂದೂ ಪುರಾಣವನ್ನು ಹಾಗೂ ಭಾರತೀಯ ದರ್ಶನಗಳ ಶ್ರೀಮಂತ ವೈವಿಧ್ಯತೆಯ ಸ್ಥಾನದಲ್ಲಿ ಹಿಂದೂ ದೈವವಾದವನ್ನು ಸ್ಥಾಪಿಸುವ ಪ್ರಯತ್ನಗಳು ನಡೆಯುತ್ತಿವೆ. ಈ ಕೊರೋನಾ ಮಹಾರೋಗದ ಸಂದರ್ಭದಲ್ಲಿ ಹೊಸ ಶಿಕ್ಷಣ ನೀತಿಯನ್ನು ಪ್ರಜಾಪ್ರಭುತ್ವ–ವಿರೋಧಿ ರೀತಿಯಲ್ಲಿ ಜಾರಿ ಮಾಡುತ್ತಿರುವುದರ ನಿಜವಾದ ಉದ್ದೇಶವೇ ಇದೇ ಆಗಿದೆ.

ಸಂಕೇತಗಳು: ಅಂತಿಮವಾಗಿ, "ನವ ಭಾರತ"ದ ಕಥನವು ಸ್ವತಂತ್ರ ಭಾರತದ ಸಂಕೇತಗಳ ಸ್ಥಾನದಲ್ಲಿ ತನ್ನದೇ ಆದ ಸಂಕೇತಗಳನ್ನು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಸಾಕಾರಗೊಳ್ಳದಿದ್ದಾಗ್ಯೂ ಬುಲೆಟ್ ರೈಲು, ಬೃಹದಾಕಾರದ ಪ್ರತಿಮೆಗಳು, ನವದೆಹಲಿಯ ಸೆಂಟ್ರಲ್ ವಿಸ್ಟಾ ಎಂಬ ಮರುಅಭಿವೃದ್ಧಿಯ ನಿರ್ಮಾಣದಂತಹ ಭ್ರಾಂತಿಕಾರಕ ಯೋಜನೆಗಳೆಲ್ಲವೂ ಕೂಡ ತನ್ನ ಫ್ಯಾಸಿಸ್ಟ್ ಆಳ್ವಿಕೆಯನ್ನು ಉಜ್ವಲಗೊಳಿಸಬೇಕಾಗಿದ್ದ ಬರ್ಲಿನ್ನಿನ ಹಿಟ್ಲರನ ಗೊಮ್ಮಟವನ್ನು ನೆನಪಿಸುತ್ತವೆ. ಅದು ಎರಡನೇ ವಿಶ್ವ ಯುದ್ಧದಿಂದಾಗಿ ಸಾಕಾರಗೊಳ್ಳಲಿಲ್ಲ ಎಂಬುದು ಸಮಾಧಾನದ ಸಂಗತಿ!

ಭೀತಿಗ್ರಸ್ತ ಎರಡು ವರ್ಷಗಳು

ಕಳೆದ ಎರಡು ವರ್ಷಗಳು ಭಾರತದ ಜನರಿಗೆ ಹಾಗೂ ನಮ್ಮ ಸಾಂವಿಧಾನಿಕ ಗಣತಂತ್ರಕ್ಕೆ ನಿಜವಾಗಿಯೂ ಭೀತಿಗ್ರಸ್ತವಾಗಿದ್ದವು. ಭಾರತದ ಜನರನ್ನು, ಅವರ ಜೀವಗಳನ್ನು ಮತ್ತು ಅವರ ಬದುಕಿನ ಗುಣಮಟ್ಟವನ್ನು ಉಳಿಸುವ, ಭಾರತದ ಸಾಂವಿಧಾನಿಕ ಗಣತಂತ್ರವನ್ನು ಬಲಪಡಿಸುವ ಹಾಗೂ ರಕ್ಷಿಸುವ ಮತ್ತು ನಮ್ಮ ಜನರ ಅವಿಭಾಜ್ಯ ಪ್ರಜಾಪ್ರಭುತ್ವ ಹಕ್ಕುಗಳು, ಸಮಾನತೆ ಹಾಗೂ ನಾಗರಿಕ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಸಲುವಾಗಿ ಭಾರತೀಯ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಮೌಲ್ಯಗಳನ್ನು ಹಾಗೂ ಹಕ್ಕುಗಳನ್ನು ಪ್ರೀತಿಸುವ ಹಾಗೂ ಗೌರವಿಸುವ ಎಲ್ಲರೂ ಭಾರತೀಯ ಗಣತಂತ್ರದ ಹಾಗೂ ನಮ್ಮ ಜನರ ಮೇಲಿನ ಪ್ರಹಾರವನ್ನು ಪ್ರತಿರೋಧಿಸಲು ಹಾಗೂ ಸೋಲಿಸಲು ಒಂದುಗೂಡಬೇಕಿರುವುದು ನಮ್ಮ ಈಗಿನ ಕರ್ತವ್ಯವಾಗಿದೆ.

ಹೊಸ ಸನ್ನಿವೇಶದಲ್ಲಿ ಮುಂದುವರಿದ ಕಾರ್ಮಿಕ ವರ್ಗದ ಹೋರಾಟಗಳು: 1980-84



ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಆಡಳಿತದ ವಿರುದ್ಧ ಜನರು ಅಧಿಕಾರಕ್ಕೆ ಆಯ್ಕೆ ಮಾಡಿದ ಜನತಾ ಪಕ್ಷದ ಸರಕಾರ ಆರಂಭದಲ್ಲಿ ಆ ಸರ್ವಾಧಿಕಾರಿ ರಚನೆಯನ್ನು ಮುರಿಯಲು ಕೆಲವು ಪ್ರಯತ್ನಗಳು ನಡೆಸಿತಾದರೂ, ಆ ಕಾರ್ಯಭಾರವು ಪೂರ್ಣಗೊಳ್ಳಲಿಲ್ಲ. ಮೊರಾರ್ಜಿ ದೇಶಾಯಿ ಮತ್ತು ನಂತರ ಚರಣ್ ಸಿಂಗ್ ಸರಕಾರದ ಕಾರ್ಮಿಕ-ವಿರೋಧಿ ನೀತಿಗಳು ಮತ್ತು ಆಂತರಿಕ ಗುದ್ದಾಟಗಳಿಂದಾಗಿ ಇಂದಿರಾ ಗಾಂಧಿ ಮತ್ತು ಅವರ ಪಕ್ಷ ಅಧಿಕಾರಕ್ಕೆ ಮರಳಿದ್ದು ಅವರ ಹಿಂದಿನ ಆಡಳಿತದ ಕಾರ್ಮಿಕ ವಿರೋಧಿ ನೀತಿಗಳ ಮುಂದುವರಿಕೆಗೆ ಅನುವು ಮಾಡಿ ಕೊಟ್ಟಿತು. ಆದರೆ ಇದು ಕಾರ್ಮಿಕ ಹೋರಾಟಗಳ ಮತ್ತು ಐಕ್ಯತೆಯ ಪ್ರಯತ್ನಗಳ ಹೊಸ ಹಂತವನ್ನೂ ಆರಂಭಿಸಿತು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ

ಜನತಾ ಪಕ್ಷ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳು, ಮೊರಾರ್ಜಿ ದೇಸಾಯಿ ಅವರು ಪ್ರಧಾನ ಮಂತ್ರಿಯಾಗಿದ್ದ ಅವಧಿಯಲ್ಲಿ ಕುಖ್ಯಾತ ಭೂತಲಿಂಗಂ ಸಮಿತಿಯ ಪ್ರತಿಗಾಮಿ ಶಿಫಾರಸುಗಳು ಮತ್ತು ಕುಖ್ಯಾತ ಕೈಗಾರಿಕಾ ಸಂಬಂಧದ ಮಸೂದೆಯ ಹೊರತಾಗಿ, ಚರಣ್ ಸಿಂಗ್ ಅವರು ಸಣ್ಣ ಅವಧಿಗೆ ಪ್ರಧಾನಮಂತ್ರಿಯಾಗಿದ್ದಾಗ ಕಾರ್ಮಿಕ ವರ್ಗದ ವಿರುದ್ಧ ರೈತರನ್ನು ಎತ್ತಿಕಟ್ಟಲು ಅವರು ನಡೆಸಿದ ಒರಟಾದ ದೂಷಣೆ ಈ ಸರ್ಕಾರಗಳ ಅಂತರ್ಗತ ಕಾರ್ಮಿಕ ವಿರೋಧಿ ಪಕ್ಷಪಾತವನ್ನು ಸಾಬೀತುಪಡಿಸಿದವು.

ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಆಡಳಿತದ ವಿರುದ್ಧ ಅವರನ್ನು ಅಧಿಕಾರಕ್ಕೆ ಆಯ್ಕೆ ಮಾಡಲಾಗಿತ್ತು. ಆರಂಭದಲ್ಲಿ ಈ ಸರ್ವಾಧಿಕಾರಿ ರಚನೆಯನ್ನು ಮುರಿಯಲು ಕೆಲವು ಪ್ರಯತ್ನಗಳು ನಡೆದವು, ಆದರೆ ಆ ಕಾರ್ಯಭಾರವು ಪೂರ್ಣಗೊಳ್ಳಲಿಲ್ಲ. ಮತ್ತೊಂದೆಡೆ, ಮೂಲ ಜನತಾ ಪಕ್ಷದ ಜನಸಂಘ ಘಟಕದಿಂದ ಆಡಳಿತದ ಕೋಮುವಾದೀಕರಣ ಮತ್ತು ಪ್ರಧಾನ ಮಂತ್ರಿಗಳ ಅಡಿಯಲ್ಲಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳು ಮತ್ತು ಅವರ ಕರುಣಾಜನಕ ಆಂತರಿಕ ಗುದ್ದಾಟಗಳು ಜನಸಾಮಾನ್ಯರನ್ನು ಸಂಪೂರ್ಣವಾಗಿ ಭ್ರಮನಿರಸನಗೊಳಿಸಿದವು.

ರಾಷ್ಟ್ರಮಟ್ಟದಲ್ಲಿ ಯಾವುದೇ ಎಡ ಮತ್ತು ಪ್ರಜಾಪ್ರಭುತ್ವದ ಪರ್ಯಾಯಗಳ ಅನುಪಸ್ಥಿತಿಯಲ್ಲಿ ಜನರ ಈ ಅಸಮಾಧಾನ ಮತ್ತು ಹತಾಶೆಯ ಲಾಭವನ್ನು ಇಂದಿರಾ ಗಾಂಧಿ ಪಡೆದರು. ಅವರು ಮತ್ತು ಅವರ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ಆಯ್ಕೆ ಮಾಡಲಾಯಿತು.

ಕಾರ್ಮಿಕ ವರ್ಗದ ಹೋರಾಟಗಳ ಹೊಸ ಹಂತ –ವ್ಯಾಪಕ ಏಕತೆಗಾಗಿ ಪ್ರಯತ್ನಗಳು

ಇಂದಿರಾ ಗಾಂಧಿ ಮತ್ತು ಅವರ ಪಕ್ಷ ಅಧಿಕಾರಕ್ಕೆ ಮರಳಿದ್ದು ಅವರ ಹಿಂದಿನ ಆಡಳಿತದ ಕಾರ್ಮಿಕ ವಿರೋಧಿ ನೀತಿಗಳ ಮುಂದುವರಿಕೆಗೆ ಸಾಕ್ಷಿಯಾಯಿತು.

ಬೆಂಗಳೂರು, ಹೈದರಾಬಾದ್ ಮತ್ತು ದೇಶದ ಇತರ ಕೇಂದ್ರಗಳಲ್ಲಿ ನೆಲೆಗೊಂಡಿರುವ ಎಚ್.ಎ.ಎಲ್., ಬಿ.ಎಚ್.ಇ.ಎಲ್., ಬಿ.ಇ.ಎಂ.ಎಲ್., ಐ.ಟಿ.ಐ., ಎಚ್.ಎಂ.ಟಿ. ಮುಂತಾದ ಸಂಸ್ಥೆಗಳಲ್ಲಿ ಸುಮಾರು 1,25,000 ಉದ್ಯೋಗಿಗಳು ಸಾರ್ವಜನಿಕ ವಲಯದ ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ ಹೋರಾಟ, 1980 ರ ಡಿಸೆಂಬರ್ 26 ರಂದು ಪ್ರಾರಂಭವಾಗಿ ಎರಡು ತಿಂಗಳಿಗಿಂತ ಹೆಚ್ಚು ಕಾಲ ಮುಂದುವರೆಯಿತು. ಈ ಹಿಂದೆ ಮಾಡಿದ್ದ ವೇತನ–ಒಪ್ಪಂದಗಳಿಂದ ಆಡಳಿತ ವರ್ಗ ಹಿಂದೆ ಸರಿಯುವುದರ ವಿರುದ್ಧ ಮುಷ್ಕರವನ್ನು ಆಯೋಜಿಸಲಾಯಿತು.

ಕಡಿವಾಣವಿಲ್ಲದ ಬೆಲೆ ಏರಿಕೆ, ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆ ಮತ್ತು ಎಡರಂಗದ ಸರ್ಕಾರದ ಬಗ್ಗೆ ಕೇಂದ್ರ ಸರ್ಕಾರದ ತಾರತಮ್ಯ ವರ್ತನೆಯ ವಿರುದ್ಧ ನವೆಂಬರ್ 27, 1980 ರಂದು ಪಶ್ಚಿಮ ಬಂಗಾಳದಲ್ಲಿ 'ಬಂದ್' ನಡೆಯಿತು. ಅಂತೆಯೇ, ಬಿಹಾರದಲ್ಲಿ, ಅದೇ ದಿನ 27 ನವೆಂಬರ್ 1980 ರಂದು ರಾಜ್ಯವ್ಯಾಪಿ 'ಬಂದ್' ಆಯೋಜಿಸಲಾಯಿತು. ಮಹಾರಾಷ್ಟ್ರದಲ್ಲಿ 1980 ರ ಅಕ್ಟೋಬರ್ 15 ರಂದು 'ಮಹಾರಾಷ್ಟ್ರ ಬಂದ್' ಆಚರಿಸಲಾಯಿತು.

ಮೇ 27, 1980 ರಂದು ಪಶ್ಚಿಮ ಬಂಗಾಳ ಸರ್ಕಾರವು ರಾಜ್ಯ ಸರ್ಕಾರೀ ನೌಕರರಿಗೆ ಮುಷ್ಕರ ಹಕ್ಕು ಸೇರಿದಂತೆ ಸಂಪೂರ್ಣ ಟ್ರೇಡ್ ಯೂನಿಯನ್ ಹಕ್ಕುಗಳನ್ನು ನೀಡುವ 'ಪಶ್ಚಿಮ ಬಂಗಾಳ ಸೇವೆಗಳು (ಸರ್ಕಾರಿ ನೌಕರರ ಕರ್ತವ್ಯಗಳು, ಹಕ್ಕುಗಳು ಮತ್ತು ಕಟ್ಟುಪಾಡುಗಳು) ನಿಯಮಗಳು 1980' ಎಂಬ ಹೊಸ ನಿಯಮವನ್ನು ಹೊರಡಿಸಿತು.. ನಂತರ, ಜೂನ್ 11, 1980 ರ ಮತ್ತೊಂದು ಆದೇಶದ ಮೂಲಕ ಪಶ್ಚಿಮ ಬಂಗಾಳ ಸರ್ಕಾರವು ಉದ್ಯೋಗಿಗಳ ಗೌಪ್ಯ ವಾರ್ಷಿಕ ವರದಿ ವ್ಯವಸ್ಥೆಯನ್ನು ಮುಕ್ತ ಕಾರ್ಯಕ್ಷಮತೆಯ ವರದಿಯಾಗಿ ಬದಲಾಯಿಸಿತು. ಇದು ದೇಶದ ಸರ್ಕಾರಿ ನೌಕರರ ಆಂದೋಲನಕ್ಕೆ ಹೊಸ ದೃಷ್ಟಿಕೋನವನ್ನು ನೀಡಿತು.

ರಾಷ್ಟ್ರೀಯ ಟ್ರೇಡ್ ಯೂನಿಯನ್ ಸಮಾವೇಶ –ಐಕ್ಯ ಚಟುವಟಿಕೆಗಳಿಗೆ ಹೊಸ ಆಯಾಮ

ಜೂನ್ 4, 1981 ರಂದು ಮುಂಬೈಯಲ್ಲಿ ನಡೆದ ದುಡಿಯುವ ಜನರ ರಾಷ್ಟ್ರೀಯ ಸಮಾವೇಶ ಎಂಬ ಐಕ್ಯ ಟ್ರೇಡ್ ಯೂನಿಯನ್ ಸಮಾವೇಶ ವಿಶಾಲ ವ್ಯಾಪ್ತಿಯನ್ನು ಹೊಂದಿದ್ದು, ಕಾರ್ಮಿಕ ಸಂಘಗಳ ಪರವಾಗಿ ಒಟ್ಟು 3000 ಪ್ರತಿನಿಧಿಗಳು ಭಾಗವಹಿಸಿದರು.

ಸಮಾವೇಶದ ನಿರ್ಣಯವು 15 ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನ ಪ್ರಕಾರ ಅಗತ್ಯ ಆಧಾರಿತ ಕನಿಷ್ಠ ವೇತನಕ್ಕಾಗಿ; ಜೀವನ ವೆಚ್ಚದ ಏರಿಕೆಯ ಸಂಪೂರ್ಣ ತಟಸ್ಥೀಕರಣ; ಕೃಷಿ ಕಾರ್ಮಿಕರ ವೇತನ ಮತ್ತು ಉದ್ಯೋಗ ಭದ್ರತೆಗಾಗಿ ಶಾಸನವನ್ನು ಜಾರಿಗೊಳಿಸುವುದು; ರಿಟ್ರೆಂಚ್‌ಮೆಂಟ್ ಮತ್ತು ಕ್ಲೋಜರ್ ನಿಷೇಧ; ನಿರುದ್ಯೋಗ ಭತ್ಯೆ; ರಹಸ್ಯ ಮತದಾನದ ಮೂಲಕ ಕಾರ್ಮಿಕ ಸಂಘಗಳನ್ನು ಗುರುತಿಸುವುದು ಮತ್ತು ಇತರ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ಕಾರ್ಮಿಕ ವರ್ಗಕ್ಕೆ ಕರೆ ನೀಡಿತು.

ಮುಷ್ಕರಗಳನ್ನು ನಿಷೇಧಿಸುವ ಕಪ್ಪು ಸುಗ್ರೀವಾಜ್ಞೆ – ಪ್ರತಿರೋಧದ ಹೊಸ ಆಯಾಮ

ಕೇಂದ್ರ ಸರ್ಕಾರವು ಜುಲೈ 27, 1981 ರಂದು 'ಅಗತ್ಯ ಸೇವಾ ನಿರ್ವಹಣೆ ಸುಗ್ರೀವಾಜ್ಞೆ'(ಮುಂದೆ ಎಸ್ಮ) ಎಂಬ ಸುಗ್ರೀವಾಜ್ಞೆಯನ್ನು ಪ್ರಕಟಿಸಿತು ಮತ್ತು ಸರ್ಕಾರವು ಘೋಷಿಸಬಹುದಾದ ಯಾವುದೇ ಸೇವೆಯಲ್ಲಿ ಮುಷ್ಕರವನ್ನು ನಿಷೇಧಿಸಲು ವ್ಯಾಪಕ ಅಧಿಕಾರವನ್ನು ಪಡೆದುಕೊಂಡಿತು. ಅಗತ್ಯವೆಂದು ಘೋಷಿಸಿದ ಸೇವೆಗಳಲ್ಲಿ 'ಕಾನೂನುಬಾಹಿರ ಮುಷ್ಕರ'ಕ್ಕೆ ಸೇರುವವರ ಅಥವಾ ಅದಕ್ಕೆ ಸಹಾಯ ಮಾಡುವ ಅಥವಾ ಸಹಾಯ ನೀಡುವವರ ಸಾರಾಂಶ ವಿಚಾರಣೆಯನ್ನು ನಡೆಸಲು ಮತ್ತು ಆರು ತಿಂಗಳು ದಂಡ, ವಜಾ ಮತ್ತು ಜೈಲು ಶಿಕ್ಷೆ ಸೇರಿದಂತೆ ಕಠಿಣ ಶಿಕ್ಷೆಯನ್ನು ವಿಧಿಸಲು ಸರ್ಕಾರವು ಸ್ವತಃ ಸುಗ್ರೀವಾಜ್ಞೆಯಿಂದ ಅಧಿಕಾರ ಪಡೆದುಕೊಂಡಿತು..

ರಾಷ್ಟ್ರೀಯ ಪ್ರಚಾರ ಸಮಿತಿ, ಆಗಸ್ಟ್ 17, 1981 ರಂದು ದೇಶಾದ್ಯಂತ ಪ್ರತಿಭಟನಾ ದಿನವನ್ನು ಬೃಹತ್ ಪ್ರಮಾಣದಲ್ಲಿ ಆಚರಿಸಲು ಕಾರ್ಮಿಕ ವರ್ಗಕ್ಕೆ ಕರೆ ನೀಡಿತು, ಇದನ್ನು ರ‍್ಯಾಲಿಗಳು ಮತ್ತು ಪ್ರದರ್ಶನಗಳ ಮೂಲಕ ದೇಶದ ವಿವಿಧ ಭಾಗಗಳಲ್ಲಿ ಯಶಸ್ವಿಯಾಗಿ ಆಚರಿಸಲಾಯಿತು.

ಮುಂಬೈಯಲ್ಲಿ ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಇತರ ಒಕ್ಕೂಟಗಳು ಸುಮಾರು ಒಂದು ಲಕ್ಷ ಕಾರ್ಮಿಕರ ಬೃಹತ್ ರಾಲಿಯನ್ನು ಆಯೋಜಿಸಿದ್ದವು. ಕಲ್ಕತ್ತಾದಲ್ಲಿ ಪ್ರತಿಭಟನೆಯನ್ನು ದಾಖಲಿಸಲು ಇಡೀ ಸಂಚಾರ ಮೂರು ನಿಮಿಷಗಳ ಸ್ತಬ್ದವಾಗಿ ನಿಂತಿತ್ತು. ಎಲ್ಲಾ ಕಾರ್ಮಿಕರು, ಕಚೇರಿ ನೌಕರರು, ವಿದ್ಯಾರ್ಥಿಗಳು, ಯುವಜನರು ಮತ್ತು ಮಹಿಳಾ ಕಾರ್ಯಕರ್ತರು ಕಪ್ಪು ಬ್ಯಾಡ್ಜ್ ಧರಿಸಿ, ರ‍್ಯಾಲಿಗಳು ಮತ್ತು ಪ್ರದರ್ಶನಗಳನ್ನು ನಡೆಸಿದರು. ಶ್ರೀನಗರದಲ್ಲಿ ದೊಡ್ಡ ರ‍್ಯಾಲಿ ನಡೆಸಲಾಯಿತು. ದೆಹಲಿ ಮತ್ತು ಪಕ್ಕದ ಪ್ರದೇಶಗಳ ಸಾವಿರಾರು ಕಾರ್ಮಿಕರು ಫಿರೋಜಶಾ ಕೋಟ್ಲಾದಿಂದ ಬೋಟ್ ಕ್ಲಬ್‌ಗೆ ಮೆರವಣಿಗೆ ನಡೆಸಿದರು, ಕೇರಳದಲ್ಲಿ 1981 ರ ಸೆಪ್ಟೆಂಬರ್ 3 ರಂದು ಸಾರ್ವತ್ರಿಕ ಮುಷ್ಕರ ನಡೆಯಿತು ಅಂತೆಯೇ, ಪಶ್ಚಿಮ ಬಂಗಾಳ ಮತ್ತು ತ್ರಿಪುರದಲ್ಲಿ ಕ್ರಮವಾಗಿ ಸೆಪ್ಟೆಂಬರ್ 11 ಮತ್ತು ಸೆಪ್ಟೆಂಬರ್ 14 ರಂದು ಯಶಸ್ವಿ ಸಾರ್ವತ್ರಿಕ ಮುಷ್ಕರ ಮತ್ತು ಬಂದ್ ಆಚರಿಸಲಾಯಿತು.

ನವೆಂಬರ್ 23 ರಂದು ದೆಹಲಿಯ ಬೋಟ್ ಕ್ಲಬ್ ಲಾನ್ಸ್‌ನಲ್ಲಿ ರ‍್ಯಾಲಿಯೊಂದಿಗೆ ಸಂಸತ್ತಿಗೆ ಬೃಹತ್ ಮಾರ್ಚ್ ಆಯೋಜಿಸಲಾಯಿತು,. ರ‍್ಯಾಲಿಯಲ್ಲಿ, ಜನವರಿ 19, 1982 ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ಕರೆನೀಡಲಾಯಿತು.

ಎಸ್ಮಾ ವಿರುದ್ಧ ಭಾರತದ ಕಾರ್ಮಿಕರ ಚಳುವಳಿ ವಿಶೇಷವಾಗಿ ದೇಶದ ಹೊರಗೂ ಹರಡಿತು. ಗ್ರೇಟ್ ಬ್ರಿಟನ್‌ನ ಭಾರತೀಯ ಕಾರ್ಮಿಕರ ಸಂಘವು 1981 ರ ನವೆಂಬರ್ 22 ರಂದು ಎಸ್ಮಾ ವಿರುದ್ಧ ಪ್ರತಿಭಟಿಸಲು ಭಾರತದ ಹೈಕಮಿಷನ್ ಎದುರು ಸುಮಾರು ಐನೂರು ಭಾರತೀಯರನ್ನು ಅಣಿನೆರೆಸಿ ಹೈಕಮಿಷನರ್‌ಗೆ ಜ್ಞಾಪಕ ಪತ್ರವನ್ನು ಸಲ್ಲಿಸಿತು..

ರಾಷ್ಟ್ರವ್ಯಾಪಿ ಮುಷ್ಕರವು ಅದ್ಭುತ ಯಶಸ್ಸನ್ನು ಕಂಡಿತು. ಆಡಳಿತ ಪಕ್ಷದ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಇತರ ರಾಜ್ಯ ಸರ್ಕಾರಗಳು ಮುಷ್ಕರವನ್ನು ಎದುರಿಸಲು ಅಪಾರ ಸಂಖ್ಯೆಯ ಅರೆಮಿಲಿಟರಿ ಪಡೆಗಳನ್ನು ಮತ್ತು ಪೊಲೀಸರನ್ನು ಸಜ್ಜುಗೊಳಿಸಿದವು. ಮುಷ್ಕರನಿರತರು ಮತ್ತು ಮುಷ್ಕರವನ್ನು ಮುರಿಯಲು ಬಯಸುವವರ ನಡುವೆ ಕೆಲವು ಘರ್ಷಣೆಗಳು ನಡೆದವು ಮತ್ತು ಪೊಲೀಸರು ಗುಂಡು ಹಾರಿಸಿದಾಗ ಕೃಷಿ ಕಾರ್ಮಿಕರು ಸೇರಿದಂತೆ ಕನಿಷ್ಠ ಹತ್ತು ಜನರು ಕೊಲ್ಲಲ್ಪಟ್ಟರು.

ಕರ್ನಾಟಕದ ಬೆಂಗಳೂರು. ಬೆಳಗಾವಿ. ಮೈಸೂರಿನಂತಹ ಹಲವಾರು ಸ್ಥಳಗಳಲ್ಲಿ ಪೊಲೀಸರು ಲಾಠಿ ಚಾರ್ಜ್ ಮಾಡಿದರು.

ವಾಸ್ತವವಾಗಿ, ಜನವರಿ 19, 1982 ಅಖಿಲ ಭಾರತ ಮುಷ್ಕರವು ಭಾರತದಲ್ಲಿನ ಕಾರ್ಮಿಕ–ವರ್ಗದ ಹೋರಾಟಗಳ ಒಂದು ಹೆಗ್ಗುರುತಾಗಿದೆ.

ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಚಳುವಳಿ ಮತ್ತು ಡಬ್ಲ್ಯೂ.ಎಫ್.ಟಿ.ಯು. ಅಧಿವೇಶನ

ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಸಹ, ವಿಶ್ವ ಬಂಡವಾಳಶಾಹಿ ಆರ್ಥಿಕತೆಯ ಬಿಕ್ಕಟ್ಟಿನ ಮತ್ತು ಹೆಚ್ಚುತ್ತಿದ್ದ ನಿರುದ್ಯೋಗ ದರ ಪರಿಣಾಮವಾಗಿ ಪರಿಸ್ಥಿತಿ ಹದಗೆಟ್ಟಿತು. 1982 ರ ಫೆಬ್ರವರಿ 10 ರಿಂದ ಫೆಬ್ರವರಿ 15 ರವರೆಗೆ ಹವಾನಾದಲ್ಲಿ ನಡೆದ ಡಬ್ಲ್ಯೂ.ಎಫ್.ಟಿ.ಯು. ಹತ್ತನೇ ಕಾಂಗ್ರೆಸ್ ಈ ಸಮಸ್ಯೆಗಳನ್ನು ಚರ್ಚಿಸಿತು ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಹೋರಾಟದ ಹಾದಿಯನ್ನು ರೂಪಿಸಿತು.

ವಿವಿಧ ಕೇಂದ್ರಗಳಲ್ಲಿನ ಹೋರಾಟಗಳು ಮುಂದುವರೆದವು

ಕೈಗಾರಿಕೆ ಮತ್ತು ರಾಜ್ಯ ಮಟ್ಟದ ಹೋರಾಟಗಳಲ್ಲಿ ಅತ್ಯಂತ ಗಮನಾರ್ಹವಾದುದು ಮುಂಬೈಯ ಎರಡೂವರೆ ಲಕ್ಷ ಜವಳಿ ಕಾರ್ಮಿಕರ ಸುದೀರ್ಘ ಮುಷ್ಕರ, ಇದು ಜನವರಿ 18, 1982 ರಂದು ಪ್ರಾರಂಭವಾಯಿತು ಮತ್ತು ಆರು ತಿಂಗಳಿಗಿಂತ ಹೆಚ್ಚು ಕಾಲ ಮುಂದುವರೆಯಿತು. ಈ ಮುಷ್ಕರವು ಪ್ರಾಯೋಗಿಕವಾಗಿ ಇಂಟಕ್‌ಗೆ ಸಂಯೋಜನೆ ಹೊಂದಿರುವ ರಾಷ್ಟ್ರೀಯ ಮಿಲ್ ಮಜ್ದೂರ್ ಸಂಘವು ಸಹಿ ಮಾಡಿದ, ಗಿರಣಿ ಮಾಲೀಕರು ಭಾರಿ ಹಣವನ್ನು ಗಳಿಸುತ್ತಿದ್ದಾಗ, ಕಾರ್ಮಿಕರಿಗೆ ಪುಡಿಗಾಸಿನ ಲಾಭ ಒದಗಿಸುವಂತ ಒಪ್ಪಂದದ ವಿರುದ್ಧದ ದಂಗೆಯಾಗಿತ್ತು.

ಐಎನ್‌ಟಿಯುಸಿ–ಯೇತರ ಸಂಘಗಳು ಏಪ್ರಿಲ್ 19 ರಂದು ಯಶಸ್ವಿ ಮಹಾರಾಷ್ಟ್ರ ಬಂದ್ ಅನ್ನು ಆಯೋಜಿಸಿ ಮುಷ್ಕರನಿರತ ಕಾರ್ಮಿಕರಿಗೆ ಸೌಹಾರ್ದತೆಯನ್ನು ವ್ಯಕ್ತಪಡಿಸಿದವು. ಮತ್ತೆ ಜುಲೈ 8, 1982 ರಂದು ರಾಜ್ಯವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ಆಯೋಜಿಸಿದವು.

ಮುಷ್ಕರನಿರತ ಕಾರ್ಮಿಕರ ಪರಿಹಾರಕ್ಕಾಗಿ ಹಣವನ್ನು ಸಂಗ್ರಹಿಸಲಾಯಿತು ಮತ್ತು ಐಕ್ಯ ಆಂದೋಲನ ಮುಂದುವರೆಯಿತು. ಆದರೆ ಸರ್ಕಾರ ಮಣಿಯಲು ನಿರಾಕರಿಸಿತು. ಪರಿಣಾಮವಾಗಿ, ಪರಿಸ್ಥಿತಿ ಗಂಭೀರವಾಗಿ ಹದಗೆಟ್ಟಿತು. ಅನೇಕ ಕಾರ್ಮಿಕರು, ಕುಟುಂಬಗಳೊಂದಿಗೆ ಹಸಿವಿನಿಂದ, ಕೆಟ್ಟದಾಗಿ ಬಳಲುತ್ತಿದ್ದರು, ಅನೇಕರು ನಿರ್ಗತಿಕರ ಸ್ಥಿತಿಗೆ ದೂಡಲ್ಪಟ್ಟರು. ಗಿರಣಿಗಳು ಪುನಃ ತೆರೆದಾಗ, 50.000 ಕಾರ್ಮಿಕರನ್ನು ಹೊರಗಿಡಲಾಯಿತು..

ಜವಳಿ ಮತ್ತು ಸೆಣಬಿನ ಕೈಗಾರಿಕೆಗಳ ರಾಷ್ಟ್ರೀಕರಣದ ಬೇಡಿಕೆ

ಅಂತಹ ಪರಿಸ್ಥಿತಿಯಲ್ಲಿ ಜವಳಿ ಉದ್ಯಮದ ರಾಷ್ಟ್ರೀಕರಣದ ಬೇಡಿಕೆಯು ಜವಳಿ ಉದ್ಯಮ ಟ್ರೇಡ್ ಯೂನಿಯನ್ ಚಳವಳಿಯ ಕೇಂದ್ರ ಬೇಡಿಕೆಯಾಯಿತು.

ಸೆಣಬಿನ ಕೈಗಾರಿಕೆಯನ್ನು ಕೇಂದ್ರ ಸರ್ಕಾರ ರಾಷ್ಟ್ರೀಕರಣಗೊಳಿಸುವಂತೆ ಒತ್ತಾಯಿಸಿ 1982 ರ ಮಧ್ಯದಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಯು ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಿತು. ಈ ವಿಷಯವನ್ನು ಸಂಸತ್ತಿನಲ್ಲಿ ಹಲವಾರು ಬಾರಿ ಎತ್ತಲಾಯಿತು, ಆದರೆ ಕೇಂದ್ರ ಸರ್ಕಾರವು ಕೈಗಾರಿಕೆಯನ್ನು ರಾಷ್ಟ್ರೀಕರಣಗೊಳಿಸಲು ನಿರಾಕರಿಸಿತು.

1983 ರ ಮಧ್ಯದಲ್ಲಿ. ಕೇಂದ್ರ ಸರ್ಕಾರವು ಮುಂಬೈಯ 13 ಜವಳಿ ಗಿರಣಿಗಳನ್ನು ರಾಷ್ಟ್ರೀಕರಣಗೊಳಿಸುವ ಸುಗ್ರೀವಾಜ್ಞೆಯನ್ನು ಹೊರಡಿಸಿತು. ಆದರೆ ಸೆಣಬಿನ ಕೈಗಾರಿಕೆಗೆ ಸಂಬಂಧಿಸಿದಂತೆ, ರಾಷ್ಟ್ರೀಕರಣಕ್ಕಾಗಿ ಯಾವುದೇ ಹೆಜ್ಜೆ ಇಡಲು ಸರ್ಕಾರ ನಿರಾಕರಿಸಿತು, ಈ ಪರಿಸ್ಥಿತಿಯಲ್ಲಿಯೇ ಇಡೀ ಸೆಣಬಿನ ಕೈಗಾರಿಕೆಯ ಮೂರು ಲಕ್ಷ ಸೆಣಬಿನ ಕಾರ್ಮಿಕರು 1984 ರ ಜನವರಿ 16 ರಂದು ಅನಿರ್ದಿಷ್ಟ ಮುಷ್ಕರವನ್ನು ಪ್ರಾರಂಭಿಸಿದರು ಮತ್ತು ಸೆಣಬಿನ ಕುಳಗಳೊಂದಿಗೆ ಒಪ್ಪಂದಕ್ಕೆ ಸಹಿ ಹಾಕುವವರೆಗೆ 84 ದಿನಗಳವರೆಗೆ ಮುಂದುವರೆಸಿದರು. ಅಂತಿಮವಾಗಿ, ಗಣನೀಯ ಸಾಧನೆಗಳ ನಂತರ ಕಾರ್ಮಿಕರು ಕೆಲಸಕ್ಕೆ ಮರಳಿದರು.

ಕಪ್ಪು ಮಸೂದೆಗಳು ಮತ್ತು ಬೀಗಮುದ್ರೆಗಳ ವಿರುದ್ಧ ಎರಡನೇ ರಾಷ್ಟ್ರೀಯ ಸಮಾವೇಶವನ್ನುಆಗಸ್ಟ್ 4, 1983 ರಂದು ದೆಹಲಿಯ ತಲಕೋಟ್ರಾ ಕ್ರೀಡಾಂಗಣದಲ್ಲಿ ನಡೆಸಲಾಯಿತು. ಐಎನ್‌ಟಿಯುಸಿಯೇತರ ಕಾರ್ಮಿಕ ಸಂಘಗಳು ಮತ್ತು ಸರ್ಕಾರಿ, ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯದ ಕಾರ್ಮಿಕರು ಮತ್ತು ನೌಕರರ ರಾಷ್ಟ್ರೀಯ ಒಕ್ಕೂಟಗಳು ಸಮಾವೇಶದಲ್ಲಿ ಭಾಗವಹಿಸಿದವು.

ಸಮಾವೇಶವು ಕಪ್ಪು ಕಾಯಿದೆಗಳು, ಲಾಕ್–ಔಟ್‌ಗಳು, ಬೆಲೆ ಏರಿಕೆ, ಹೆಚ್ಚುತ್ತಿರುವ ನಿರುದ್ಯೋಗ, ರಿಟ್ರೆಂಚ್‌ಮೆಂಟ್ ಮತ್ತು ಲೇ–ಆಫ್ ವಿರುದ್ಧದ ಹೋರಾಟದ ಹಾದಿಯನ್ನು ಪಟ್ಟಿಮಾಡಿತು. ಅಸಂಘಟಿತ ಕಾರ್ಮಿಕರ ಶೋಚನೀಯ ಕೆಲಸದ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಅವರನ್ನು ಸಂಘಟಿಸಲು ಸಮಾವೇಶವು ನಿರ್ಧರಿಸಿತು.

ಅದರಂತೆ, ಲಾಕ್– ಔಟ್ ವಿರುದ್ಧ ಅಖಿಲ

ಪುಟ 14 ನೋಡಿ

ಲಕ್ಷದ್ವೀಪದಲ್ಲಿ ಸರ್ವಾಧಿಕಾರಶಾಹೀ ಆಳ್ವಿಕೆ: ಹೆಚ್ಚುತ್ತಿರುವ ಪ್ರತಿರೋಧ ಆಡಳಿತಗಾರನನ್ನು ಹಿಂದಕ್ಕೆ ಕರೆಸಿಕೊಳ್ಳಲು ಆಗ್ರಹ

ಅರಬ್ಬೀ ಸಾಗರದಲ್ಲಿ ಇರುವ ಲಕ್ಷದ್ವೀಪಲ್ಲಿ ಕಳೆದ ಡಿಸೆಂಬರಿನಲ್ಲಿ ಈ ಹಿಂದೆ ಗುಜರಾತಿನಲ್ಲಿ ಗೃಹಮಂತ್ರಿಗಳಾಗಿದ್ದ ಪ್ರಫುಲ್ ಖೋಡ ಪಟೇಲ್ ಅವರನ್ನು 'ಆಡಳಿತಗಾರ' (ಅಡ್ಮಿನಿಸ್ಟ್ರೇಟರ್) ಹುದ್ದೆಗೆ ನೇಮಿಸಿದ ನಂತರ ಅವರು ಕೈಗೊಂಡಿರುವ ಕ್ರಮಗಳು ಅಲ್ಲಿ ಸರ್ವಾಧಿಕಾರಶಾಹೀ ಆಳ್ವಿಕೆಯನ್ನು ಹೇರಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ.

ಇವರು ಮನಬಂದಂತೆ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ, ಈ ಕೇಂದ್ರಾಡಳಿತ ಪ್ರದೇಶದಲ್ಲಿ ಬಹುಕಾಲದಿಂದ ಇರುವ ಕಾಯ್ದೆಗಳನ್ನು ಯಾವುದೇ ಸಮಾಲೋಚನೆ ನಡೆಸದೆ ಬದಲಿಸುತ್ತಿದ್ದಾರೆ. ಅವರು ತರ ಬಯಸುವ ಬದಲಾವಣೆಗಳನ್ನು ನೋಡಿದರೆ, ಅದರ ಹಿಂದೆ ಸಂಘ ಪರಿವಾರದ ಒಂದು ದೊಡ್ಡ ದುಷ್ಟ ಅಜೆಂಡಾವೇ ಇದ್ದಂತೆ ಕಾಣುತ್ತಿದೆ ಎಂದು ಎಐಕೆಎಸ್ ಹೇಳಿದೆ.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಇಲ್ಲಿಯ ನಿವಾಸಿಗಳಲ್ಲಿ 96% ಕ್ಕಿಂತಲೂ ಹೆಚ್ಚು ಮುಸ್ಲಿಮ್ ಸಮುದಾಯಕ್ಕೆ ಸೇರಿದವರಾಗಿದ್ದು, ಈ ಆಡಳಿತಗಾರ ದೇಶದ ಸಂವಿಧಾನಕ್ಕೆ, ಮತ್ತು ಜಾತ್ಯತೀತ ಹಂದರಕ್ಕೆ ವಿರುದ್ಧವಾಗಿರುವ ಕ್ರಮಗಳನ್ನು ತರುತ್ತಿದ್ದಾರೆ ಎಂದಿರುವ ಎಐಕೆಎಸ್ ಈತನನ್ನು ತಕ್ಷಣವೇ ವಜಾಮಾಡಿ ಹಿಂದಕ್ಕೆ ಕರೆಸಿಕೊಳ್ಳಬೇಕು, ಆತ ತಂದ ಬದಲಾವಣೆಗಳನ್ನು ರದ್ದು ಮಾಡಿ ಅವುಗಳ ಮೂಲಸ್ವರೂಪಕ್ಕೆ ತರಬೇಕು ಎಂದು ಆಗ್ರಹಿಸಿದೆ.

ಈ ಆಡಳಿತಗಾರನ ಕ್ರಮಗಳ ವಿರುದ್ಧ ಈ ದ್ವೀಪಸಮೂಹಗಳ ಜನರಲ್ಲಿ ಅಸಮಾಧಾನ ತೀವ್ರವಾಗಿ ಬೆಳೆಯುತ್ತಿದೆ. ಇದು ಇಸ್ಲಾಮ್‌ವಾದಿಗಳು ಮಾಡುತ್ತಿರುವ ಅಪಪ್ರಚಾರ, ಅವರು ಪ್ರತಿಭಟನೆಗಳನ್ನು ಉದ್ರೇಕಿಸುತ್ತಿದ್ದಾರೆ ಎಂದು ಆರೆಸ್ಸೆಸ್ ಮುಖವಾಣಿ 'ಆರ್ಗನೈಸರ್' ಸುಳ್ಳು ಹರಡಿಸುತ್ತಿರುವುದು ಈ ಕ್ರಮಗಳ ಹಿಂದಿರುವ ಕೋಮುವಾದಿ ಫ್ಯಾಸಿಸ್ಟ್ ಪಿತೂರಿಯನ್ನು, ಮತ್ತು ಪ್ರಜಾಸತ್ತಾತ್ಮಕ ಪ್ರತಿಭಟನೆಗಳ ಬಗ್ಗೆ ಕೋಮುವಾದಿಗಳ ಫ್ಯಾಸಿಸ್ಟ್ ಅಸಹಿಷ್ಣುತೆಯನ್ನು ತೋರಿಸುತ್ತದೆ ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ.

ಈ ಆಡಳಿತಗಾರ ಕೊಟ್ಟಿರುವ ಆದೇಶಗಳನ್ನು ಪರಿಶೀಲಿಸಿದರೆ ಇಲ್ಲಿನ ಜನಗಳ ಪಾರಂಪರಿಕ ಜೀವನಶೈಲಿಯನ್ನು ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ನಾಶಪಡಿಸುವ ಉದ್ದೇಶದಿಂದಲೇ ಅವನ್ನು ರೂಪಿಸಿದಂತೆ ಕಾಣುತ್ತದೆ.

ಈ ದ್ವೀಪ ಸಮೂಹದ ನಿವಾಸಿಗಳಲ್ಲಿ ಈ ಬಗ್ಗೆ ಹೆಚ್ಚುತ್ತಿರುವ ಅಸಮಾಧಾನದ ಬಗ್ಗೆ ಮೇ 23 ರಂದು ರಾಜ್ಯಸಭೆಯಲ್ಲಿ ಸಿಪಿಐ(ಎಂ) ಗುಂಪಿನ ಮುಖಂಡರಾದ ಎಳಮಾರಂ ಕರೀಮ್ ರಾಷ್ಟ್ರಪತಿಗಳಿಗೆ ಒಂದು ವಿವರವಾದ ಪತ್ರ ಬರೆದು ಈತನನ್ನು ತಕ್ಷಣವೇ ಹಿಂದಕ್ಕೆ ಕರೆಸಿಕೊಳ್ಳಬೇಕು ಮತ್ತು ಆತನ ಆಳ್ವಿಕೆಯಲ್ಲಿ ತಂದಿರುವ ಕ್ರಮಗಳ ಮರುವಿಮರ್ಶೆ ನಡೆಸಿ ಎಲ್ಲ ಆದೇಶಗಳನ್ನು ಮತ್ತು ಸುಧಾರಣೆ ಕ್ರಮಗಳನ್ನು ಹಿಂದಕ್ಕೆ ಪಡೆಯಬೇಕೆಂದು ಕೋರಿದ್ದಾರೆ.

ಮೇ 24ರಂದು ಅಲಪ್ಪುಳಾದ ಲೋಕಸಭಾ ಸದಸ್ಯ ಎ.ಎಂ. ಅರೀಫ್ ರವರು ಕೂಡ ರಾಷ್ಟ್ರಪತಿಗಳಿಗೆ ಪತ್ರ ಬರೆದು ತಕ್ಷಣವೇ ಈ ಆಡಳಿತಗಾರನ ಸೇವೆಗಳನ್ನು ಕೊನೆಗೊಳಿಸಿ, ಆತ ಕೈಗೊಂಡಿರುವ ಎಲ್ಲ ಆಡಳಿತ ಕ್ರಮಗಳ ಮರುವಿಮರ್ಶೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಒಟ್ಟಿನಲ್ಲಿ, ಈ ಆಡಳಿತಗಾರನ ಆಶಯಗಳು ಪ್ರಶ್ನಾರ್ಹ ಮತ್ತು ಕ್ರಮಗಳು ಅನಗತ್ಯವಾದವುಗಳು ಎಂದಿರುವ ಎಐಕೆಎಸ್ ಇಡೀ ದೇಶದ ಜನಗಳು ಲಕ್ಷದ್ವೀಪದ ಜನಗಳಿಗೆ ಬೆಂಬಲವಾಗಿ ನಿಲ್ಲಬೇಕು, ಈ ಪ್ರಜಾಪ್ರಭುತ್ವ–ವಿರೋಧಿ ಸರ್ವಾಧಿಕಾರಶಾಹೀ ಕ್ರಮಗಳನ್ನು ಸೋಲಿಸಬೇಕು ಎಂದು ಕರೆ ನೀಡಿದೆ.

ಮೇಲೆ ಹೇಳಿದಂತೆ ಸಿಪಿಐ(ಎಂ) ಸಂಸತ್ ಸದಸ್ಯರುಗಳು ಈತನನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು ಎಂದು ರಾಷ್ಟ್ರಪತಿಗಳಿಗೆ ಪತ್ರ ಬರೆದಿದ್ದಾರೆ. ಈ ಕ್ಷೇತ್ರದ ಸಂಸತ್ ಸದಸ್ಯ ಎನ್‌ಸಿಪಿಯ ಮಹಮ್ಮದ್ ಫೈಝಲ್ ಈ ಕ್ರಮಗಳನ್ನು ಖಂಡಿಸಿದ್ದಾರೆ. ಅಷ್ಟೇ ಅಲ್ಲ, ಬಿಜೆಪಿಯ ಲಕ್ಷದ್ವೀಪ ಘಟಕದ ಕಾರ್ಯದರ್ಶಿ ಹೆಚ್.ಕೆ .ಮಹಮ್ಮದ್ ಖಾಸಿಂ ಕೂಡ ಈ ಕ್ರಮಗಳನ್ನು ವಿರೋಧಿಸಿದ್ದಾರೆ, ಬಿಜೆಪಿಯ ಕೆಲವು ಪ್ರಮುಖ ಯುವ ಕಾರ್ಯಕರ್ತರು ರಾಜೀನಾಮೆ ಕೊಟ್ಟಿದ್ದಾರೆ ಎಂಬ ಸುದ್ದಿಯೂ ಬಂದಿದೆ.

ವ್ಯಾಪಕ ಪ್ರತಿಭಟನೆಗಳ ನಂತರ ಲಕ್ಷದ್ವೀಪದ ಕಲೆಕ್ಟರ್ ಈ ಕೇಂದ್ರಾಡಳಿತದ ಆಡಳಿತಗಾರರ ಕ್ರಮಗಳು ಈ ದ್ವೀಪವಾಸಿಗಳ ಪ್ರಯೋಜನಕ್ಕಾಗಿ ಎಂದು ಸಮರ್ಥಿಸಿಕೊಳ್ಳುವ ಹೇಳಿಕೆಯನ್ನು ನೀಡಿದ್ದಾರೆ. ಈ ದ್ವೀಪ ಮಾಲ್ಡೀವ್ಸ್‌ನಂತಹ ಭೌಗೋಳಿಕ ಸನ್ನಿವೇಶದಲ್ಲಿದ್ದರೂಇಲ್ಲಿ ಪ್ರವಾಸೋದ್ಯಮ ಮೂಲರಚನೆ ಬಹಳ ಸೀಮಿತ, ಇದನ್ನು ಉತ್ತಮ ಪಡಿಸಲು ಇಲ್ಲಿನ ಆಡಳಿತ ನೀತಿ ಆಯೋಗದೊಂದಿಗೆ ಕೆಲಸ ಮಾಡುತ್ತಿದೆ ಎಂದು ಅವರು ಹೇಳಿರುವುದು ಈ ಕ್ರಮಗಳ ನಿಜವಾದ ಉದ್ದೇಶವನ್ನು ತೋರಿಸುತ್ತದೆ ಎಂದು ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

"ಪೌರವಾಣಿ" ಸಂಪಾದಕರಾಗಿ... ಪುಟ 8 ರಿಂದ

ಸ್ವಾತಂತ್ರ್ಯದ ಸಂದರ್ಭದಲ್ಲಿ ಅವರ ಬದುಕು.

ದೇಶಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಸಂಸ್ಥಾನ ಮಾತ್ರ ಒಕ್ಕೂಟಕ್ಕೆ ಸೇರಲು ಸಹಿ ಮಾಡದೆ ರಾಜಪ್ರಭುತ್ವದ ಪರತಂತ್ರದಲ್ಲಿಯೇ ಮುಂದುವರೆಯುತ್ತಿತ್ತು. ಅದಕ್ಕಾಗಿ 'ಮೈಸೂರು ಚಲೋ' ಚಳವಳಿ ನಡೆಸಲು ಕಾಂಗ್ರೆಸ್ ನಿರ್ಧರಿಸಿತು.

ಈ ಚಳವಳಿಗೆ ಕಾವುತುಂಬಲು ಮತ್ತು ಜನರನ್ನು ಸಜ್ಜುಗೊಳಿಸಲು ತಿ.ತಾ. ಶರ್ಮ ಅವರಿಂದ 10 ಸುದೀರ್ಘ ಲೇಖನಗಳನ್ನು ಬರೆಸಿ, ಪೌರವಾಣಿಯಲ್ಲಿ ಪ್ರತಿದಿನ ಒಂದೊಂದು ಲೇಖನವನ್ನು ಪ್ರಕಟಿಸತೊಡಗಿದರು. ಅವುಗಳು ರಾಜಪ್ರಭುತ್ವದ ಆಡಳಿತ ವೈಖರಿ, ನಿರಂಕುಶತೆ, ದಿವಾನರ ದಬ್ಬಾಳಿಕೆ, ಜನರ ಬವಣೆ ಮೊದಲಾದ ವಿಷಯಗಳನ್ನು ಒಳಗೊಂಡಿದ್ದವು. ಈ ಲೇಖನಗಳಿಂದ ಜನರಲ್ಲಿ ವಿದ್ಯುತ್ ಸಂಚಾರವಾಯಿತು. ಜನರು ಎಚ್ಚೆತ್ತರು. ಸರ್ಕಾರಕ್ಕೂ ಬಿಸಿಮುಟ್ಟಿತು. "ಇನ್ನು ಮುಂದೆ ಯಾವುದೇ ಲೇಖನವನ್ನು ಪ್ರಕಟಿಸುವ ಮುನ್ನ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ಸಮ್ಮತಿ ಪಡೆದು ಪ್ರಕಟಿಸಬೇಕು" ಎಂಬ ಕರಾಳ ನಿರ್ಬಂಧವನ್ನು ಸರ್ಕಾರ ಹಾಕಿತು. ಆ ಹೊತ್ತಿಗೆ ಶರ್ಮ ಅವರ 8 ಲೇಖನಗಳು ಪ್ರಕಟವಾಗಿದ್ದವು. ಉಳಿದಿದ್ದ ಎರಡು ಲೇಖನಗಳನ್ನು ಯಾರ ಸಮ್ಮತಿ ಪಡೆಯದೆ ಧೈರ್ಯವಾಗಿ ದೊರೆಸ್ವಾಮಿ ಅವರು ಪ್ರಕಟಿಸಿಯೇ ಬಿಟ್ಟರು. ಕೊನೆಯ ಲೇಖನದಲ್ಲಿ ಒಂದು ಬಾಕ್ಸ್ ಹಾಕಿ "ಸರ್ಕಾರದ ನಿರಂಕುಶ ನೀತಿಯನ್ನು ಪ್ರತಿಭಟಿಸಿ, ನಾಳೆಯಿಂದ ನಮ್ಮ ಪತ್ರಿಕೆಯನ್ನು ಹೊರತರಬಾರದೆಂದು ತೀರ್ಮಾನಿಸಿದ್ದೇವೆ" ಎಂದು ಸುದ್ದಿ ಪ್ರಕಟಿಸಿದರು. ಸರ್ಕಾರ 'ಪೌರವಾಣಿ' ಕಛೇರಿಗೆ ಬೀಗಮುದ್ರೆ ಹಾಕಿತು.

ಸೆಪ್ಟಂಬರ್ 4, 1947ರಿಂದ 'ಮೈಸೂರು ಚಲೋ' ಚಳವಳಿ ಆರಂಭವಾಗಲಿತ್ತು. ಆ ಚಳವಳಿಗೆ ಮಾರ್ಗದರ್ಶನ ಮಾಡಲು ಮತ್ತು ಜನರಲ್ಲಿ ಶಕ್ತಿ ತುಂಬಲು 'ಪೌರವಾಣಿ' ಪತ್ರಿಕೆಯನ್ನು ಪ್ರಕಟಿಸಲೇ ಬೇಕೆಂದು ಹಟವಿಡಿದು ದೊರೆಸ್ವಾಮಿ ಅವರು ಗೆಳೆಯರೊಡನೆ ಹಿಂದೂಪುರಕ್ಕೆ ಹೋದರು. ಹಿಂದೂಪುರ ಮದ್ರಾಸ್ ಸಂಸ್ಥಾನಕ್ಕೆ ಸೇರಿತ್ತು. ಅಲ್ಲಿ ಸಿರಾ ಕಡೆಯವರಾದ ಲಿಂಗಣ್ಣ ಎಂಬ ಉದ್ಯಮಿ ಮತ್ತು ಸ್ವಾತಂತ್ರ್ಯ ಪ್ರೇಮಿಯ ಆಸರೆ ಇವರಿಗೆ ಸಿಕ್ಕಿತು. ಹಿಂದೂಪುರದಲ್ಲಿ ಪತ್ರಿಕೆಯನ್ನು ಮುದ್ರಿಸಿ ಪ್ರತಿದಿನ ಒಬ್ಬೊಬ್ಬ ಸತ್ಯಾಗ್ರಹಿ ಪತ್ರಿಕೆಯನ್ನು ಬಸ್ಸಿನ ಮೂಲಕ ಬೆಂಗಳೂರಿಗೆ ತೆಗೆದುಕೊಂಡು ಹೋಗಿ, ಪತ್ರಿಕೆಯ ಏಜೆಂಟರ್ ಶಾಮಣ್ಣನವರಿಗೆ ತಲುಪಿಸಬೇಕಿತ್ತು. ಪೌರವಾಣಿ ಎಷ್ಟರ ಮಟ್ಟಿಗೆ ಜನಪ್ರಿಯವಾಗಿತ್ತು ಎಂದರೆ ಮೂರು ಕಾಸಿನ ಪೌರವಾಣಿಯನ್ನು ಪೇಪರ್ ಮಾರುವ ಹುಡುಗರು ಎಂಟು ಆಣೆಗೆ ಮಾರುತ್ತಿದ್ದರಂತೆ. ಅಷ್ಟೇ ಅಲ್ಲ ಮೈಸೂರು ಸಂಸ್ಥಾನದ ಜನತೆ ಪತ್ರಿಕೆ ಕಳುಹಿಸಿಕೊಡಲು ಮನಿ ಆರ್ಡರ್, ಟೆಲಿಗ್ರಾಮ್ ಮನಿಆರ್ಡರ್ ಮೂಲಕ 10, 20 ರೂಪಾಯಿಗಳನ್ನು ಕಳುಹಿಸುತ್ತಿದ್ದರಂತೆ. ದಿನವೊಂದಕ್ಕೆ 10,000 ಪ್ರತಿಗಳನ್ನು ಮುದ್ರಿಸಬೇಕಿತ್ತು. ಮುಸಲ್ಮಾನ ಬಂಧು ಒಬ್ಬನೇ ಕಾಲಿನಿಂದ ತುಳಿಯುವ ಟ್ರೆಡಲ್ ಮೂಲಕ ಮುದ್ರಿಸುತ್ತಿದ್ದ. ಆ ಮಟ್ಟಿಗೆ ಅಭೂತಪೂರ್ವ ಜನಪ್ರಿಯತೆಯನ್ನು ಪತ್ರಿಕೆ ಹೊಂದಿತ್ತು. ಅದರ ಹಿಂದಿನ ಕರ್ತೃತ್ವ ಶಕ್ತಿ ದೊರೆಸ್ವಾಮಿ ಅವರಾಗಿದ್ದರು. ಈ ಸಂದರ್ಭದಲ್ಲಿ ಹಲವು ರೋಚಕ ಸನ್ನಿವೇಶಗಳು ದೊರೆಸ್ವಾಮಿ ಅವರ ಬದುಕಿನಲ್ಲಿ ಬಂದು ಹೋಗಿವೆ. ಅಂತಿಮವಾಗಿ ಅಕ್ಟೋಬರ್ 24, 1947ರಂದು 'ಮೈಸೂರು ಚಲೋ' ಚಳವಳಿ ಯಶಸ್ಸು ಕಂಡಿತು. ಮೈಸೂರು ಭಾರತ ಒಕ್ಕೂಟಕ್ಕೆ ಸೇರಿತು. ಕೆ.ಸಿ. ರೆಡ್ಡಿ ಅವರ ನೇತೃತ್ವದಲ್ಲಿ 'ಜವಾಬ್ದಾರಿ ಸರ್ಕಾರ' ಅಸ್ತಿತ್ವಕ್ಕೆ ಬಂದಿತು.

ದೊರೆಸ್ವಾಮಿ ಅವರು ಹಿಂದೂಪುರಕ್ಕೆ ಹೋದ ಉದ್ದೇಶ ಈಡೇರಿದ ಮೇಲೆ ತಮ್ಮ ಸ್ನೇಹಿತರೊಡನೆ ಬೆಂಗಳೂರಿಗೆ ಹಿಂತಿರುಗಿ ಬಂದು ಮತ್ತೆ 'ಪೌರವಾಣಿ' ಪತ್ರಿಕೆಯನ್ನು ಆರಂಭಿಸಿದರು..........

ದೊರೆಯಾಗಲೊಲ್ಲದ... ಪುಟ 8 ರಿಂದ

ಸಂಚರಿಸಿದರು.

ನನ್ನ ಊರಾದ ಬಕ್ಕೆಮನೆಗೂ ನನ್ನ ಜೊತೆ ಬಂದಿದ್ದರು. ನಮ್ಮ ತಂದೆಯವರೂ ಸ್ವಾತಂತ್ರ್ಯ ಹೋರಾಟಗಾರ ಆಗಿದ್ದರಿಂದ ಬಾಂಧವ್ಯ ಬೆಸೆಯಿತು. ಮೂರು ದಿನ ಕಾಡುಮೇಡು ಸಂಚರಿಸಿದರು. ಹಳ್ಳ ದಾಟುವಾಗ ಬಿದ್ದು ಗಾಯಗೊಂಡರೂ ಕಾಡು ಸುತ್ತುವ ಅವರ ಉತ್ಸಾಹವೇನೂ ಕಡಿಮೆ ಆಗಿರಲಿಲ್ಲ. ಆಗ ಅಘನಾಶಿನಿಗೂ ಡ್ಯಾಮ್ ಕಟ್ಟುವ ಸೂಚನೆ ಇತ್ತು. "ಇಂಥ ಹಸುರು ನಾಡನ್ನು ಮುಳುಗಿಸಿ ಅದ್ಯಾರ ಅಭಿವೃದ್ಧಿ ಸಾಧಿಸ್ತಾರಂತೆ ಇವರು; ಈ ಊರು ಮುಳುಗುವುದೇ ಆದರೆ ನಾನೂ ಇರ್ತೇನೆ ನಿಮ್ಮ ಜೊತೆಗೆ –ನಮ್ಮನ್ನೆಲ್ಲ ಮುಳುಗಿಸಲಿ ನೋಡೋಣ" ಅಂದರು.

ಇತ್ತ ಬೆಂಗಳೂರಿನ ಗಾಂಧೀಭವನದಲ್ಲಿ ಅವರ ನೇತೃತ್ವದಲ್ಲಿ ನಮ್ಮ ಚಿಂತನ ಗೋಷ್ಠಿ ತಿಂಗಳಿಗೊಮ್ಮೆ ನಡೆಯುತ್ತಲೇ ಇತ್ತು. IIScಯಿಂದ ಪ್ರೊ ಮಾಧವ ಗಾಡಗೀಳ, ಡಾ. ರಾಮಚಂದ್ರ ಗುಹಾ, ಡಿಕೆ ಸುಬ್ರಹ್ಮಣ್ಯ, ಅಪರೂಪಕ್ಕೆ ಎಕೆಎನ್ ರೆಡ್ಡಿ ಕೂಡ ಭಾಗವಹಿಸಿ ನಮಗೆಲ್ಲ ಇಕಾಲಜಿ–ಎನರ್ಜಿ ಪಾಠ ಹೇಳುತ್ತಿದ್ದರು.

ಡಾ. ಕುಸುಮಾ ಸೊರಬ, ಡಾ. ಎಸ್ ಆರ್. ಹಿರೇಮಠ, ಆಲ್ಮಿತ್ರಾ ಪಟೇಲ್, ಅಪರೂಪಕ್ಕೆ ಪ್ರೊ. ನಂಜುಂಡಸ್ವಾಮಿ ಕೂಡ ಬರುತ್ತಿದ್ದರು. ಶರಾವತಿ ಟೇಲ್‌ರೇಸ್, ಕೊಜೆಂಟ್ರಿಕ್ಸ್, ನೀಲಗಿರಿ ನೆಡುತೋಪುಗಳ ವಿರುದ್ಧದ ಕಿತ್ತಿಕೊ ಹಚ್ಚಿಕೊ ಚಳವಳಿ, ಕೈಗಾ ಚಳವಳಿಯ ಸೂತ್ರಧಾರ "ಅವಿನಾಶ" (ಅಣುಶಕ್ತಿ ವಿರೋಧಿ ನಾಗರಿಕ ಶಕ್ತಿ) ಇವಕ್ಕೆಲ್ಲ ಮೂಲ ಪೋಷಕಾಂಶ ಇಲ್ಲೇ ಸಿಗುತ್ತಿತ್ತು. ದೊರೆಸ್ವಾಮಿಯವರೇ ಬಹುತೇಕ ಸಂದರ್ಭಗಳಲ್ಲಿ ನಮ್ಮ ಮುಖವಾಣಿ ಆಗಿರುತ್ತಿದ್ದರು.

ಚಳವಳಿಗಳ ಕಾಲ ಮುಗಿಯುತ್ತ ಬಂದಂತೆ (ಕಾರ್ಮಿಕ ಚಳವಳಿ, ಪರಿಸರ ಚಳವಳಿ, ರೈತ ಚಳವಳಿ, ಗ್ರಾಹಕ ಚಳವಳಿ, ವಿದ್ಯಾರ್ಥಿ ಚಳವಳಿ ಇತ್ಯಾದಿಗಳೆಲ್ಲ ಮುಗಿಯುತ್ತ ಬಂದಂತೆ) ನಾವೆಲ್ಲ ನಮ್ಮನಮ್ಮ ಗೂಡು ಸೇರಿಕೊಂಡರೂ ದೊರೆಸ್ವಾಮಿ ಹೊಸ ಕ್ಷೇತ್ರಗಳನ್ನು ಹುಡುಕುತ್ತಲೇ ಇದ್ದರೇನೊ. ಫ್ಯಾಶನ್ ಶೋ ವಿರುದ್ಧ, ಜಪಾನೀ ಟೌನ್‌ಶಿಪ್ ವಿರುದ್ಧ, ಬಳ್ಳಾರಿಯ ಗಣಿಗಾರಿಕೆಯ ವಿರುದ್ಧ, ಭೂಕಬಳಿಕೆಯ ವಿರುದ್ಧ, ಕೆರೆ ಕಬಳಿಕೆ ವಿರುದ್ಧ, ತಿಪ್ಪೆ ಮಾಫಿಯಾಗಳ ವಿರುದ್ಧ, ಸಿಎಎ ವಿರುದ್ಧ ಅವರು ಧ್ವನಿ ಎತ್ತುತ್ತಲೇ ಇದ್ದರು. .....



ಬದುಕಿದರೆ ಇವರ ಹಾಗೆ ಬದುಕಬೇಕು!

ಡಾ. ಎಚ್.ಎಸ್. ದೊರೆಸ್ವಾಮಿ ಶತಮಾನದ ವ್ಯಕ್ತಿ. 20 ನೇ ಶತಮಾನವಿಡೀ ಬದುಕಿ, 21 ನೇ ಶತಮಾನದ ಮೊದಲೆರಡು ದಶಕಗಳನ್ನೂ ಕಂಡು ನಮಗೆಲ್ಲರಿಗೂ ಸ್ಫೂರ್ತಿಯ ಕೇಂದ್ರವಾಗಿದ್ದರು. ದೇಶದ ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಸರಕಾರದ ಈಚಿನ ಭೂ ಕಬಳಿಕೆಯ ವಿರುದ್ಧದ ಹೋರಾಟದ ವರೆಗೂ ಅವರ ಚಟುವಟಿಕೆಗಳ ವ್ಯಾಪ್ತಿ ಹಬ್ಬಿತ್ತು. ಪತ್ರಕರ್ತರಾಗಿಯೂ ಅವರು ಪ್ರಸಿದ್ಧರು. ಗಾಂಧೀ ಹತ್ಯೆಯ ಕೆಲವು ದಿನಗಳ ಮೊದಲು ಗೋಡ್ಸೆ ಬೆಂಗಳೂರಿಗೆ ಬಂದದ್ದನ್ನು ಅವರು ದಾಖಲಿಸಿದ್ದರು....


ಕರ್ನಾಟಕ ಏಕೀಕರಣಕ್ಕೂ ಅವರು ದುಡಿದಿದ್ದರು. ಇಂದಿರಾಗಾಂಧೀ ಕಾಲದಲ್ಲಿ ತುರ್ತುಪರಿಸ್ಥಿತಿ ವಿರೋಧಿಸಿ ಜೈಲುವಾಸ ಅನುಭವಿಸಿದ್ದ ಅವರು, ಈಚೆಗೆ ವೇಗವಾಗಿ ಬೆಳೆಯುತ್ತಿರುವ ಫ್ಯಾಸಿಸಂನ ವಿರುದ್ಧವೂ ಧ್ವನಿ ಎತ್ತುತ್ತಿದ್ದರು. 'ಗಾಂಧೀ ಮತ್ತು ಅಂಬೇಡ್ಕರ್ ಅವರುಗಳಲ್ಲಿ ಭಿನ್ನಾಭಿಪ್ರಾಯ ಇತ್ತೇ ಹೊರತು ವೈರತ್ವ ಇರಲಿಲ್ಲ' ಎಂಬ ಅವರ ಮಾತು ನನಗೆ ವೈಯಕ್ತಿಕವಾಗಿ ಬಹಳ ಖುಷಿ ನೀಡಿತ್ತು. ಒಳ್ಳೆಯವರನ್ನೆಲ್ಲಾ ಟ್ರೋಲ್ ಮಾಡುವುದನ್ನೇ ಕೆಲಸ ಮಾಡಿಕೊಂಡಿರುವವರ ಬಗ್ಗೆ ಅವರಿಗೆ ಚೆನ್ನಾಗಿ ಗೊತ್ತಿತ್ತು. 'ನಿಮ್ಮ ಬಗ್ಗೆ ಹೀಗೆ ಬರೆದಿದ್ದಾರಲ್ಲಾ?' ಎಂದರೆ ಅಜ್ಜ ನಕ್ಕುಬಿಡುತ್ತಿದ್ದರು! ಬದುಕಿದರೆ ದೊರೆಸ್ವಾಮಿಯವರ ಹಾಗೆ ಬದುಕಬೇಕು! ನಮನಗಳು ಸಾರ್

–ಪ್ರೊ. ಪುರುಷೋತ್ತಮ ಬಿಳಿಮಲೆ

ಅವರು, ನಮ್ಮ ಪ್ರೀತಿಯ 'ಆಂದೋಲನಜೀವಿ', ಅದಮ್ಯ ಚೇತನ ದೊರೆಸ್ವಾಮಿಯವರು ತಮ್ಮ ಶತಮಾನದ ಬದುಕು ಮುಗಿಸಿದ್ದಾರೆ. ಸದಾ ಶಾಂತಿಯನ್ನೇ ಹಂಚಿದ ದೊರೆಸ್ವಾಮಿಯವರ ಆತ್ಮಕ್ಕೆ ಶಾಂತಿ ದೊರೆಯದೆ ಇರುವುದೆ? ಅದರಲ್ಲೂ ಇವತ್ತು ಬುದ್ಧ ಹುಣ್ಣಿಮೆ!

–ಚೇತನಾ ತೀರ್ಥಹಳ್ಳಿ, ಲೇಖಕಿ

ಅತಿ ದೊಡ್ಡ ಲಸಿಕೆ ಉತ್ಪಾದನೆ ಸಾಮರ್ಥ್ಯವಿದ್ದರೂ ಭಾರತದ ಜನಗಳಿಗೆ ಲಸಿಕೆ ಹಾಕಲು ಆಗಿಲ್ಲ ಏಕೆ?



ಈ ವರ್ಷದ ಬಜೆಟ್‌ನಲ್ಲಿ ಕೋವಿಡ್–19 ಲಸಿಕೆಗಳಿಗಾಗಿ ಮೀಸಲಿಟ್ಟ ಹಣದ ಮೂರನೇ ಒಂದು ಭಾಗದಲ್ಲಿ ಎಲ್ಲರಿಗೂ ಲಸಿಕೆ ಹಾಕಬಹುದಿತ್ತು ಮತ್ತು ಭಾರತವು ವಿಶ್ವದ ಲಸಿಕೆ ಔಷಧಾಲಯ ಎಂಬ ಬಿರುದನ್ನು ಸಮರ್ಥಿಸಿಕೊಳ್ಳಬಹುದಿತ್ತು. ಬದಲಿಗೆ, ನಾವು ನಮ್ಮ ಜನರಿಗೆ ಮೋಸ ಮಾಡಿದ್ದೇವೆ ಮಾತ್ರವಲ್ಲ, ಈಗ 92 ದೇಶಗಳಿಗೆ ಲಸಿಕೆಗಳನ್ನು ಪೂರೈಸದ ಲೋಪಕ್ಕಾಗಿ ಕಟಕಟೆಯಲ್ಲಿ ನಿಂತಿದ್ದೇವೆ. ಮೋದಿ ಅವರ ಆತ್ಮನಿರ್ಭರ್ ಭಾರತ್ ತಂದಿಟ್ಟಿರುವ ಫಲವೆಂದರೆ: ನಮ್ಮ ಸ್ಥಳೀಯ ಸಾಮರ್ಥ್ಯದ ನಾಶ ಮತ್ತು ಕೈ ಹಿಡಿಯಬೇಕಾದ ಸಮಯದಲ್ಲಿ ಜನರನ್ನು ಕೈಬಿಟ್ಟಿರುವುದು.

ಪ್ರಬೀರ್ ಪುರಕಾಯಸ್ಥ ಅನುವಾದ: ಕೆ.ಎಂ.ನಾಗರಾಜ್

ಸ್ವಾವಲಂಬನೆಯು ನಮ್ಮ ಮೊದಲ ಪರಿಕಲ್ಪನೆಯು ನಮ್ಮ ಸ್ವಾತಂತ್ರ್ಯ ಹೋರಾಟದಿಂದ ಮೂಡಿಬಂತು. ನಮ್ಮ ದಿನ ನಿತ್ಯದ ಅವಶ್ಯಕ ವಸ್ತುಗಳ ಪೂರೈಕೆಗಾಗಿ ವಸಾಹತುಶಾಹಿ ದೇಶಗಳ ಮೇಲಿನ ಅವಲಂಬನೆಯಿಂದ ಹೊರ ಬಂದು ಈ ಅವಶ್ಯಕತೆಗಳನ್ನು ನಾವೇ ತಯಾರಿಸಿಕೊಳ್ಳುವ ಸಲುವಾಗಿ, ನಮ್ಮ ಜನರು, ಸಂಸ್ಥೆಗಳು ಮತ್ತು ಸ್ಥಳಿಯ ಉದ್ಯಮಗಳು ತಮ್ಮ ತಮ್ಮ ಸಾಮರ್ಥ್ಯವನ್ನು ಸ್ಥಳೀಯವಾಗಿಯೇ ಅಭಿವೃದ್ಧಿಪಡಿಸಿಕೊಳ್ಳುವ ಕ್ರಮವೇ ಸ್ವಾವಲಂಬನೆ. ಆದರೆ, ಎರಡನೇಯದು, ಅಂದರೆ ಮೋದಿಯವರು 'ಆತ್ಮನಿರ್ಭರ್ ಭಾರತ್' ಎಂದು ಕರೆದ ಪರಿಕಲ್ಪನೆಯ ಅರ್ಥ ಸ್ಥಳೀಯ ಉತ್ಪಾದನೆ ಎಂದಷ್ಟೇ. ಸ್ವಾವಲಂಬನೆಯ ಇತರ ಅಂಶಗಳ ಸತ್ವವೇ ಇಲ್ಲದ ಕಾರಣದಿಂದ ಈ ಆತ್ಮನಿರ್ಭರ್ ಭಾರತವು ಇಂದು ನಮಗೆ ತುರ್ತಾಗಿ ಅಗತ್ಯವಿರುವ ಲಸಿಕೆಗಳನ್ನು ಸಹ ಉತ್ಪಾದಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.

ಈ ಹಿಂದಿನ ನಮ್ಮ ಸ್ವಾವಲಂಬನೆಯ ಫಲವು ಅಂದು ದೇಶದಲ್ಲಿ ಔಷಧಿಗಳ ತಯಾರಿಕೆಯಲ್ಲಿ ದೊಡ್ಡ ಬಹುರಾಷ್ಟ್ರೀಯ ಔಷಧಿ ಕಂಪನಿಗಳ ಏಕಸ್ವಾಮ್ಯವನ್ನು ಮುರಿದು ಭಾರತವನ್ನು ಬಡವರ ಜಾಗತಿಕ ಔಷಧಾಲಯವನ್ನಾಗಿ ಮಾಡಿತ್ತು. 1970ರ ಭಾರತದ ಪೇಟೆಂಟ್ ಕಾಯ್ದೆಯ ಬಲದಿಂದ ಮತ್ತು ಸಿಎಸ್‌ಐಆರ್ (ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ) ನೇತೃತ್ವದಲ್ಲಿ, ನಮ್ಮ ಪ್ರಯೋಗಾಲಯಗಳು, ಬಹುರಾಷ್ಟ್ರೀಯ ಔಷಧ ಕಂಪನಿಗಳು ಅನುಸರಿಸುತ್ತಿದ್ದ ವಿಧಾನವನ್ನು ತುಸು ಬದಲಾಯಿಸಿ ಅದೇ ಪರಿಣಾಮವುಳ್ಳ ಔಷಧಗಳನ್ನು ತಯಾರಿಸುವಲ್ಲಿ ಯಶಸ್ವಿಯಾಗಿದ್ದವು. ಈ ರೀತಿಯಲ್ಲಿ ಭಾರತದ ಸಾರ್ವಜನಿಕ ಔಷಧ ವಲಯ ಮತ್ತು ಸ್ಥಳೀಯ ಖಾಸಗಿ ತಯಾರಕರು ಜೊತೆಯಾಗಿ ತಮ್ಮ ಪರಿಶ್ರಮದ ಮೂಲಕ ವಿಶ್ವದ ಅತಿದೊಡ್ಡ ಪ್ರಮಾಣದ ಜೆನೆರಿಕ್ ಔಷಧಗಳು ಮತ್ತು ಲಸಿಕೆಗಳ ಉತ್ಪಾದನಾ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಿದರು. ದೇಶವು ವಿಶ್ವದ ಔಷಧಾಲಯ ಎಂಬ ಅಭಿದಾನಕ್ಕೆ ಪಾತ್ರವಾಯಿತು. ಆದರೆ, ಮೋದಿ ಅವರ "ಆತ್ಮನಿರ್ಭರ ಭಾರತ್" ಅದೆಲ್ಲವನ್ನೂ ಪೋಲು ಮಾಡಿದೆ.

ಕೊರೊನಾ ಜಾಡ್ಯವು ಮರುಕಳಿಸುವ ಎರಡನೆಯ ಅಲೆಯ ಸಾಧ್ಯತೆಯನ್ನು ಎಲ್ಲ ವೈಜ್ಞಾನಿಕ ಅಂದಾಜು ಮಾಹಿತಿಗಳೂ ಸೂಚಿಸಿದ್ದವು. ಹಾಗಾಗಿ, ಲಸಿಕೆಗಳ ಉತ್ಪಾದನೆಯನ್ನು ತಡಮಾಡದೆ ಹೆಚ್ಚಿಸುವ ಅಗತ್ಯ ಸ್ಪಷ್ಟವಾಗಿತ್ತು. ಈ ಎಲ್ಲವನ್ನೂ ನಿರ್ಲಕ್ಷಿಸಿದ ಮೋದಿ ಸರ್ಕಾರವು ಕೋವಿಡ್–19 ವಿರುದ್ಧದ ಯುದ್ಧವನ್ನು ಗೆದ್ದಿರುವುದಾಗಿ ಘೋಷಿಸಿತು. ಅದೇ ಹುಮ್ಮಸ್ಸಿನಲ್ಲಿ, ಬೇರೆ ಎಲ್ಲಾ ಕೆಲಸ ಕಾರ್ಯಗಳನ್ನು ಬದಿಗೊತ್ತಿ, ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳನ್ನು ಸೋಲಿಸಲು ಅಖಾಡಾಕ್ಕೆ ಇಳಿಯಿತು.

ಏನು ಮಾಡಬಹುದಿತ್ತು?

ಈ ಪರಿಸ್ಥಿತಿಯಲ್ಲಿ ಭಾರತವು ಏನಾದರೂ ಕಾರ್ಯಕ್ರಮ ಕೈಗೊಳ್ಳಬಹುದಿತ್ತೇ? ಹೌದು, ಅನೇಕ ಸಿದ್ಧತೆಗಳನ್ನು ಮಾಡಿಕೊಳ್ಳುವ ಅಗತ್ಯವಿತ್ತು ಮತ್ತು ಅವಕಾಶವೂ ಇತ್ತು. ದೇಶದಲ್ಲಿ ಕೋವಿಡ್–19 ರೋಗಿಗಳ ಸಂಖ್ಯೆ ಇಳಿಮುಖವಾದ ಅಕ್ಟೋಬರ್ 2020ರ ನಂತರದ ಸುಮಾರು ಐದು ತಿಂಗಳುಗಳ ಸಮಯವನ್ನು ಆಸ್ಪತ್ರೆಗಳು, ಆಮ್ಲಜನಕ ಮತ್ತು ಇತರ ವೈದ್ಯಕೀಯ ಬೆಂಬಲದ ಉಪಕರಣಗಳು ಮುಂತಾದ ವ್ಯವಸ್ಥೆಗಳನ್ನು ಏರ್ಪಡಿಸಿಕೊಳ್ಳಲು ಮತ್ತು ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಬಳಸಿಕೊಳ್ಳಬಹುದಿತ್ತು. ನಮ್ಮ ದೇಶದ ಸುಮಾರು 50 ಕಂಪನಿಗಳು ಲಸಿಕೆಗಳನ್ನು ಉತ್ಪಾದಿಸಬಲ್ಲ ಸಾಮರ್ಥ್ಯ ಹೊಂದಿವೆ. ಹಾಗಾಗಿ, ದೇಶದ ಜನರಿಗೆ ಅಗತ್ಯ ಪ್ರಮಾಣದ ಲಸಿಕೆಗಳನ್ನು ಒದಗಿಸುವುದರ ಜೊತೆಗೆ ಇತರ ದೇಶಗಳಿಗೂ ರಫ್ತು ಮಾಡುವಷ್ಟು ಲಸಿಕೆಗಳನ್ನು ಉತ್ಪಾದಿಸುವ ಯೋಜನೆಯನ್ನು ಸರ್ಕಾರವು ಹಮ್ಮಿಕೊಳ್ಳಬಹುದಿತ್ತು.



ಲಸಿಕೆಯ ವಿಭಿನ್ನ ತಂತ್ರಜ್ಞಾನಗಳು

ಲಸಿಕೆ ತಂತ್ರಜ್ಞಾನಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳುವ ಮೂಲಕ ವಿಷಯವನ್ನು ಪ್ರಾರಂಭಿಸೋಣ. ಲಸಿಕೆ ಉತ್ಪಾದಿಸುವ ಮೂರು ವಿಧಾನಗಳಿವೆ (ತಂತ್ರಜ್ಞಾನ). ಮೊದಲನೆಯದು, ವೈರಸ್ ನಿಷ್ಕ್ರಿಯಗೊಳಿಸಿದ ಲಸಿಕೆ ತಂತ್ರಜ್ಞಾನ. ಇದು ನೂರು ವರ್ಷಗಳಿಂದಲೂ ಬಳಕೆಯಲ್ಲಿದೆ. ಈಗಲೂ ಪರಿಣಾಮಕಾರಿಯಾಗಿಯೇ ಉಳಿದಿದೆ. ಭಾರತ್ ಬಯೋಟೆಕ್‌ಕಂಪನಿಯ ಕೊವಾಕ್ಸಿನ್, ಸಿನೋವಾಕ್ ಕಂಪನಿಯ ಕೊರೊನಾವಾಕ್, ಸಿನೋಫಾರ್ಮ್‌ನ ಬಿಬಿಐಬಿಪಿ–ಕಾರ್–ಇವೆಲ್ಲವೂ ನಿಷ್ಕ್ರಿಯ ವೈರಸ್ ಲಸಿಕೆಗಳು.

ಎರಡನೇ ತಂತ್ರಜ್ಞಾನದ ಲಸಿಕೆಯಲ್ಲಿ ಒಂದು ನಿರುಪದ್ರವಿ ವೈರಸ್ ವಾಹಕವನ್ನು (ಅಡೆನೊವೈರಸ್ ವೆಕ್ಟರ್) ಬಳಸಲಾಗುತ್ತದೆ. ಕೋವಿಶೀಲ್ಡ್ (ಆಕ್ಸ್‌ಫರ್ಡ್–ಆಸ್ಟ್ರಾಜೆನೆಕಾ ತಯಾರಿಕೆ)), ಸ್ಪುಟ್ನಿಕ್ ವಿ (ಗಮಾಲೆಯಾ ಇನ್ಸ್ಟಿಟ್ಯೂಟ್) ಇವೆಲ್ಲವೂ ಅಡೆನೊವೈರಸ್ ವೆಕ್ಟರ್ ಲಸಿಕೆಗಳು.

ನಾವು ಮೂರನೇ ತಂತ್ರಜ್ಞಾನದ ಬಗ್ಗೆ – ಎಂಆರ್‌ಎನ್‌ಎ ಅಥವಾ ಪ್ರೋಟೀನ್ ತಂತ್ರಜ್ಞಾನಗಳ ಬಗ್ಗೆ ಇಲ್ಲಿ ಚರ್ಚಿಸುತ್ತಿಲ್ಲ. ಇವು ಹೊಸವು. ಆದ್ದರಿಂದ, ಇವುಗಳ ಬಗ್ಗೆ ನಿಖರವಾಗಿ ಹೇಳಲಾಗದು. ಆದರೆ, ನಿಷ್ಕ್ರಿಯ ವೈರಸ್ ಮತ್ತು ಅಡೆನೊವೈರಸ್ ವೆಕ್ಟರ್ ಲಸಿಕೆಗಳ ಉತ್ಪಾದನೆ ಸುಲಭದ್ದು. ಈ ತಂತ್ರಜ್ಞಾನಗಳ ಬಗ್ಗೆ ವಿಜ್ಞಾನಿಗಳ ನಡುವೆ ಭಿನ್ನಾಭಿಪ್ರಾಯವಿಲ್ಲ. ನಮ್ಮ ದೇಶದಲ್ಲಿ ಈ ತಂತ್ರಜ್ಞಾನಗಳ ಲಸಿಕೆಗಳ ಉತ್ಪಾದನಾ ಸಾಮರ್ಥ್ಯವು ಉನ್ನತವಾಗಿದೆ.

ಭಾರತದ ಲಸಿಕೆ ಇತಿಹಾಸ

ಭಾರತದಲ್ಲಿ ನಿಷ್ಕ್ರಿಯ ವೈರಸ್ ತಂತ್ರಜ್ಞಾನವು ಮುಂಬೈನ ಹಾಫ್ಕಿನ್ ಸಂಸ್ಥೆಯಲ್ಲಿ ಪ್ರಾರಂಭವಾಯಿತು. 1893ರಲ್ಲಿ, ಲಸಿಕೆಗಳ ಜನಕ ಲೂಯಿಸ್ ಪಾಶ್ಚರ್ ಅವರ ವಿದ್ಯಾರ್ಥಿಯಾದ ವಾಲ್ಡೆಮರ್ ಹಾಫ್ಕಿನ್ ಭಾರತದಲ್ಲಿ ಕಾಲರಾ ಸಮಸ್ಯೆಯನ್ನು ನಿಭಾಯಿಸುವ ಧ್ಯೇಯದೊಂದಿಗೆ ಭಾರತಕ್ಕೆ ಬಂದರು. ಒಂದು ಪ್ರಯೋಗಾಲಯವನ್ನು ಸ್ಥಾಪಿಸುವಂತೆ ಅವರನ್ನು ಕೋರಲಾಯಿತು. ಆಗ ಅವರು ಸ್ಥಾಪಿಸಿದ ಸಂಶೋಧನಾ ಸಂಸ್ಥೆಯನ್ನು 1925ರಲ್ಲಿ ಹಾಫ್ಕಿನ್ ಸಂಸ್ಥೆ ಎಂದು ಮರುನಾಮಕರಣ ಮಾಡಲಾಯಿತು. 1932ರಲ್ಲಿ ಸಾಹಿಬ್ ಸಿಂಗ್ ಸೊಖೆ ಈ ಸಂಸ್ಥೆಯ ಮೊದಲ ಭಾರತೀಯ ನಿರ್ದೇಶಕರಾದರು. ಅವರು ಇದನ್ನು ಒಂದು ಮುಂದುವರೆದ ಜೈವಿಕ ಔಷಧಿ ಕೇಂದ್ರವಾಗಿ ಮತ್ತು ಲಸಿಕೆ ತಯಾರಿಕಾ ಕೇಂದ್ರವಾಗಿ ಬೆಳೆಸಿದರು. ಈ ಸಂಸ್ಥೆಯ ನೆರವಿನಿಂದ 1975ರಲ್ಲಿ, ಜೀವ ಉಳಿಸುವ ಔಷಧಗಳು ಮತ್ತು ಲಸಿಕೆಗಳ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವ ಉದ್ದೇಶದಿಂದ ಮಹಾರಾಷ್ಟ್ರ ಸರ್ಕಾರವು ಹಾಫ್ಕಿನ್ ಬಯೋ ಫಾರ್ಮಾಸ್ಯೂಟಿಕಲ್ ಕಾರ್ಪೊರೇಷನ್ ಎಂಬ ಕಂಪನಿಯನ್ನು ಆರಂಭಿಸಿ ಔಷಧಿಗಳು ಮತ್ತು ಲಸಿಕೆಗಳ ಉತ್ಪಾದನೆಯ ಕಾರ್ಯವನ್ನು ವಹಿಸಿತು. ಜಾಗತಿಕವಾಗಿ ಲಸಿಕೆಗಳ ಅತಿದೊಡ್ಡ ಪೂರೈಕೆದಾರರಲ್ಲಿ ಈ ಸಂಸ್ಥೆಯೂ ಒಂದು. ಲಸಿಕೆಯ ಈ ನೆಲೆಯನ್ನು ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಬಳಸಿಕೊಂಡಿದೆ. ಉಂಡೂ ಹೋದ ಕೊಂಡೂ ಹೋದ ಎಂಬಂತೆ, ಹ್ಯಾಫ್ಕಿನ್ ಇನ್ಸ್ಟಿಟ್ಯೂಟ್‌ನಿಂದ ತಜ್ಞ–ವೈಜ್ಞಾನಿಕ ಸಿಬ್ಬಂದಿಯನ್ನೂ ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಕದ್ದೊಯ್ದಿದೆ. ಅವರಲ್ಲಿ ಮೂವರು ಅದರ ಆಡಳಿತ ಮಂಡಳಿಯ ಸದಸ್ಯ ಹುದ್ದೆಗೆ ನೇಮಕಗೊಂಡಿದ್ದಾರೆ.

ಸಮುದ್ರದ ನೆಂಟಸ್ತನ–ಉಪ್ಪಿಗೆ ಬಡತನ

ಭಾರತದಲ್ಲಿ ಲಸಿಕೆ ತಯಾರಿಕೆಗೆ ಸುಮಾರು 100 ವರ್ಷಗಳ ಇತಿಹಾಸವಿದೆ. ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕ ರೋಗ ಹರಡುವುದಕ್ಕಿಂತ ಮೊದಲು, ವಿಶ್ವದಲ್ಲಿ ಮಾರಾಟವಾಗುತ್ತಿದ್ದ ಲಸಿಕೆಗಳಲ್ಲಿ ಶೇಕಡಾ 60 ರಷ್ಟನ್ನು ಭಾರತ ಉತ್ಪಾದಿಸುತ್ತಿತ್ತು. 21 ಲಸಿಕೆ ತಯಾರಕರನ್ನು ಹೊಂದಿರುವ ಭಾರತದಲ್ಲಿ ಪರವಾನಗಿ ಪಡೆದ ಉತ್ಪಾದನಾ ಸಾಮರ್ಥ್ಯವು ವರ್ಷಕ್ಕೆ ಸುಮಾರು ಎಂಟು ನೂರು ಕೋಟಿ (8 ಬಿಲಿಯನ್) ಡೋಸ್‌ಗಳಷ್ಟಿದೆ. ಲಸಿಕೆ ತಯಾರಿಕೆಯಲ್ಲಿ ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡ ಭಾರತದ ದುರಂತವೆಂದರೆ, ಸಾರ್ವಜನಿಕ ವಲಯದ ಅಡಿಪಾಯದ ಮೇಲೆ ಬೆಳೆದು ನಿಂತ ಔಷದ–ಲಸಿಕೆ ವಲಯವು, ಖಾಸಗಿ ವಲಯವು ಸರ್ಕಾರದ ಒಲವಿಗೆ ಒಳಗಾದ ನಂತರ, ಸಾರ್ವಜನಿಕ ಔಷದ–ಲಸಿಕೆ ವಲಯವನ್ನು ವ್ಯವಸ್ಥಿತವಾಗಿ ನಾಶಪಡಿಸಿತು. ಹಾಗಾಗಿ, ಭಾರತದಲ್ಲಿ ಔಷದ–ಲಸಿಕೆ ತಯಾರಿಸುವ ಏಳು ಸಾರ್ವಜನಿಕ ವಲಯದ ಘಟಕಗಳಿದ್ದರೂ ಸಹ, ನಮ್ಮ ಸಾರ್ವಜನಿಕ ಆರೋಗ್ಯಕ್ಕಾಗಿ ಲಸಿಕೆಗಳನ್ನು ಖಾಸಗಿ ವಲಯದಿಂದ ಖರೀದಿಸಲಾಗುತ್ತಿದೆ.

ಅತಿದೊಡ್ಡ ಪ್ರಮಾದ

ವಾರ್ಷಿಕ ಸುಮಾರು ಎಂಟು ನೂರು ಕೋಟಿ ಡೋಸ್ ಲಸಿಕೆಗಳ ಉತ್ಪಾದನಾ ಸಾಮರ್ಥ್ಯ ಹೊಂದಿರುವ ಭಾರತವು ತಿಂಗಳಿಗೆ ಕೇವಲ 60–70 ದಶಲಕ್ಷ ಡೋಸ್‌ಗಳನ್ನು ಮಾತ್ರ ಉತ್ಪಾದಿಸುತ್ತಿದೆ, ಏಕೆ? ಮೋದಿ ಸರ್ಕಾರವು ಮಾಡಿದ ಅತಿ ದೊಡ್ಡ ತಪ್ಪು ಗ್ರಹಿಕೆಯೇ ಉತ್ಪಾದನೆಯ ಈ ಇಳಿಕೆಗೆ ಕಾರಣ. ಕೊರೊನಾ ಸಾಂಕ್ರಾಮಿಕವನ್ನು ಸೋಲಿಸಿದ ಭ್ರಮೆಯಲ್ಲಿದ್ದ ಮೋದಿ ಸರ್ಕಾರವು ಜನರಿಗೆ ಲಸಿಕೆ ಹಾಕಲು ಸಾಕಷ್ಟು ಸಮಯ ಸಿಗುತ್ತದೆ ಎಂದು ಭಾವಿಸಿತ್ತು. ಸೀರಮ್ ಇನ್ಸ್ಟಿಟ್ಯೂಟ್ ತಿಂಗಳಿಗೆ ಉತ್ಪಾದಿಸುವ 70–100 ಮಿಲಿಯನ್ ಡೋಸ್‌ಗಳು ಮತ್ತು ಭಾರತ್ ಬಯೋಟೆಕ್ ಉತ್ಪಾದಿಸುವ ಮತ್ತಷ್ಟು 12.5 ಮಿಲಿಯನ್ ಡೋಸ್‌ಗಳು ಸಾಕಾಗುತ್ತವೆ ಎಂದು ಅದು ನಂಬಿತ್ತು.

ಬಾಯಂದಾಜಿನ ಲೆಕ್ಕಾಚಾರದ ಪ್ರಕಾರ, ಈಗ ಲಸಿಕೆ ಹಾಕುತ್ತಿರುವ ಪ್ರಮಾಣದಲ್ಲಿ ಭಾರತವು ಉದ್ದೇಶಿತ ಜನರಿಗೆ ಲಸಿಕೆ ಹಾಕಲು ಅಗತ್ಯವಿರುವ ಎರಡು ನೂರು ಕೋಟಿ ಡೋಸ್‌ಗಳನ್ನು ಉತ್ಪಾದಿಸಲು ಸುಮಾರು ಎರಡೂವರೆ ವರ್ಷಗಳು ಬೇಕಾಗುತ್ತದೆ. ಈ ಆಮೆ ವೇಗದ ಲಸಿಕೆ ಕಾರ್ಯಕ್ರಮದಿಂದಾಗಿ ಭಾರತವು ಮೂರನೇ ಅಲೆಗೆ ಒಡ್ಡಿಕೊಳ್ಳುವುದು ಮಾತ್ರವಲ್ಲದೆ, ಜಾಗತಿಕ ಲಸಿಕೆ ಮಾರುಕಟ್ಟೆಯಿಂದ ಸಂಪೂರ್ಣವಾಗಿ ಹೊರಗುಳಿಯುತ್ತದೆ.

ಲಸಿಕೆ ಉತ್ಪಾದನೆಯನ್ನು ಭಾರತವು ತ್ವರಿತವಾಗಿ ಹೆಚ್ಚಿಸಲು ಬಯಸಿದರೆ, ಬೇರೆ ಏನು ಮಾಡಬಹುದಿತ್ತು? ಚೀನಾ ಮತ್ತು ಅಮೇರಿಕಾ ದೇಶಗಳು ಕೈಗೊಂಡ ಕ್ರಮಗಳನ್ನು ಅನುಸರಿಸಬಹುದಿತ್ತು. ಅಮೇರಿಕಾ ಎಂಆರ್‌ಎನ್‌ಎ ಅಥವಾ ಪ್ರೋಟೀನ್ ತಂತ್ರಜ್ಞಾನದ ಮಾರ್ಗವನ್ನು ಆಯ್ಕೆ ಮಾಡಿಕೊಂಡಿತು. ಚೀನಾ ಇನ್ನೊಂದು ಮಾರ್ಗವನ್ನು ಆಯ್ಕೆ ಮಾಡಿತು. ಕೊರೊನಾ ಸಾಂಕ್ರಾಮಿಕ ಹರಡುವ ಮೊದಲು ಚೀನಾದ ಲಸಿಕೆ ಉತ್ಪಾದನಾ ಸಾಮರ್ಥ್ಯವು ಭಾರತಕ್ಕಿಂತ ಕೆಳಗಿತ್ತು. ತನ್ನ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕ ಎರಡು ನಿಷ್ಕ್ರಿಯ ವೈರಸ್ ಲಸಿಕೆಗಳನ್ನು ಚೀನಾ ಅಭಿವೃದ್ಧಿಪಡಿಸಿತು. ಅಸ್ತಿತ್ವದಲ್ಲಿದ್ದ ಉತ್ಪಾದನಾ ಸೌಲಭ್ಯಗಳನ್ನು ಹೆಚ್ಚಿಸಿತು ಮತ್ತು ಹೊಸ ಘಟಕಗಳನ್ನು ಸ್ಥಾಪಿಸಿತು. ಈ ಎರಡೂ ತಂತ್ರಜ್ಞಾನದ ಲಸಿಕೆಗಳನ್ನು ಉತ್ಪಾದಿಸಲು ಹಲವಾರು ಘಟಕಗಳಿಗೆ ಪರವಾನಗಿ ನೀಡಿತು. ಜೊತೆಗೆ, ಸಿನೋಫಾರ್ಮ್ ಮತ್ತು ಸಿನೋವಾಕ್ ಕಂಪೆನಿಗಳು ತಮ್ಮ ಲಸಿಕೆಗಳನ್ನು ಉತ್ಪಾದಿಸಲು ವಿಶ್ವದಾದ್ಯಂತ ಅನೇಕ ತಯಾರಕರಿಗೂ ಪರವಾನಗಿ ನೀಡಿದವು.

ತಪ್ಪು ಲೆಕ್ಕಾಚಾರ

ಮೋದಿ ಸರ್ಕಾರವು ಸಾಂಕ್ರಾಮಿಕ ರೋಗವನ್ನು ಸೋಲಿಸಿದ್ದಾಗಿ ನಂಬಿತು. ಆದ್ದರಿಂದ, ಲಸಿಕೆ ಕಾರ್ಯಕ್ರಮವು ನಿಧಾನಗೊಂಡರೆ ಸಮಸ್ಯೆಯಾಗುವುದಿಲ್ಲ ಎಂದು ಬಗೆಯಿತು. ಲಸಿಕೆಗಳ ದೇಶೀಯ ಉತ್ಪಾದನಾ ಸಾಮರ್ಥ್ಯ ಹೊಂದಿದ ದೇಶಗಳು ತೆಗೆದುಕೊಂಡ ಕ್ರಮಗಳನ್ನು ಅದು ಏಕೆ ತೆಗೆದುಕೊಳ್ಳಲಿಲ್ಲ ಎಂಬುದಕ್ಕೆ ಬೇರೆ ವಿವರಣೆ ಬೇಕಿಲ್ಲ: ಅ) ಇಂತಿಷ್ಟು ಲಸಿಕೆಗಳು ಬೇಕೆಂಬ ಕೋರಿಕೆಯನ್ನು ಮುಂಚಿತವಾಗಿ ಸಲ್ಲಿಸಲಿಲ್ಲ, ಆ) ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸಲು ಸಹಾಯವಾಗುವಂತೆ ಲಸಿಕೆ ತಯಾರಕರಿಗೆ ಬ್ಯಾಂಕ್ ಸಾಲ ಕೊಡಿಸಲಿಲ್ಲ, ಇ) ಅಸ್ತಿತ್ವದಲ್ಲಿರುವ ಸಾರ್ವಜನಿಕ ವಲಯದ ಔಷಧ–ಲಸಿಕೆ ತಯಾರಿಸುವ ಘಟಕಗಳಲ್ಲಿ ಬೊಕ್ಕಸದಿಂದ ಹಣ ಹೂಡಿಕೆ ಮಾಡಲಿಲ್ಲ, ಈ) ದೇಶೀಯವಾಗಿ ಅಭಿವೃದ್ಧಿಪಡಿಸಿದ ಕೊವಾಕ್ಸಿನ್ ತಂತ್ರಜ್ಞಾನವನ್ನು ಇತರ ಲಸಿಕೆ ತಯಾರಕರೊಂದಿಗೆ ಹಂಚಿಕೊಂಡು ಉತ್ಪಾದನೆಯನ್ನು ಹೆಚ್ಚಿಸಬಹುದಿತ್ತು. ಬದಲಾಗಿ, ಸರ್ಕಾರವು ಜನವರಿಯಲ್ಲಿ ಸೀರಮ್ ಇನ್ಸ್ಟಿಟ್ಯೂಟ್‌ನೊಂದಿಗೆ ಕೇವಲ 11 ಮಿಲಿಯನ್ ಡೋಸ್‌ಗಳಿಗೆ ಆರ್ಡರ್ ಮಾಡಿತು. ಮಾರ್ಚ್ ತಿಂಗಳ ಕೊನೆಯ ಭಾಗದಲ್ಲಿ ಎರಡನೇ ಅಲೆ ಅಪ್ಪಳಿಸಲು

ಪುಟ 14 ನೋಡಿ

ಲಸಿಕೆ ಹಾಕಲಾಗಿಲ್ಲ ಏಕೆ?

ಪುಟ 13 ರಿಂದ

ಆರಂಭವಾದಾಗ ಮತ್ತು ರೋಗಿಗಳ ಸಂಖ್ಯೆ ವೇಗವಾಗಿ ಏರುತ್ತಿದ್ದಾಗ ಹೆಚ್ಚುವರಿ 120 ಮಿಲಿಯನ್ ಡೋಸ್‌ಗಳು ಲಭ್ಯವಾದವು. ಸಾರ್ವಜನಿಕ ಕಟು ಟೀಕೆಯ ನಂತರ, ಸೀರಮ್ ಇನ್ಸ್ಟಿಟ್ಯೂಟ್ ಮತ್ತು ಭಾರತ್ ಬಯೋಟೆಕ್ ಕಂಪನಿಗಳಿಗೆ ಮತ್ತಷ್ಟು ಲಸಿಕೆಗಳನ್ನು ಒದಗಿಸುವಂತೆ ಕೋರಿಕೆ ಸಲ್ಲಿಸಿರುವುದರ ಜೊತೆಗೆ ಅವುಗಳಿಗೆ ತಮ್ಮ ಉತ್ಪಾದನೆಯನ್ನು ವಿಸ್ತರಿಸಲು ಸ್ವಲ್ಪ ಹಣವನ್ನೂ ಸರ್ಕಾರ ಕೊಟ್ಟಿದೆ.

ಎಷ್ಟು ಹಣ ಬೇಕು

ಉತ್ಪಾದನೆಯನ್ನು ತ್ವರಿತವಾಗಿ ಹೆಚ್ಚಿಸಲು ಮೋದಿ ಸರ್ಕಾರಕ್ಕೆ ಎಷ್ಟು ಹಣ ಖರ್ಚಾಗುತ್ತಿತ್ತು? ಸುಮಾರು 3,000 ಕೋಟಿ ರೂ.ಗಳ ಹೂಡಿಕೆಯೊಂದಿಗೆ, ಭಾರತವು ಲಸಿಕೆ ಉತ್ಪಾದನೆಯ ಸಾಮರ್ಥ್ಯವನ್ನು ನೂರು ಕೋಟಿ ಅಧಿಕ ಡೋಸ್‌ಗಳಿಗೆ ಹೆಚ್ಚಿಸಬಹುದಿತ್ತು. 6,000 ಕೋಟಿ ರೂ.ಗಳೊಂದಿಗೆ, ಎರಡು ನೂರು ಕೋಟಿ ಅಧಿಕ ಡೋಸ್‌ಗಳಿಗೆ ಹೆಚ್ಚಿಸಬಹುದಿತ್ತು. 9,000 ಕೋಟಿ ರೂ.ಗಳೊಂದಿಗೆ, ಮೂರು ನೂರು ಕೋಟಿ ಅಧಿಕ ಡೋಸ್‌ಗಳಿಗೆ ಹೆಚ್ಚಿಸಬಹುದಿತ್ತು. ಆಗ, ನಾವು ನಮ್ಮ ದೇಶದ ಎಲ್ಲರಿಗೂ 12 ತಿಂಗಳಲ್ಲಿ ಲಸಿಕೆ ಹಾಕುತ್ತಿದ್ದೆವು. ಅಷ್ಟೇ ಅಲ್ಲ, ಪ್ರಮುಖ ಜಾಗತಿಕ ಲಸಿಕೆ ಪೂರೈಕೆದಾರರೂ ಆಗುತ್ತಿದ್ದೆವು. ಲಸಿಕೆ ಪೂರೈಸುವುದಾಗಿ ಮುಂಗಡ ಹಣ ಪಡೆದು, ಒಪ್ಪಂದಗಳನ್ನು ಮುರಿದು ಮರ್ಯಾದೆ ಕಳೆದುಕೊಳ್ಳುವ ಪರಿಸ್ಥಿತಿಗಳನ್ನು ತಪ್ಪಿಸಿಕೊಳ್ಳಬಹುದಿತ್ತು. ವಿಶ್ವ ಆರೋಗ್ಯ ಸಂಸ್ಥೆಯ ಕೋವಾಕ್ಸ್ ಕಾರ್ಯಕ್ರಮದ ಅಡಿಯಲ್ಲಿ ಲಸಿಕೆಗಳ ಪೂರೈಕೆಯ ಗುತ್ತಿಗೆ ಕೊಟ್ಟ 92 ದೇಶಗಳಿಗೆ ನಾವು ಮಾಡಿರುವುದು ಇದನ್ನೇ.

ವಚನ ಭಂಗ

ಲಸಿಕೆಗಳ ಪೂರೈಕೆಗಾಗಿ ಹೊರ ದೇಶಗಳಿಂದ ಗುತ್ತಿಗೆ ಹಿಡಿಯುವುದು ಸರಿಯೇ. ಆದರೆ, ಹಿಡಿದ ಗುತ್ತಿಗೆಯನ್ನು ನಿಭಾಯಿಸುವಷ್ಟು ಲಸಿಕೆ ತಯಾರಕರು ನಮ್ಮಲ್ಲಿ ಇದ್ದಾರೆಯೇ? ಜಾಗತಿಕ ಉತ್ಪಾದನಾ ಕಂಪನಿಗಳೊಂದಿಗೆ ಸಹಯೋಗದ ಒಪ್ಪಂದ ಮಾಡಿಕೊಂಡಿರುವ ನಮ್ಮ ಹಾಲೀ ಕಂಪನಿಗಳ ಪಟ್ಟಿಯು ನಮ್ಮ ಸ್ಥಳೀಯ ಸಾಮರ್ಥ್ಯವು ಬಲವಾಗಿಯೇ ಇದೆ ಎಂಬುದನ್ನು ತೋರಿಸುತ್ತದೆ. ಈ ಎಲ್ಲಾ ಒಪ್ಪಂದಗಳೂ ಹೆಚ್ಚು ಸಂಕೀರ್ಣವಾದ ಅಡೆನೊವೈರಸ್ ವೆಕ್ಟರ್ ಲಸಿಕೆ ಮಾರ್ಗದ ಉತ್ಪಾದನೆಗೆ ಸಂಬಂಧಿಸುತ್ತವೆ. ನಮ್ಮ ಐಸಿಎಂಆರ್–ಎನ್‌ಐವಿ ಅಭಿವೃದ್ಧಿಪಡಿಸಿದ ನಿಷ್ಕ್ರಿಯ ವೈರಸ್ ಲಸಿಕೆಗಳನ್ನು ಸುಲಭವಾಗಿ ತಯಾರಿಸಬಲ್ಲ ಅನೇಕ ಕಂಪನಿಗಳಿವೆ. ಅವುಗಳನ್ನು ಬಳಸಿಕೊಳ್ಳುವ ಯೋಜನೆ ಮತ್ತು ಅವರಿಗೆ ಆರ್ಥಿಕ ಬೆಂಬಲ ಕೊಡುವ ಅಗತ್ಯವಿತ್ತು.


ಹಾಗೆ ಸುಮ್ಮನೇ ಒಂದು ಲೆಕ್ಕ: ಎರಡು ರಫೇಲ್ ವಿಮಾನಗಳನ್ನು ಕೊಳ್ಳುವ ಹಣವು ಸುಮಾರು ಒಂದು ನೂರು ಕೋಟಿ ಡೋಸ್ ಲಸಿಕೆಗಳಿಗೆ ಸಮ; ನಾಲ್ಕು ರಫೇಲ್ ವಿಮಾನಗಳು ಇನ್ನೂರು ಕೋಟಿ ಡೋಸ್ ಲಸಿಕೆಗಳಿಗೆ ಸಮ; ಸೆಂಟ್ರಲ್ ವಿಸ್ಟಾ ಯೋಜನೆಯನ್ನು ಎರಡು ವರ್ಷಗಳ ಕಾಲ ಮುಂದೂಡಿದರೆ ತಕ್ಷಣ ಒದಗುತ್ತಿದ್ದ 10,000 ಕೋಟಿ ರೂ ಹಣವು ಮುನ್ನೂರು ಕೋಟಿ ಡೋಸ್ ಲಸಿಕೆಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ನೀಡುತ್ತಿತ್ತು! ರಫೇಲ್ ವಿಮಾನ ಖರೀದಿ ಅಥವಾ ಸೆಂಟ್ರಲ್ ವಿಸ್ಟಾ ಯೋಜನೆಯನ್ನು ಮುಂದೂಡುವ ಅಗತ್ಯವೇ ಇಲ್ಲ. ಈ ವರ್ಷದ ಬಜೆಟ್‌ನಲ್ಲಿ ಹಣಕಾಸು ಸಚಿವರು ಕೋವಿಡ್–19 ಲಸಿಕೆಗಳಿಗಾಗಿ 35,000 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದರು. ಈ ಮೀಸಲಿಟ್ಟ ಹಣದ ಮೂರನೇ ಒಂದು ಭಾಗದಲ್ಲಿ ಎಲ್ಲರಿಗೂ ಲಸಿಕೆ ಹಾಕಬಹುದಿತ್ತು ಮತ್ತು ಭಾರತವು ವಿಶ್ವದ ಲಸಿಕೆ ಔಷಧಾಲಯ ಎಂಬ ಬಿರುದನ್ನು ಸಮರ್ಥಿಸಿಕೊಳ್ಳಬಹುದಿತ್ತು. ಬದಲಿಗೆ, ನಾವು ನಮ್ಮ ಜನರಿಗೆ ಮೋಸ ಮಾಡಿದ್ದೇವೆ ಮಾತ್ರವಲ್ಲ, ಈಗ 92 ದೇಶಗಳಿಗೆ ಲಸಿಕೆಗಳನ್ನು ಪೂರೈಸದ ಲೋಪಕ್ಕಾಗಿ ಕಟಕಟೆಯಲ್ಲಿ ನಿಂತಿದ್ದೇವೆ. ಮೋದಿ ಅವರ ಆತ್ಮನಿರ್ಭರ್ ಭಾರತ್ ತಂದಿಟ್ಟಿರುವ ಫಲವೆಂದರೆ: ನಮ್ಮ ಸ್ಥಳೀಯ ಸಾಮರ್ಥ್ಯದ ನಾಶ ಮತ್ತು ಕೈ ಹಿಡಿಯಬೇಕಾದ ಸಮಯದಲ್ಲಿ ಜನರನ್ನು ಕೈಬಿಟ್ಟಿರುವುದು.

ಐ.ಟಿ.ಕಾಯ್ದೆಯ ಅಪಾಯಕಾರಿ,ಪ್ರತಿಗಾಮಿ ನಿಯಮಗಳನ್ನು ತೆಗೆದು ಹಾಕಬೇಕು

ಪುಟ 2 ರಿಂದ

ಮುಖಂಡರುಗಳ ಟ್ವೀಟ್‌ಗಳಿಗೆ 'ಕೈಚಳಕದ ಮಾಧ್ಯಮ' ಎಂಬ ಪಟ್ಟಿ ಹಚ್ಚಿರುವುದಕ್ಕಾಗಿ ಟ್ವಿಟರ್ ವೇದಿಕೆಯನ್ನು ಬೆದರಿಸಲು ದಿಲ್ಲಿ ಪೋಲೀಸನ್ನು ಬಳಸುತ್ತಿದೆ. ಈ ರೀತಿಯಲ್ಲಿ ಬಿಜೆಪಿ ಸರಕಾರ ಐಟಿ ಮಂತ್ರಾಲಯವನ್ನು ಪಕ್ಷಪಾತದಿಂದ ಬಳಸುವುದನ್ನು ಮತ್ತು ಟ್ವಿಟರ್‌ನ ಕಚೇರಿಗಳ ಮೇಲೆ ಪೋಲೀಸ್ ದಾಳಿಗಳನ್ನು ನಡೆಸುವುದನ್ನು ಹೆದರಿಸುವ ಲಜ್ಜೆಗೆಟ್ಟ ಕೃತ್ಯಗಳು ಎಂದು ಸಿಪಿಐ(ಎಂ) ಖಂಡಿಸಿದೆ.

ಜನಗಳ ಸಂದೇಶಗಳನ್ನು ಸರಕಾರಕ್ಕೆ ಲಭ್ಯಗೊಳಿಸಲು ಭದ್ರತಾ ಪ್ರೊಟೊಕೋಲ್‌ಗಳನ್ನು ಶಿಥಿಲಗೊಳಿಸುವುದು ಒಂದು ಅಪಾಯಕಾರೀ ಮತ್ತು ಪ್ರತಿಗಾಮೀ ಕ್ರಮ. ಇದು ಒಂದು ಕಾವಲುಕೋರ ಪ್ರಭುತ್ವದ ಸಂರಚನೆಯನ್ನು ಗಟ್ಟಿಗೊಳಿಸುತ್ತದೆ, ಈ ಮೂಲಕ ನಾಗರಿಕರ ಖಾಸಗಿತ್ವದ ಹಕ್ಕನ್ನು ಉಲ್ಲಂಘಿಸುತ್ತದೆ, ಈ ಉಪಬಂಧಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಎಂದಿರುವ ಪೊಲಿಟ್‌ಬ್ಯುರೊ ಆಗ್ರಹಿಸಿದೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್



ಹೊಸ ಸನ್ನಿವೇಶದಲ್ಲಿ ಮುಂದುವರಿದ ಕಾರ್ಮಿಕ ವರ್ಗದ ಹೋರಾಟಗಳು: 1980-84

ಪುಟ 11 ರಿಂದ

ಭಾರತ ಸಮಾವೇಶ ಜನವರಿ 20, 1984 ರಂದು ದೆಹಲಿಯಲ್ಲಿ ನಡೆದು. ಎಲ್ಲಾ ರೋಗಗ್ರಸ್ತ ಘಟಕಗಳನ್ನು ಸರ್ಕಾರವು ಸ್ವಾಧೀನಪಡಿಸಿಕೊಳ್ಳಬೇಕು ಮತ್ತು ಆಡಳಿತ ನಿರ್ವಹಣೆಯಲ್ಲಿ ಕಾರ್ಮಿಕರ ನಿಜವಾದ ಪಾಲ್ಗೊಳ್ಳುವಿಕೆಯ ಮೂಲಕ ಅವುಗಳನ್ನು ನಡೆಸಬೇಕು, ಎಲ್ಲಾ ಮುಚ್ಚಿದ ಕಾರ್ಖಾನೆಗಳನ್ನು ತಕ್ಷಣವೇ ತೆರೆಯಬೇಕು ಮತ್ತು ಮುಷ್ಕರಕ್ಕೆ ಸಮನಾಗಿ ಬೀಗಮುದ್ರೆಗಳನ್ನು ಪರಿಗಣಿಸಬಾರದು, ಎಲ್ಲಾ ರಿಟ್ರೆಂಚಮೆಂಟ್‌ಗಳನ್ನು ನಿಷೇಧಿಸಬೇಕು, ಲೇ–ಆಫ್ ನಿಂದ ಕೆಲಸ ಕಳೆದುಕೊಂಡವರಿಗೆ ಪೂರ್ಣ ವೇತನವನ್ನು ಪಾವತಿಸಬೇಕು ಎಂದು ಒತ್ತಾಯಿಸಿತು. ಸಮಾವೇಶದಲ್ಲಿ ಎತ್ತಿದ ಬೇಡಿಕೆಗಳಿಗಾಗಿ ಪ್ರಚಾರ ಮಾಡಲು 1984 ರ ಮಾರ್ಚ್ 19 ರಿಂದ ಮಾರ್ಚ್ 25 ರವರೆಗೆ ಸಪ್ತಾಹವನ್ನು ಆಚರಿಸಲು ಕಾರ್ಮಿಕರಿಗೆ ಕರೆ ನೀಡಿತು..

ಸರ್ಕಾರೀ ಮತ್ತು ಸಾರ್ವಜನಿಕ ವಲಯದ ನೌಕರರ ಸಮರಶೀಲ ಹೋರಾಟಗಳ ಪ್ರವಾಹ

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಕರೆಯ ಮೇರೆಗೆ 1984 ರ ಸೆಪ್ಟೆಂಬರ್ 4 ರಂದು ಒಂದು ದಿನದ ದೇಶವ್ಯಾಪಿ ಮುಷ್ಕರವನ್ನು ರಾಜ್ಯ ಸರ್ಕಾರಗಳ ಸುಮಾರು ಅರವತ್ತು ಲಕ್ಷ ಜನರು ನಡೆಸಿದರು. ಮುಷ್ಕರವು ವಿಶೇಷವಾಗಿ ಪಶ್ಚಿಮ ಬಂಗಾಳದ, ಮಹಾರಾಷ್ಟ್ರ, ಬಿಹಾರ, ಕರ್ನಾಟಕ ಮತ್ತು ತ್ರಿಪುರಗಳಲ್ಲಿ ಸಂಪೂರ್ಣವಾಗಿತ್ತು.

ಅಖಿಲ ಭಾರತ ಅಂಚೆ ನೌಕರರ ಒಕ್ಕೂಟ–ಪೋಸ್ಟ್‌ಮ್ಯಾನ್ ನಾಲ್ಕನೇ ದರ್ಜೆ ಮತ್ತು ಇಡಿಎಗಳ ಕರೆಯ ಮೇರೆಗೆ "ಸಮಾನ ಕೆಲಸಕ್ಕೆ ಸಮಾನ ವೇತನ" ತತ್ವದ ಮೇಲೆ ಇಲಾಖೇತರ ನೌಕರರಿಗೂ ಒಂದೇ ರೀತಿಯ ಕೆಲಸಕ್ಕಾಗಿ ಸಾಮಾನ್ಯ ಪಿ & ಟಿ ಉದ್ಯೋಗಿಗಳೊಂದಿಗೆ ವೇತನದ ಸಮಾನತೆ ಮತ್ತು ಡಿಎ ಮತ್ತು ಮಧ್ಯಂತರ ಪರಿಹಾರದ ಪಾವತಿ ಒಳಗೊಂಡಿದ್ದ ಹಲವಾರು ದೀರ್ಘಾವಧಿಯ ಬೇಡಿಕೆಗಳಿಗೆ ಒತ್ತಾಯಿಸಿ ಮೂರು ಲಕ್ಷ ಇಲಾಖೇತರ ಮತ್ತು ಅರವತ್ತು ಸಾವಿರ ಸಾಮಾನ್ಯ ಅಂಚೆ ನೌಕರರು 1984 ರ ಸೆಪ್ಟೆಂಬರ್ 19 ರಂದು ಒಂದು ದಿನದ ಮುಷ್ಕರವನ್ನು ನಡೆಸಿದರು.

ವೇತನ ಆಯೋಗವನ್ನು ಸ್ಥಾಪಿಸಲು ಒತ್ತಾಯಿಸಿ ಸುಮಾರು 25.000 ರೈಲ್ವೆ ನೌಕರರು ಆಗಸ್ಟ್ 19, 1983 ರಂದು ದೆಹಲಿಯ ಬೋಟ್ ಕ್ಲಬ್ ಲಾನ್‌ನಲ್ಲಿ ಧರಣಿ ನಡೆಸಿದರು.

ಹೆಚ್ಚಿದ ಕೆಲಸದ ಹೊರೆ, ಗಣಕೀಕರಣ ಮತ್ತು ಯಾಂತ್ರೀಕರಣದ ವಿರುದ್ಧ ಅಖಿಲ ಭಾರತ ರಿಸರ್ವ್ ಬ್ಯಾಂಕ್ ನೌಕರರ ಸಂಘದ ಕರೆಯ ಮೇರೆಗೆ 1983 ರ ಏಪ್ರಿಲ್ 12 ರಂದು ದೇಶಾದ್ಯಂತ ಹದಿನೆಂಟು ಸಾವಿರ ರಿಸರ್ವ್ ಬ್ಯಾಂಕ್ ನೌಕರರು ಒಂದು ದಿನದ ಮುಷ್ಕರವನ್ನು ನಡೆಸಿದರು.

1983 ರ ಸೆಪ್ಟೆಂಬರ್ 6 ರಂದು ಬ್ಯಾಂಕ್ ನೌಕರರ ಒಕ್ಕೂಟಗಳ ಕರೆಯ ಮೇರೆಗೆ ಸುಮಾರು ಎಂಭತ್ತೈದು ಸಾವಿರ ಬ್ಯಾಂಕ್ ನೌಕರರ ಒಂದು ದಿನದ ಮುಷ್ಕರ ನಡೆಯಿತು. ಜೀವ ವಿಮಾ ನಿಗಮವು ವೇತನವನ್ನು ಕಡಿತಗೊಳಿಸುವ ಮತ್ತು ಡಿಎ ಅನ್ನು ರೂ. ಪ್ರತಿ ಪಾಯಿಂಟ್‌ಗೆ 1.20 ರೂ.ಗೆ ಸೀಮಿತಗೊಳಿಸಿದ್ದರ ವಿರುದ್ಧ, ನಿಗಮದ ನಲವತ್ತೈದು ಸಾವಿರ ಮೂರು ಮತ್ತು ನಾಲ್ಕನೆ ದರ್ಜೆ ನೌಕರರು 1984 ರ ಮೇ 8 ರಂದು ಒಂದು ದಿನದ ಮುಷ್ಕರವನ್ನು ಆಚರಿಸಿದರು.

ಇಂಡಿಯನ್ ಏರ್‌ಲೈನ್ಸ್‌ನಲ್ಲಿ 8 ಕ್ಯಾಬಿನ್ ಕ್ರ್ಯೂಗಳನ್ನು ಅಮಾನತುಗೊಳಿಸಿದ್ದರ ವಿರುದ್ಧ, ಏರ್ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್ 7 ಮೇ 1984 ರಂದು ಹೋರಾಟ ನಡೆಸಿತು.

ರಾಷ್ಟ್ರೀಯ ಕಲ್ಲಿದ್ದಲು ಉದ್ದಿಮೆಯಲ್ಲಿ ಹೋರಾಟ

ಗಣಿಗಳಲ್ಲಿನ ಸುರಕ್ಷತೆಯನ್ನು ನಿರ್ದಾಕ್ಷಿಣ್ಯವಾಗಿ ನಿರ್ಲಕ್ಷಿಸಲಾಗಿದ್ದು, ಇದರ ಪರಿಣಾಮವಾಗಿ ಮಾರಣಾಂತಿಕ ಅಪಘಾತಗಳು ಮತ್ತು ಅನೇಕ ಗಣಿಗಾರರಿಗೆ ಸಾವು ಮತ್ತು ಗಾಯಗಳಾಗುತ್ತಿದ್ದವು.

ಸಿಐಎಲ್ ಪ್ರಾಧಿಕಾರವು 1984 ರ ಅಕ್ಟೋಬರ್ 8 ರಂದು ಜಂಟಿ ದ್ವಿಪಕ್ಷೀಯ ಸಮಿತಿಯ ಸಭೆಯನ್ನು ಕರೆಯಿತು, ಆದರೆ ಅದೇ ಸಮಯದಲ್ಲಿ ಎಸ್ಮಾ ಅಡಿಯಲ್ಲಿ ಕಲ್ಲಿದ್ದಲು ಕೈಗಾರಿಕೆಯಲ್ಲಿ ಮುಷ್ಕರವನ್ನು ನಿಷೇಧಿಸುವ ಆದೇಶಗಳನ್ನು ಹೊರಡಿಸಿತು. ಏತನ್ಮಧ್ಯೆ ನ್ಯಾಯಾಲಯದ ಈ ನಿಟ್ಟಿನ ಆದೇಶ ಕಾರಣದಿಂದಾಗಿ ಒಂದು ದಿನದ ಮುಷ್ಕರಕ್ಕೆ 8 ದಿನಗಳ ವೇತನವನ್ನು ಕಡಿತಗೊಳಿಸಲಾಯಿತು.

ಆದಾಗ್ಯೂ, ಮೂರನೇ ರಾಷ್ಟ್ರೀಯ ಕಲ್ಲಿದ್ದಲು ವೇತನ ಒಪ್ಪಂದಗಳು ಮತ್ತು ಇತರ ಬೇಡಿಕೆಗಳನ್ನು ಅನುಷ್ಠಾನಗೊಳಿಸದಿರುವುದನ್ನು ವಿರೋಧಿಸಿ ಕಲ್ಲಿದ್ದಲು ಗಣಿಗಾರರು 4 ಜೂನ್ 1984 ಮತ್ತು 5 ಜೂನ್ 1984 ರಂದು 48 ಗಂಟೆಗಳ ಮುಷ್ಕರವನ್ನು ನಡೆಸಿದ್ದನ್ನು ಗಮನಿಸಬೇಕು.

ಹೊಸ ಬೆಲೆ ಸೂಚ್ಯಾಂಕ ಸರಣಿಯ ಪರಿಚಯಕ್ಕೆ ಕಾರ್ಮಿಕ ಸಂಘಗಳ ವಿರೋಧ

ಏತನ್ಮಧ್ಯೆ, ಹೊಸ ಬೆಲೆ ಸೂಚ್ಯಂಕ ಸರಣಿಯನ್ನು ಪರಿಚಯಿಸುವ ಪ್ರಶ್ನೆಯಲ್ಲಿ ಸರ್ಕಾರ ಮತ್ತು ಕಾರ್ಮಿಕ ಸಂಘಗಳ ನಡುವೆ ವಿವಾದ ಉಂಟಾಯಿತು.

ರಥ್ ಸಮಿತಿಯು ಸರ್ವಾನುಮತದಿಂದ ಶಿಫಾರಸು ಮಾಡಿದಂತೆ 1960 ರ ಸರಣಿಯನ್ನು ಸರಿಪಡಿಸದಿದ್ದಕ್ಕಾಗಿ, ಮತ್ತು ಸೂಚ್ಯಂಕ ತಯಾರಿಕೆಯ ಎಲ್ಲಾ ಹಂತಗಳಲ್ಲಿ ಕಾರ್ಮಿಕರ ಪ್ರತಿನಿಧಿಗಳನ್ನು ಒಳಗೊಳಿಸಲು, ಸೀಲ್ ಸಮಿತಿಯ ವರದಿಯನ್ನು ಅಂಗೀಕರಿಸುವುದು ಕಾರ್ಮಿಕರ ವೇತನವನ್ನು ಕುಂಠಿತಗೊಳಿಸಬಹುದು ಎಂದು ಟ್ರೇಡ್ ಯೂನಿಯನ್ ಪ್ರತಿನಿಧಿಗಳು ಸರ್ವಾನುಮತದಿಂದ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದರು.

ಕಾರ್ಮಿಕ ಸಂಘಗಳ ಸದಸ್ಯತ್ವವನ್ನು ಪರಿಶೀಲಿಸುವ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ ವಿವಾದ

ಐಎನ್‌ಟಿಯುಸಿಯೇತರ ಕೇಂದ್ರ ಕಾರ್ಮಿಕ ಸಂಘಗಳು ರಹಸ್ಯ ಮತದಾನವನ್ನು ಪ್ರತಿ ಸಂಘದ ಬಲವನ್ನು ನಿರ್ಧರಿಸುವ ಏಕೈಕ ವೈಜ್ಞಾನಿಕ ವಿಧಾನವೆಂದು ಒತ್ತಾಯಿಸಿದವು. ರಾಷ್ಟ್ರೀಯ ಕಾರ್ಮಿಕ ಆಯೋಗವು ಈ ಬೇಡಿಕೆಯನ್ನು ಗಮನಕ್ಕೆ ತೆಗೆದುಕೊಂಡಿತ್ತು. ಪರಿಶೀಲನೆಗಾಗಿ ಕಾರ್ಯವಿಧಾನದ ಸುಧಾರಣೆಗೆ ಸುದೀರ್ಘ ಹೋರಾಟದ ನಂತರ, ಅಂತಿಮವಾಗಿ ಹತ್ತು ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸರ್ಕಾರದ ನಡುವೆ ಜುಲೈ 31, 1986 ರಂದು ಮಾರ್ಪಡಿಸಿದ ಪರಿಶೀಲನೆಯ ಕಾರ್ಯವಿಧಾನದ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಯಿತು.

1969 ರಲ್ಲಿ ಸಂಯುಕ್ತ ರಂಗ(ಯುನೈಟೆಡ್ ಫ್ರಂಟ್) ಆಳ್ವಿಕೆಯಲ್ಲಿ ಪಶ್ಚಿಮ ಬಂಗಾಳ ಅಸೆಂಬ್ಲಿ ಸಾಮೂಹಿಕ ಚೌಕಾಶಿ ಪ್ರತಿನಿಧಿಗಳನ್ನು ಗುರುತಿಸಲು ರಹಸ್ಯ ಮತಚಲಾವಣೆಯ ವ್ಯವಸ್ಥೆ ಮಾಡುವ ಮಸೂದೆಯನ್ನು ಅಂಗೀಕರಿಸಿತು, ಆದರೆ ಮಸೂದೆಗೆ 13 ವರ್ಷಗಳ ನಂತರವೂ, 1982 ರಲ್ಲಿ ರಾಷ್ಟ್ರಪತಿಗಳ ಒಪ್ಪಿಗೆಯನ್ನು ನಿರಾಕರಿಸಲಾಯಿತು.

ವಾಸ್ತವವಾಗಿ, 1977 ರಲ್ಲಿ ಅಧಿಕಾರಕ್ಕೆ ಬಂದ ನಂತರ ಪಶ್ಚಿಮ ಬಂಗಾಳ ಎಡರಂಗ ಸರ್ಕಾರವು ಸಾಂವಿಧಾನಿಕ ಮಿತಿಗಳಲ್ಲಿ ಕೇಂದ್ರಕ್ಕಿಂತ ಭಿನ್ನವಾದ ಕಾರ್ಮಿಕ ನೀತಿಯನ್ನು ಅನುಸರಿಸಿತು. ಪ್ರತಿಯೊಂದು ವಿಷಯದಲ್ಲೂ ಪಶ್ಚಿಮ ಬಂಗಾಳ ಸರ್ಕಾರ ಮತ್ತು ಕೇರಳದ ಎಡ ಪ್ರಜಾಪ್ರಭುತ್ವರಂಗ ಸರ್ಕಾರ ಮತ್ತು ತ್ರಿಪುರದ ಎಡರಂಗ ಸರ್ಕಾರ ಕೂಡ ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡಲು ಪ್ರಯತ್ನಿಸಿದವು.

ಪ್ರಧಾನಿ ಇಂದಿರಾಗಾಂಧಿ ಹತ್ಯೆ

1984 ರ ವರ್ಷವು ರಾಷ್ಟ್ರೀಯ ದುರಂತಗಳ ಸರಣಿಯೊಂದಿಗೆ ಮುಕ್ತಾಯವಾಯಿತು. ಅಕ್ಟೋಬರ್ 31, 1984 ರಂದು ಪ್ರಧಾನಿ ಇಂದಿರಾ ಗಾಂಧಿಯನ್ನು ಅವರ ಸ್ವಂತ ಭದ್ರತಾ ಸಿಬ್ಬಂದಿಯ ಇಬ್ಬರು ಹತ್ಯೆ ಮಾಡಿದರು. ನಂತರದ ತನಿಖೆಯಲ್ಲಿ ಅವರಿಗೆ ಖಾಲಿಸ್ತಾನಿ ಭಯೋತ್ಪಾದಕರೊಂದಿಗೆ ಒಡನಾಟವಿತ್ತು ಎಂದು ಸಾಬೀತಾಯಿತು. ಆದರೆ ಪ್ರಧಾನ ಮಂತ್ರಿಯವರ ಈ ವಿಶ್ವಾಸಘಾತುಕ ಹತ್ಯೆಯು, ಭೀಭತ್ಸಹತ್ಯೆಗಳ ಸರಣಿ ಯನ್ನು ಉಂಟುಮಾಡಿತು ಮತ್ತು ಸಿಖ್ ಸಮುದಾಯದ ಹಲವಾರು ಸಾವಿರ ಜನರು ಈ ಘೋರ ಪ್ರತೀಕಾರದ ಕೃತ್ಯದಲ್ಲಿ ಕೊಲ್ಲಲ್ಪಟ್ಟರು ಅಥವಾ ಗಾಯಗೊಂಡರು. ಕಾರ್ಮಿಕ ವರ್ಗಕ್ಕೆ ಇದು ಒಂದು ಭ್ರಾತೃಹತ್ಯೆಯ ದುರಂತವಾಗಿತ್ತು.


ಭೋಪಾಲ್‌ನಲ್ಲಿ ಹತ್ಯಾಕಾಂಡ – ಯೂನಿಯನ್ ಕಾರ್ಬೈಡ್ ಅನಿಲ ಸೋರಿಕೆ ದುರಂತ

ಕಾರ್ಮಿಕ ವರ್ಗಕ್ಕೆ ಸಂಬಂಧಿಸಿದಂತೆ, ಡಿಸೆಂಬರ್ 3, 1984 ರಂದು ಭೋಪಾಲ್‌ನ ಯೂನಿಯನ್ ಕಾರ್ಬೈಡ್ ಸ್ಥಾವರದಲ್ಲಿ ಸಂಭವಿಸಿದ ಅನಿಲ ಸೋರಿಕೆ ಹತ್ಯಾಕಾಂಡವು ಭಾರತದ ಯಾವುದೇ ಕೈಗಾರಿಕೆಯಲ್ಲಿ ಸಂಭವಿಸಿದ ಅತ್ಯಂತ ಭೀಕರ ದುರಂತವಾಗಿತ್ತು. 2500 ಕ್ಕೂ ಹೆಚ್ಚು ಜನರು ಸತ್ತರು ಮತ್ತು ಸಾವಿರಾರು ಜನರು ಅಂಗವಿಕಲರಾದರು ಮತ್ತು ಅವರಲ್ಲಿ ಹೆಚ್ಚಿನವರು ಶಾಶ್ವತವಾಗಿ. ಭಾರತದ ಟ್ರೇಡ್ ಯೂನಿಯನ್ ಆಂದೋಲನವು ಬಹಳ ಹಿಂದಿನಿಂದಲೂ ವಿವಿಧ ಕೈಗಾರಿಕೆಗಳಲ್ಲಿನ ಅಸಮರ್ಪಕ ಸುರಕ್ಷತಾ ಕ್ರಮಗಳು ಮತ್ತು ನಿಯಮಗಳ ಬಗ್ಗೆ ವಿಶೇಷವಾಗಿ ಅಪಾಯಕಾರಿ. ಕೈಗಾರಿಕಾ ಅಪಘಾತಗಳ ಪ್ರಮಾಣ ಭಾರತದಲ್ಲಿ ಸಾಕಷ್ಟು ಹೆಚ್ಚುತ್ತಿರುವ ಕುರಿತು ಸರ್ಕಾರದ ಗಮನವನ್ನು ಸೆಳೆಯುತ್ತ ಬಂದಿತ್ತು.

ಪ್ಯಾರಿಸ್ ಕಮ್ಯೂನಿನ 150ನೆಯ ವಾರ್ಷಿಕೋತ್ಸವವನ್ನು ಜಗತ್ತಿನಾದ್ಯಂತ ವಿಶಿಷ್ಟವಾಗಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಜಗತ್ತಿನ 15 ದೇಶಗಳ ಮತ್ತು ಹಲವು ಪ್ರದೇಶಗಳ ಭಾಷೆಗಳ' 27 ಪ್ರಗತಿಪರ ಪ್ರಕಾಶನಗಳು ಜಂಟಿಯಾಗಿ 'ಪ್ಯಾರಿಸ್ ಕಮ್ಯೂನ್ 150' ಎಂಬ ಒಂದೇ ಇ-ಪುಸ್ತಕವನ್ನು 18 ಭಾಷೆಗಳಲ್ಲಿ ಒಂದೇ ಡಿಸೈನಿನ ಕವರ್ ಪುಟಗಳೊಂದಿಗೆ ಒಂದೇ ದಿನ ಮೇ 28, 2021ರಂದು ಪ್ರಕಟಿಸುತ್ತಿವೆ.

ಕಾರ್ಮಿಕರ ಮೊದಲ ಕ್ರಾಂತಿಗೆ 150ರ ಸಂಭ್ರಮ

ವಸಂತರಾಜ ಎನ್.ಕೆ.



ಮೇ 28, 2021, ಪ್ಯಾರಿಸ್ ಕಮ್ಯೂನಿನ 150ನೆಯ ವಾರ್ಷಿಕೋತ್ಸವವನ್ನು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಪ್ಯಾರಿಸ್ಸಿನ ಕಾರ್ಮಿಕರು 1871ರ ಮಾರ್ಚ್ 18 ರಂದು ಆಳುತ್ತಿದ್ದ ಬಂಡವಾಳಶಾಹಿಗಳನ್ನು ಓಡಿಸಿ ಸ್ಥಾಪಿಸಿದ ಕಾರ್ಮಿಕರ ಆಡಳಿತವನ್ನು "ಪ್ಯಾರಿಸ್ ಕಮ್ಯೂನ್" ಎಂದು ಕರೆದರು. "ಪ್ಯಾರಿಸ್ ಕಮ್ಯೂನ್" ಜಗತ್ತಿನಲ್ಲೇ ಮೊದಲ ಕಾರ್ಮಿಕರ ಪ್ರಭುತ್ವ ಮತ್ತು ಕ್ರಾಂತಿ ಎಂದೇ ಪ್ರಸಿದ್ಧವಾಗಿದ್ದರೂ, ಅದು ಇನ್ನೂ ಹಲವು ರೀತಿಯಲ್ಲಿ ಚಿರಂತನ ಮಹತ್ವವನ್ನು ಪಡೆದಿದೆ. "ಪ್ಯಾರಿಸ್ ಕಮ್ಯೂನ್" ಎಂಬ ಕಾರ್ಮಿಕರ ಕ್ರಾಂತಿಕಾರಿ ಪ್ರಭುತ್ವವು (ಮೇ 28, 1871ರಂದು ಪತನವಾಗುವ ಮೊದಲು) ಕೇವಲ 72 ದಿನಗಳ ಕಾಲ ಮಾತ್ರ ಬಾಳಿತಾದರೂ, ಅದು ತನ್ನ ಸಾಧನೆ-ವೈಫಲ್ಯಗಳು ಬಲ-ದೌರ್ಬಲ್ಯಗಳು ಎರಡರಿಂದಾಗಿಯೂ ಆ ನಂತರದ ಕಾರ್ಮಿಕ ಪ್ರಭುತ್ವ ಮತ್ತು ಕ್ರಾಂತಿಗಳಿಗೆ ಸ್ಫೂರ್ತಿಯ ಚಿಲುಮೆಯೂ ದಾರಿದೀವಿಗೆಯೂ ಆಯಿತು.

ಮಾರ್ಕ್ಸ್-ಏಂಗೆಲ್ಸ್ ಕಮ್ಯೂನಿನ ಹೋರಾಟಕ್ಕೆ ಸಕ್ರಿಯವಾದ ಭೌತಿಕ ಮತ್ತು ಸೈದ್ಧಾಂತಿಕ ಬೆಂಬಲ ಕೊಟ್ಟಿದ್ದಲ್ಲದೆ, ಅದರ ಅನುಭವವನ್ನು ಕ್ರೋಢೀಕರಿಸಿ, ಮುಂದಿನ ಕ್ರಾಂತಿಗಳಿಗೆ ದಾರಿದೀವಿಗೆ ಆಗುವಂತೆ ಸಿದ್ಧಾಂತೀಕರಿಸಿ "ಫ್ರಾನ್ಸಿನ ಅಂತರ್ಯುದ್ಧ" ಎಂಬ ಕೃತಿಯನ್ನು ಪ್ರಕಟಿಸಿದರು. ಪ್ಯಾರಿಸ್ ಕಮ್ಯೂನನ್ನು ಸ್ಥಾಪಿಸಿದ ಪ್ಯಾರಿಸಿನ ಕಾರ್ಮಿಕರು "ಸ್ವರ್ಗದ ಬಾಗಿಲು ತೆಗೆದರು" ಎಂದು ಅವರ ಕೆಚ್ಚನ್ನು ಮಾರ್ಕ್ಸ್ ಮೆಚ್ಚಿಕೊಂಡಿದ್ದಾರೆ. ಈ ಕೃತಿಯ ಅಧ್ಯಯನ ಮಾಡಿದವರೆಲ್ಲರೂ, ಪ್ರಮುಖವಾಗಿ ಲೆನಿನ್ ಮತ್ತು ಮಾವೋ, ಪ್ಯಾರಿಸ್ ಕಮ್ಯೂನ್‌ನ ಎಲ್ಲಾ ಸಕಾರಾತ್ಮಕ ಹಾಗೂ ನಕಾರಾತ್ಮಕ ಪಾಠಗಳನ್ನು ಸಫಲ ಕ್ರಾಂತಿಗಳಲ್ಲಿ ತಮ್ಮ ದೇಶ-ಕಾಲಕ್ಕೆ ಅನುಸಾರವಾಗಿ ಅನ್ವಯಿಸಿದರು. ಜಗತ್ತಿನಾದ್ಯಂತ ಕಾರ್ಮಿಕರ ಪ್ರಭುತ್ವ ಮತ್ತು ಸಮತಾವಾದಿ ಸಮಾಜ ಕಟ್ಟುವ ಕನಸು ಹೊತ್ತ ಎಲ್ಲರಿಗೂ ಇಂದಿಗೂ ಅದು ಮೈನವಿರೇಳಿಸುವ ನೆನಪು.

ಪ್ಯಾರಿಸ್ ಕಮ್ಯೂನಿನ 150ನೆಯ ವಾರ್ಷಿಕೋತ್ಸವವನ್ನು ಜಗತ್ತಿನಾದ್ಯಂತ ವಿಶಿಷ್ಟವಾಗಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಜಗತ್ತಿನ 15 ದೇಶಗಳ ಮತ್ತು ಹಲವು ಪ್ರದೇಶಗಳ ಭಾಷೆಗಳ 27 ಪ್ರಗತಿಪರ ಪ್ರಕಾಶನಗಳು ಜಂಟಿಯಾಗಿ 'ಪ್ಯಾರಿಸ್ ಕಮ್ಯೂನ್ 150' ಎಂಬ ಒಂದೇ ಇ-ಪುಸ್ತಕವನ್ನು 18 ಭಾಷೆಗಳಲ್ಲಿ ಒಂದೇ ಡಿಸೈನಿನ ಕವರ್ ಪುಟಗಳೊಂದಿಗೆ ಒಂದೇ ದಿನ ಮೇ 28, 2021ರಂದು ಪ್ರಕಟಿಸುತ್ತಿವೆ. ಬಾಂಗ್ಲಾ, ಹಿಂದಿ, ಕನ್ನಡ, ಮಲಯಾಳಂ, ಮರಾಠಿ, ತಮಿಳು, ತೆಲುಗು ಇತ್ಯಾದಿ ಭಾರತೀಯ ಉಪಖಂಡದ ಭಾಷೆಗಳು, ಇಂಡೋನೇಶ್ಯನ್, ಟರ್ಕಿ, ಲ್ಯಾಟಿನ್ ಅಮೆರಿಕಾ ಮತ್ತು ಯುರೋಪಿನ ಪ್ರಮುಖ ಭಾಷೆಗಳಾದ ಸ್ಪಾನಿಷ್, ಪೋರ್ಚುಗೀಸ್, ಸ್ಲೊವೆನಿಯನ್ ಮತ್ತು ಇಂಗ್ಲಿಷ್ ಸೇರಿದಂತೆ 18 ಭಾಷೆಗಳಲ್ಲಿ ಈ ಪುಸ್ತಕ ಪ್ರಕಟವಾಗುತ್ತಿದೆ.

ಅಮೆರಿಕದ ಟ್ರೈಕಾಂಟಿನೆಂಟಲ್ ಇನ್‌ಸ್ಟಿಟ್ಯೂಟ್ ಮತ್ತು ಭಾರತದ ಲೆಫ್ಟ್ ವರ್ಡ್ ನಾಯಕತ್ವದಲ್ಲಿ ವಾಮ ಪ್ರಕಾಶನ, ಚಿಂತಾ, ಪ್ರಜಾಶಕ್ತಿ, ನವತೆಲಂಗಾಣ, ಭಾರತಿ ಪುಸ್ತಕಾಲಯ, ಕ್ರಿಯಾ ಮಾಧ್ಯಮ ಸೇರಿದಂತೆ ಈ 27 ಪ್ರಕಾಶನಗಳು (ಇವುಗಳ ಹೆಸರು ಮತ್ತು ಲೊಗೊಗಳು ಈ ಪುಸ್ತಕದ ಒಳ ರಕ್ಷಾ ಪುಟಗಳಲ್ಲಿವೆ) ಒಂದು ವೇದಿಕೆಯನ್ನು ರಚಿಸಿಕೊಂಡು ಪ್ರತಿ ವರ್ಷ ಅಂತರ್ರಾಷ್ಟ್ರೀಯ ಸೌಹಾರ್ದತೆಯನ್ನು ಬಿಂಬಿಸುವ ಇಂತಹ ಒಂದು ವಿಶಿಷ್ಟ ಕಾರ್ಯಾಚರಣೆಯನ್ನು ಸಂಘಟಿಸಲಾರಂಭಿಸಿವೆ. ಕಳೆದ ಕೆಲವು ವರ್ಷಗಳಲ್ಲಿ ಲೆನಿನ್ 150ನೆಯ ಹುಟ್ಟುದಿನ ಮತ್ತು ಚೆ ಹತ್ಯಾ ದಿನದಂದು ಇಂತಹ ಜಂಟಿ ಪ್ರಕಟಣೆಗಳನ್ನು ಮಾಡಲಾಗಿತ್ತು.

ಈ ಪುಸ್ತಕದ ಕವರ್ ಡಿಸೈನ್ ಗಾಗಿ ಈ 27 ಪ್ರಕಾಶಕರ ವೇದಿಕೆ ಒಂದು ಅಂತರ್ರಾಷ್ಟ್ರೀಯ ಕಲಾ ಸ್ಪರ್ಧೆ ಏರ್ಪಡಿಸಿತ್ತು. ಈ ಕರೆಗೆ ಓಗೊಟ್ಟು ನೂರಾರು ಕಲಾವಿದರು ತಮ್ಮ ಕೃತಿಗಳನ್ನು ಕಳಿಸಿದ್ದರು. ಇವುಗಳಲ್ಲಿ 41 ಕೃತಿಗಳನ್ನು ಆರಿಸಿ ಒಂದು ವೆಬ್ ಕಲಾಪ್ರದರ್ಶನವನ್ನು ಮೇ 21ರಿಂದ ಏರ್ಪಡಿಸಲಾಯಿತು. ಕರ್ನಾಟಕದಿಂದ ಕ್ರಿಯಾದ ಡಿಸೈನರ್ ಕಲಾವಿದ ಎಂ.ರಾಮು ಮತ್ತು ರೈತ ಸಂಘದ ನಾಯಕ, ಛಾಯಾಚಿತ್ರಗ್ರಾಹಕರು, ಬರಹಗಾರರೂ ಆದ ಹಾಸನದ ನವೀನ್ ಕುಮಾರ್ ಭಾಗವಹಿಸಿದ್ದರು. ಅವರ ತಲಾ ಒಂದು ಕೃತಿ ಆಯ್ಕೆಯಾಗಿ ವೆಬ್ ಕಲಾಪ್ರದರ್ಶನದಲ್ಲಿ ಪ್ರದರ್ಶಿತವಾಗಿದೆ. ಈ 41 ಕೃತಿಗಳಲ್ಲಿ ಕ್ಯೂಬಾದ ಕಲಾವಿದ ರೊಡ್ರಿಗಸ್ ಅಗಿಲಾರ್ ಅವರ ಕೃತಿಯನ್ನು ಮುಖಪುಟಕ್ಕೆ ಆಯ್ಕೆ ಮಾಡಲಾಯಿತು. ಹಿಂಪುಟಕ್ಕೆ ಭಾರತದ ಕಲಾವಿದ ಜುನೈನಾ ಮುಹಮ್ಮದ್ ಕೃತಿಯು ಆಯ್ಕೆಯಾಗಿದೆ. ಕಲಾಪ್ರದರ್ಶನದ 41 ಕೃತಿಗಳ ಕೊಲಾಜ್ ಮುಂದಿನ ಒಳರಕ್ಷಾಪುಟದಲ್ಲಿ ಕೊಡಲಾಗಿದೆ. ವಿವಿಧ ಭಾಷೆಗಳ ಮುಖಪುಟಗಳ ಕೊಲಾಜ್ ಮತ್ತು ರಾಮು ಮತ್ತು ನವೀನ್ ಅವರ ಡಿಸೈನುಗಳನ್ನು ಹಿಂದಿನ ಒಳರಕ್ಷಾಪುಟದಲ್ಲಿ ಕೊಡಲಾಗಿದೆ.




ಪ್ಯಾರಿಸ್ ಕಮ್ಯೂನಿನ ನೆನಪಿನ ಈ ಪುಸ್ತಕದಲ್ಲಿ ಅದರ ಪತನದ ಎರಡು ವಾರಗಳಲ್ಲಿ (ಜೂನ್ 12, 1871ರಂದು) ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಜನರಲ್ ಕೌನ್ಸಿಲ್ ನಲ್ಲಿ ಮಾರ್ಕ್ಸ್ ಮಾಡಿದ ಪ್ರಸಿದ್ಧ ಭಾಷಣದ ಅನುವಾದವಿದೆ. ಇದರಲ್ಲಿ ಕಮ್ಯೂನ್ ಉದಯವಾದ ಹಿನ್ನೆಲೆ, ಅದರ ಸಾಧನೆಗಳು-ವೈಫಲ್ಯಗಳು, ಅದು ಪತನ ಹೊಂದಲು ಕಾರಣಗಳು, ಅದರ ಮಹತ್ವ, ಅದರಿಂದ ಮುಂದಿನ ಕಾರ್ಮಿಕ ಕ್ರಾಂತಿಗಳು ಕಲಿಯಬೇಕಾದ ಪಾಠಗಳು, ಬೂರ್ಜ್ವಾ ಹಾಗೂ ಕಾರ್ಮಿಕ ಪ್ರಭುತ್ವದ ಸ್ವರೂಪಗಳ ಸೈದ್ಧಾಂತಿಕ ಗ್ರಹಿಕೆ – ಇತ್ಯಾದಿಗಳಿರುವ ಸಮಗ್ರ ಉಜ್ವಲ ವಿಶ್ಲೇಷಣೆಯಿದೆ. ಇದು ಆನಂತರ 'ಫ್ರಾನ್ಸಿನಲ್ಲಿ ಅಂತರ್ಯುದ್ಧ' ಎಂಬ ಹೆಸರಿನಲ್ಲಿ ಪ್ರಕಟವಾದ ಪುಸ್ತಕದ ಒಂದು ಅಧ್ಯಾಯ.

ಈ ಪುಸ್ತಕದಲ್ಲಿ ಕಮ್ಯೂನ್ ಕುರಿತು ಲೆನಿನ್ ತಮ್ಮ 'ಪ್ರಭುತ್ವ ಮತ್ತು ಕ್ರಾಂತಿ' ಪುಸ್ತಕದಲ್ಲಿ ಬರೆದ ಭಾಗ (ಅಧ್ಯಾಯ-3) ವನ್ನೂ ಕೊಡಲಾಗಿದೆ. ಮಾರ್ಕ್ಸ್ ಅವರ ಕಮ್ಯೂನಿನ ಉಜ್ವಲ ವಿಶ್ಲೇಷಣೆಯ ಪ್ರಮುಖ ಅಂಶಗಳ ಸಾರಾಂಶವನ್ನು ಮತ್ತೆ ಒತ್ತಿ ಹೇಳಿ, ಅದನ್ನು ವಿಕೃತಗೊಳಿಸಲು ಪ್ರಯತ್ನಿಸಿದ ಪಾರ್ಲಿಮೆಂಟರಿವಾದಿ ಪರಿಷ್ಕರಣವಾದಿಗಳ ಕಟು ವಿಮರ್ಶೆ ಮಾಡಿದ, ಆ ನಂತರದ ಕಾರ್ಮಿಕ ಚಳುವಳಿಯ ಅನುಭವ ಮತ್ತು ಅದರ ಆಧಾರದ ಮೇಲೆ ಸಮಕಾಲೀನಗೊಳಿಸಿದ ಕಮ್ಯೂನಿನ ಪಾಠಗಳ ಪ್ರಸ್ತುತತೆ – ಇವೆಲ್ಲದರ ಸಮಗ್ರ ನೋಟ ಇದರಲ್ಲಿದೆ.


'ಸ್ವರ್ಗದ ಬಾಗಿಲು ತೆರೆದ' ಪ್ಯಾರಿಸ್ ಕಮ್ಯೂನ್ ಕುರಿತು ಮಾರ್ಕ್ಸ್ ಮತ್ತು ಲೆನಿನ್ ವಿಶ್ಲೇಷಣೆಯನ್ನು ನೆನಪು ಮಾಡಿಕೊಳ್ಳುತ್ತಾ ಇಂದಿನ ಪ್ರಸ್ತುತತೆ ಕುರಿತು ವಿಜಯ ಪ್ರಶಾದ್ ಅವರ ದೀರ್ಘ ಪ್ರಸ್ತಾವನೆಯೂ ಇಲ್ಲಿದೆ.

ಇವಲ್ಲದೆ ಪ್ಯಾರಿಸ್ ಕಮ್ಯೂನಿನ ಮತ್ತು ಅದರ ಕುರಿತು ಹೊಮ್ಮಿದ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಈ ಪುಸ್ತಕ ಒಳಗೊಂಡಿದೆ. ಕಮ್ಯೂನಿನ ಭಾಗವಾಗಿದ್ದು, ಅದರ ಸಾಂಸ್ಕೃತಿಕ ನೀತಿಯನ್ನು ಮತ್ತು ಜನತಾ ಕಲೆಯ ಪರಿಕಲ್ಪನೆಯನ್ನು ರೂಪಿಸುವಲ್ಲಿ ಮುಂಚೂಣಿಯಲ್ಲಿದ್ದ, ಕಲಾವಿದರ ಫೆಡರೇಶನ್ನಿನ ಕೆಲಸ ಮತ್ತು ಕೊಡುಗೆಗಳ ಕುರಿತು ತಿಂಗ್ಸ್ ಚಾಕ್ ಬರೆದಿದ್ದಾರೆ. ಕಲಾವಿದರ ಫೆಡರೇಶನ್ನಿನ ಪ್ರಣಾಳಿಕೆಯೂ ಇದೆ.

ಪ್ರಸಿದ್ಧ ಕ್ರಾಂತಿಕಾರಿ ನಾಟಕಕಾರ, ಕವಿ ಬೆರ್ಟೋಲ್ಟ್ ಬ್ರೆಕ್ಟ್ ಬರೆದ 'ಕಮ್ಯೂನ್ ಧೀರರ ಸಂಕಲ್ಪ'ದ ಕುರಿತ ಮಾರ್ಮಿಕ ಕವನದ ಕನ್ನಡ ಅನುವಾದ ಇಲ್ಲಿದೆ. 'ಇಂಟರ್ ನ್ಯಾಸನಾಲ್' ಎಂದು ಪ್ರಸಿದ್ಧವಾದ ಜಗತ್ತಿನ ದುಡಿಯುವ ಜನರ, ಚಳುವಳಿಗಳ, ಕಮ್ಯುನಿಸ್ಟರ 'ನಾಡಗೀತೆ'ಯ ಬಹುಶಃ ಮೊದಲ ಕನ್ನಡ ಅನುವಾದವೂ ಇಲ್ಲಿದೆ. 'ಇಂಟರ್ ನ್ಯಾಸನಾಲ್' ಬರೆದ ಯುಜಿನ್ ಪೋಟಿಯೆರ್ ಒಬ್ಬ ಕಮ್ಯೂನ್ ಧೀರನಾಗಿದ್ದ. ಅವನ ಮತ್ತು ಅವನ ಪ್ರಸಿದ್ಧ ಹಾಡಿನ ಕುರಿತೂ ಇಲ್ಲಿದೆ. ಜತೆಗೆ ಪುಸ್ತಕದ ಉದ್ದಕ್ಕೂ 'ಇಂಟರ್ ನ್ಯಾಸನಾಲ್' ಸಂಗೀತ ಪತ್ಯವನ್ನು ವಿವಿಧ ಭಾಷೆಗಳಲ್ಲಿ ಈ ಹಾಡಿನ ಒಂದು ಸಾಲಿನ ಜೊತೆ ಕೊಡಲಾಗಿದೆ. ಬ್ರೆಕ್ಟ್ ಕವನವನ್ನು ಬಿ.ಪೀರ್ ಬಾಷ ಮತ್ತು 'ಇಂಟರ್ ನ್ಯಾಸನಾಲ್' ಕೆ.ನೀಲಾ ಅನುವಾದಿಸಿದ್ದಾರೆ.



ಎಂ. ರಾಮುರವರ ಕಲಾಕೃತಿ



ಹೆಚ್.ಆರ್. ನವೀನ್‌ಕುಮಾರ ರವರ ಕಲಾಕೃತಿ





JANASHAKTHI KANNADA VARA PATRIKE May 31-June 6, 2021 Price: Rs. 10/- Date of Publication: 28 May 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21













ಮೇ 26: "ಕರಾಳ ದಿನ"
ರಾಜ್ಯಾದ್ಯಂತ ಐತಿಹಾಸಿಕ ಕಾರ್ಯಾಚರಣೆ



































JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**